ಮೂರನೆಯ ಮಂಗರಸ ವಿರಚಿತ

ಶ್ರೀಪಾಲ ಚರಿತೆ

ಸಂಪಾದಕ

ಹ. ಕ. ರಾಜೇಗೌಡ



ಕನ್ನಡ ಅಧ್ಯಯನ ಸಂಸ್ಥೆ :: ಮೈಸೂರು ವಿಶ್ವವಿದ್ಯಾನಿಲಯ



ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–೩೨೨

ಪ್ರಾಚ್ಯಕಾವ್ಯ ಮಾಲೆ–೫೪

ಪ್ರಧಾನ ಸಂಪಾದಕ

ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ

ಎಸ್. ಬಸವಾರಾಧ್ಯ

ಮೂರನೆಯ ಮಂಗರಸ ವಿರಚಿತ

ಶ್ರೀಪಾಲ ಚರಿತೆ

ಮೂರನೆಯ ಮಂಗರಸ ವಿರಚಿತ

ಶ್ರೀಪಾಲ ಚರಿತೆ

ಸಂಪಾದಕ

ಹ. ಕ. ರಾಜೇಗೌಡ



ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
1977

SRIPALA CHARITE by Mangarasa III ; edited by H. K. Raje Gowda ; published by the Institute of Kannada Studies, Manasa Gangotri, University of Mysore, Mysore-570 006. First edition 1977 ; Pp. 168+59.

ಬೆಲೆ : ರೂ. 6–50

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-570 012

ಮುದ್ರಣ : ಶ್ರೀ ರಾಘವೇಂದ್ರ ಪ್ರಿಂಟರ್ಸ್, ಮೈಸೂರು–570 004

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. ೧೩೪೨ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಹಸ್ತಪ್ರತಿಯಾಗಿರುವ ರನ್ನನ 'ಗದಾಯುದ್ಧ'ದ ಹಸ್ತಪ್ರತಿಯಿಂದ ಹಿಡಿದು ೧೮೫೦ ರಲ್ಲಿ ಪ್ರತಿಮಾಡಲಾಗಿರುವ 'ಪ್ರಭಾವತಿ ಪರಿಣಯದ' ಹಸ್ತಪ್ರತಿಯವರೆಗೆ ಇಂದು ೫೦೦೦ ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ, ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ, ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು, ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ—ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾದ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನ

ಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. 'ಕಾವ್ಯಪ್ರಯೋಗಪರಿಣತಮತಿ'ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕುಕಂಡು, ಪೂಜಾರ್ಹವಾಗಿ, ಹಾಲುಂಡು ಮತ್ತೆ ಕತ್ತಲಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರಮಾಡಿ ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು, ಪರಿಷ್ಕರಿಸಿ ಸಂಪಾದಿಸುವ ಹೊಣೆಯನ್ನು ಹೊತ್ತಿದೆ ಈ ಸಂಸ್ಥೆಯ ಸಂಪಾದನ ವಿಭಾಗ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ, ಅವರ ನೆನಪಿಗಾಗಿ ಮಠಗಳು, ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕತೈಲ ಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (fumigation treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಆಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ

ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಮೇಲ್ಕಂಡ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ, ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು (ಒಂದುವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ!) ; ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿತೋರಿದಂತೆ ಅಥವಾ ಸೂಕ್ತ ಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು ಅರ್ಥಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾಸಂಶೋಧನಾಲಯದ

ಅಂಗವಾಗಿದ್ದಾಗ ಹೊರತಂದಿರುವ ೪೯ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯು ಸ್ಥಾಪನೆಯಾದ ಮೇಲೆ 'ಪ್ರಾಚ್ಯಕಾವ್ಯಮಾಲೆ'ಯ ಹೆಸರಿನಲ್ಲಿ ಈಗಾಗಲೇ ೫೩ ಗ್ರಂಥಗಳನ್ನು ಹೊರತರಲಾಗಿದೆ. ಬೆಳಕುಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಹೊರತರಲು ಸಂಸ್ಥೆ ಸತತವಾಗಿ ಶ್ರಮಿಸುತ್ತಿದೆ.

ಇದುವರೆಗೂ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ್ದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನುಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿಸಲು ಯೋಜಿಸಲಾಗಿದೆ. ಇದರಿಂದ ಪ್ರಕಟನೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಮೂರನೆಯ ಮಂಗರಸನ 'ಶ್ರೀಪಾಲ ಚರಿತೆ' ಎಂಬ ಈ ಅಪ್ರಕಟಿತ ಕೃತಿಯನ್ನು ಶ್ರದ್ಧೆಯಿಂದ ಸಂಪಾದಿಸಿಕೊಟ್ಟ ಸಂಪಾದನ ವಿಭಾಗದ ಸಂಶೋಧನ ಸಹಾಯಕ ಶ್ರೀ ಹ. ಕ. ರಾಜೇಗೌಡ ಅವರಿಗೂ, ಬೇಗನೆ ಅಚ್ಚು ಮಾಡಿಕೊಟ್ಟ ಶ್ರೀ ರಾಘವೇಂದ್ರ ಪ್ರಿಂಟರ್ಸ್ ಅವರಿಗೂ ನಮ್ಮ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಕನ್ನಡ ಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ ವಿಶಿಷ್ಟವಾದುದು. ಗುಣದಲ್ಲಿಯೂ ಗಾತ್ರದಲ್ಲಿಯೂ ಮಿಗಿಲಾದ ಕೃತಿಗಳನ್ನು ರಚಿಸಿದವರಲ್ಲಿ ಜೈನರೇ ಮೊದಲಿಗರು. ಪಂಪ ಪೊನ್ನ ರನ್ನ ಇವರು ರತ್ನತ್ರಯರೆಂದೂ ಜಿನಸಮಯದೀಪಕರೆಂದೂ ಪರಿಕೀರ್ತಿತರಾಗಿದ್ದಾರೆ. ಪೊನ್ನ ರನ್ನ ಜನ್ನ ಇವರು ಕವಿಚಕ್ರವರ್ತಿಗಳೆಂದೂ ಖ್ಯಾತಿವೆತ್ತಿದ್ದಾರೆ. ಇವರೆಲ್ಲರೂ ತಮ್ಮ ಕೃತಿಗಳಲ್ಲಿ ಧರ್ಮವನ್ನೂ ಕಾವ್ಯಧರ್ಮವನ್ನೂ ಮೆರೆದಿದ್ದಾರೆ. ಈ ಪರಂಪರೆಗೆ ಸೇರಿದವನು ಕ್ರಿ. ಶ. 1508 ರಲ್ಲಿದ್ದ ಮೂರನೆಯ ಮಂಗರಸ.

ಮಂಗರಸ ಜೈನಕವಿ. ಈತನ ಪಿತಾಮಹ ಮಾಧವ. ತಂದೆ ಕಲ್ಲಹಳ್ಳಿಯ ವಿಜಯ ಭೂಪಾಲ. ತಾಯಿ ದೇವಿಲೆ. ಗುರು ಚಿಕ್ಕಪ್ರಭೇಂದು. ಈತನಿಗೆ ಪ್ರಭುರಾಜ, ಪ್ರಭುಕುಲ ರತ್ನದೀಪ ಎಂಬ ಬಿರುದುಗಳಿದ್ದಂತೆ ತಿಳಿದು ಬರುತ್ತದೆ. ಈತನು ಹಲವಾರು ಪ್ರಾಚೀನ ಕವಿಗಳನ್ನು ಸ್ಮರಿಸಿದ್ದಾನೆ. ಮಂಗರಸ ಕಲ್ಲಹಳ್ಳಿಯ ರಾಜನಾಗಿದ್ದನೆಂದೂ ಪರಮಜಿನ ಭಕ್ತನಾಗಿದ್ದನೆಂದೂ ಈತನ ಕಾವ್ಯದಿಂದಲೇ ತಿಳಿದುಬರುತ್ತದೆ. ಈತನ ಪೂರ್ವಜರೂ ಸಹ ರಾಜಪರಂಪರೆಗೆ ಸೇರಿದ್ದರು ಎಂಬುದಕ್ಕೆ ಕಾವ್ಯ ಮತ್ತು ಶಾಸನಾಧಾರಗಳು ಸಿಕ್ಕುತ್ತವೆ. ಈ ಸಂಬಂಧವಾಗಿ ಹಲವಾರು ಐತಿಹ್ಯಗಳೂ ಹುಟ್ಟಿಕೊಂಡಿವೆ.

ಮಂಗರಸ ಶ್ರೀ ಪಾಲ ಚರಿತೆಯ ಆದಿಯಲ್ಲಿ ವೀರನಾಥ, ಸಿದ್ಧಾದಿಗಳು, ನವಕೋಟಿ ತಪಸ್ವಿಗಳು, ಸುಭದ್ರ, ಪೂಜ್ಯಪಾದ, ಭದ್ರಬಾಹು, ಬಾಹುಬಲಿ, ಗೌತಮ, ಗುಣಭದ್ರ, ಕವಿಪರಮೇಷ್ಠಿ ಇವರೇ ಮೊದಲಾದವರನ್ನು ಭಕ್ತಿಯಿಂದ ಸ್ಮರಿಸಿದ್ದಾನೆ. ಶ್ರೀಪಾಲ ಚರಿತೆ ಸಾಂಗತ್ಯದಲ್ಲಿದೆ. ಇದರಲ್ಲಿ 14 ಸಂಧಿಗಳೂ 1527 ಪದ್ಯಗಳೂ ಇವೆ. ಪುಂಡರೀಕಿಣೀಪುರದ ದೊರೆಯಾದ ಗುಣಪಾಲನ ಮಗ ಶ್ರೀಪಾಲನ ಕಥೆಯನ್ನು ಈ ಕೃತಿಯಲ್ಲಿ ಚಿತ್ರಿಸಲಾಗಿದೆ. ಕವಿ—

ಎಲ್ಲವರನು ಮೆಚ್ಚಿಸುವರೆ ನಾ ಪೇಳ್ವು
ದಿಲ್ಲ ನಿರ್ವಾಣವಲ್ಲಭೆಗೆ
ಬಲ್ಲಹನಾದ ಮಹಾತ್ಮನ ಕಥೆಯಿದ
ನುಲ್ಲಸದಿಂ ಕೇಳಿ ಜನರು

ಎಂದು ತನ್ನ ಕಾವ್ಯದ ಪ್ರಾರಂಭದಲ್ಲಿ ಹೇಳಿದ್ದಾನೆ. ಮತ್ತು ಈ ಕಾವ್ಯದ ಉತ್ಕೃಷ್ಟತೆಯನ್ನು—

ಇದು ಭಾವಕಜನ ಕರ್ಣವಿಭೂಷಣ
ಮಿದು ರಸಿಕರ ಚಿತ್ತದೀಪಿಕ
ಇದು ವಾಣೀಮುಖ ಮಾಣಿಕ್ಯಮುಕುರ ಮ
ತ್ತಿದು ಶೃಂಗಾರ ಸುಧಾಬ್ಧಿ

ಹೀಗೆ ಹೇಳಿಕೊಂಡಿದ್ದಾನೆ. ಈತನು ವರ್ಣನೆಗಳಲ್ಲಿ ಪ್ರಾಚೀನ ಸಂಪ್ರದಾಯವನ್ನೇ ಅನುಸರಿಸಿದ್ದರೂ ಹಲವಾರೆಡೆ ತನ್ನ ಪಾಂಡಿತ್ಯವನ್ನೂ ಪ್ರತಿಭೆಯನ್ನೂ ಪ್ರದರ್ಶಿಸಿದ್ದಾನೆ.

ಮಂಗರಸ ಜಯನೃಪಕಾವ್ಯ, ಪ್ರಭಂಜನಚರಿತೆ, ಶ್ರೀಪಾಲ ಚರಿತೆ, ನೇಮಿಜಿನೇಶ ಸಂಗತಿ, ಸಮ್ಯಕ್ತ್ವಕೌಮುದಿ, ಸೂಪಶಾಸ್ತ್ರ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಪ್ರಭಂಜನಚರಿತೆ ಇನ್ನೂ ಅಚ್ಚಾಗಿಲ್ಲ.

ಮಂಗರಸ ಷಟ್ಪದಿಯಲ್ಲೂ ಕೃತಿಗಳನ್ನು ರಚಿಸಬಲ್ಲ ; ಸಾಂಗತ್ಯದಲ್ಲೂ ಕೃತಿಗಳನ್ನು ರಚಿಸಬಲ್ಲ. ಲೌಕಿಕ-ಆಗಮಿಕ ಕಾವ್ಯಗಳನ್ನೂ ಬರೆಯಬಲ್ಲ ; ಶಾಸ್ತ್ರ ವಿಷಯವನ್ನೂ ಪ್ರತಿಪಾದಿಸಬಲ್ಲ. ಈತನ ಸೂಪಶಾಸ್ತ್ರ ಕನ್ನಡ ಸಾಹಿತ್ಯದ ಒಂದು ವಿಶಿಷ್ಟಕೃತಿ. ಈ ಎಲ್ಲ ದೃಷ್ಟಿಗಳಿಂದ ಮಂಗರಸ ವೈವಿಧ್ಯಪೂರ್ಣನಾದ ಕವಿಯಾಗಿದ್ದಾನೆ.

ಮಂಗರಸ ಮತ್ತು ಆತನ ಕೃತಿಗಳ ಬಗ್ಗೆ ಆಕರ ಸಂಶೋಧನೆ ತೌಲನಿಕ ಅಧ್ಯಯನ ನಡೆಸುವವರಿಗೆ ಶ್ರೀಪಾಲ ಚರಿತೆಯ ಪ್ರಕಟಣೆಯಿಂದ ಹೆಚ್ಚು ಪ್ರಯೋಜನ ವಾಗಬಹುದೆಂದು ನಿರೀಕ್ಷಿಸಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು.

ಎನ್. ಬಸವಾರಾಧ್ಯ
ವಿಭಾಗ ಸಂಪಾದಕ

ವಿಷಯಾನುಕ್ರಮಣಿಕೆ

ಪೀಠಿಕೆ

ಶ್ರೀಪಾಲಚರಿತೆಯನ್ನು ರಚಿಸಿದ ಕವಿ ಮೂರನೆಯ ಮಂಗರಸ. ಇವನು ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ಚಿಲಕುಂದ ಹೋಬಳಿಯಲ್ಲಿರುವ ಕಲ್ಲಹಳ್ಳಿಯವನು. ಮಂಗರಸನು ಪಂಚ ಜೈನ ಕಾವ್ಯಗಳನ್ನು ಪಾಕವಿಧಾನಗಳನ್ನು ಕುರಿತ ಒಂದು ಸೂಪಶಾಸ್ತ್ರವನ್ನು ಬರೆದಿದ್ದಾನೆ. ಈ ಆರೂ ಕೃತಿಗಳನ್ನು ಆರು ಸಂಸ್ಕೃತ ಗ್ರಂಥಗಳನ್ನು ಆಧರಿಸಿ ಮಾಡಿದ್ದಾನೆಂದು ತಿಳಿದುಬರುತ್ತದೆ. ಆದರೆ ಮಂಗರಸನ ಕೃತಿಗಳು ಅನುವಾದಗಳಲ್ಲ. ಸಂಸ್ಕೃತ ಮೂಲದಿಂದ ಕಥೆಯನ್ನು ತೆಗೆದುಕೊಂಡು ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾದವು. ಮೂರನೆಯ ಮಂಗರಸನ ಆರು ಕೃತಿಗಳಲ್ಲಿ ಶ್ರೀಪಾಲಚರಿತೆಯೂ ಒಂದು. ಇದರಲ್ಲಿ ಪುಷ್ಕಳಾವತಿಯ ರಾಜನಾದ ಗುಣಪಾಲನ ಮಗ ಶ್ರೀಪಾಲನ ಅಭ್ಯುದಯದ ಕಥೆ ಹೇಳಿದೆ. ಮಂಗರಸನು ಕಲ್ಲಹಳ್ಳಿಯ ರಾಜನೆಂದು ತಿಳಿದುಬರುತ್ತದೆ. ಕವಿಯೆ ತನ್ನ ವಿಷಯವನ್ನು ಶ್ರೀಪಾಲಚರಿತೆಯಲ್ಲಿ ಹೀಗೆ ಹೇಳಿಕೊಂಡಿರುತ್ತಾನೆ.

ವಿನುತಮಪ್ಪುದ್ಧವಕುಲಚೂಡಾಮಣಿ
ಘನತರ ಶಾರ್ದೂಲಾಂಕ
ಎನಿಸಿ ರಂಜಿಪ ಹೊಸವೃತ್ತಿಯ ಪ್ರಭು ನವ
ಮನಸಿಜ ರವಿನಿಭತೇಜ

ಸುರಭಿ ಸದೃಶದಾನಿ ಸುರುಚಿರಗುಣಸಿಧಿ
ಯುರುತರಭೋಗಸಂಯುತನು
ಸುರಪುರಕೆಣೆಯೆನಿಸುವ ಕಲ್ಲಹಳ್ಳಿಯ
ಗರುವ ವಿಜಯಭೂವರನ

ಆತನ ನಿಜನಂದನನಭಿನವಚಿತ್ತ
ಜಾತನುಜ್ವಲ ಕೀರ್ತಿಯುತನು
ಭೂತಳಪತಿ ಜಿನಭಕ್ತ ಮಂಗರಸ ಸಾ
ನೋತುಪೇಳಿದ ನೀ ಕೃತಿಯ

ಮೇಲಿನ ಪದ್ಯಗಳ ಹೇಳಿಕೆಯಂತೆ ಮಂಗರಸನು ಕಲ್ಲಹಳ್ಳಿಯ ರಾಜನಾದ [illegible] ಕುಲ ಚೂಡಾಮಣಿಯೆನಿಸಿದ ವಿಜಯಭೂಪಾಲನ ಮಗ. ಈತ ತನ್ನನ್ನು ಕುರಿತು "ಭೂತಳಪತಿ" ಎಂದು ಕರೆದುಕೊಂಡಿರುವುದರಿಂದ ಶ್ರೀಪಾಲಚರಿತೆಯ ರಚನಾ ಕಾಲದಲ್ಲಿ ಈತ ರಾಜನಾಗಿದ್ದನೆಂದು ತಿಳಿಯುತ್ತದೆ. ಇವನು [illegible]

ಉಜ್ವಲ ಕೀರ್ತಿಯುತ, ಅಭಿನವಮನ್ಮಥ, ಜಿನಭಕ್ತ ಎಂದೂ ಹೇಳಿದ್ದಾನೆ. ಆದುದರಿಂದ ಮೂರನೆಯ ಮಂಗರಸನ ಜೀವನ ವಿಚಾರಗಳಲ್ಲಿ ಯಾವ ತೊಡಕೂ ಕಂಡುಬರುವುದಿಲ್ಲ.

ಮೂರನೆಯ ಮಂಗರಸನನ್ನು ಕುರಿತು ಬರೆಯುತ್ತ ಕವಿ ಚರಿತೆಕಾರರು “ ಇವನು ಜೈನಕವಿ, ಇವನ ಪಿತಾಮಹ ಮಾಧವ. ಯದುವಂಶದ ಮಹಾಮಂಡಲೇಶ್ವರ ಚಂಗಾಳ ನೃಪರ ಸಚಿವ ಕುಲೋದ್ಭವನಾದ ಉದ್ಧವಕುಲಚೂಡಾಮಣಿ ಶಾರ್ದೂಲಾಂಕನೆನಿಸಿದ ಹೊಯ್ಸಳ ದೇಶದ ಮಧ್ಯದಲ್ಲಿರುವ ಹೊಸವೃತ್ತಿಯ ನಾಡ ಮಹಾಪ್ರಭು ಕಲ್ಲಹಳ್ಳಿಯ ವಿಜಯಭೂಪಾಲ, ತಾಯಿ ದೇವಿಲೆ, ಗುರು ಚಿಕ್ಕಪ್ರಭೇಂದು. ಈತನಿಗೆ ಪ್ರಭುರಾಜ ಪ್ರಭುಕುಲರತ್ನದೀಪ ಎಂಬ ಬಿರುದುಗಳಿದ್ದಂತೆ ತಿಳಿದುಬರುತ್ತದೆ. ವಿಜಯಭೂಪಾಲನು ಚಂಗಾಳ್ವನೃಪರ ದಂಡನಾಥಕುಲತಿಲಕಂ ಎಂದೂ ರಣಕಭಿನವ ತಿಲಕಂ ಎಂದೂ ಹೇಳಿರುವುದರಿಂದ ಈತನು ಯುದ್ಧವೀರನಾಗಿದ್ದಂತೆ ತೋರುತ್ತದೆ[1] ” ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಶ್ರೀಪಾಲಚರಿತೆಯಲ್ಲಿ ಮಂಗರಸನ ತಾಯಿ, ಗುರು ಮತ್ತು ಅವನಿಗಿದುವೆಂದು ಹೇಳುವ ಬಿರುದುಗಳ ಉಲ್ಲೇಖ ಇಲ್ಲ. ಈತನ ತಂದೆಯು ಯುದ್ಧವೀರನಾಗಿದ್ದ ಬಗ್ಗೆಯೂ ಶ್ರೀಪಾಲಚರಿತ್ರೆಯಲ್ಲಿ ಯಾವ ಆಧಾರಗಳೂ ದೊರೆಯುವುದಿಲ್ಲ. ಆದುದರಿಂದ ಕವಿ ಚರಿತೆಕಾರರು ಬೇರೆ ಬೇರೆ ಕಡೆಗಳಲ್ಲಿ ದೊರೆಯುವ ಆಧಾರಗಳಿಂದ ಈ ಸಂಗತಿಗಳನ್ನು ಹೇಳಿದ್ದಾರೆಂದು ತೋರುತ್ತದೆ.

ಮೂರನೆಯ ಮಂಗರಸನಿಂದ ರಚಿತವಾದ ಸೂಪಶಾಸ್ತ್ರ, ನೇಮಿಜಿನೇಶಸಂಗತಿ ಜಯನೃಪಕಾವ್ಯ ಮುಂತಾದುವುಗಳಲ್ಲಿಯೂ ಕವಿಯ ಸ್ವವಿಷಯಗಳು ತಿಳಿದು ಬರುತ್ತದೆ.

ಶ್ರೀಮನ್ಮಹಾಮಂಡಲೇಶ್ವರಂ ಚಂಗಾಳ್ವ
ಭೂಮಿಪಾಲಕ ದಂಡನಾಥ ಕುಲತಿಲಕನು
ದ್ದಾಮ ರತ್ನತ್ರಯಾರಾಧಕಂ ಜಿನಪದಾಂಭೋಜಾತನವ ಮಧುಕರಂ
ರಾಮಣೀಯಕ ಗುಣಾಲಂಕೃತಂ ಶ್ರಿತಜನ
ಸ್ತೋಮ ಕಲ್ಪಾಂಘ್ರಿಪಕಂ ಭಾಮಿನೀಜನ ಹೃದಯ
ರಾಮನುರುಭೋಗಯುತ ಕಲ್ಲಹಳ್ಳಿಯ ಮಹಾಪ್ರಭು ವಿಜಯ
ಭೂಮೀಶ್ವರಂ[2]

ಹರಿಕುಲತಿಲಕ ಮಹಾಮಂಡಲಿಕ ಭೂ
ತರುಣೀಶ ಚಂಗಾಳ್ವ ನೃಪನ

---

1 ಕರ್ನಾಟಕ ಕವಿ ಚರಿತೆ ಆರ್. ನರಸಿಂಹಾಚಾರ್ ಭಾಗ ೩ ಪುಟ [illegible]

2 ಸೂಪಶಾಸ್ತ್ರ, ಸಂ. ಎಸ್. ಎನ್. ಕೃಷ್ಣಜೋಯಿಸ್, ಸಂಧಿ ೧, ಪದ್ಯ [illegible]

ವರ ಸಚಿವಾನ್ವಯಾಂಬರ ಭಾನು ಜಿನಪದ
ಸರಸಿ ಜಮಧು ಮಧುಕರಮು[1]

ದ್ವಾರಾವತಿ ಪುರವರಾಧೀಶ್ವರಲ
ಕ್ಷ್ಮೀರಮಣಾನ್ವಯ ಚಂಗಾಳ್ವಮಹೀ
ನಾಥನ ನಿಜಸಚಿವ ರುಚಿರಕುಲ ದುಗ್ಧಾಂಭೋನಿಧಿಗೆ
ತಾರಾ ತರುಣೀವಲ್ಲಭ ಜಿನಪದ
ವಾರಿಜ ಮಧುಕರ ಯಾಚಕ ಜನಚಿಂ
ತಾರತ್ನಂ ಚಿತ್ರಕಲಾಸದನಂ ಸುದತೀಜನಮದನಂ[2]

ಮಂಗರಸನ ವಂಶಸ್ಥರು ಚಂಗಾಳ್ವನೃಪರ ದಂಡನಾಥಕುಲತಿಲಕರೆಂಬುದು ಮೇಲಿನ ಎಲ್ಲ ಪದ್ಯಗಳಲ್ಲಿಯೂ ತಿಳಿದುಬರುವ ಸಂಗತಿಯಾಗಿದೆ. ಮಂಗರಸನ ವಂಶಸ್ಥರು ಚಂಗಾಳ್ವರಲ್ಲಿ ಮಂತ್ರಿಗಳೂ, ದಂಡನಾಥರೂ ಆಗಿದ್ದು ಅನಂತರ ಕಲ್ಲಹಳ್ಳಿಯ ರಾಜರಾಗಿದ್ದರೆಂಬುದನ್ನು ಈ ಎಲ್ಲ ಪದ್ಯಗಳೂ ಸೂಚಿಸುತ್ತವೆ. ಚಂಗಾಳ್ವರು ಕೊಡಗು ಮತ್ತು ಪಿರಿಯಾಪಟ್ಟಣಗಳ ಈ ಭಾಗದಲ್ಲಿ ಆಳುತ್ತಿದ್ದು ಒಮ್ಮೆ ಅವನತಿ ಕಂಡು ಮತ್ತೆ ತಲೆ ಎತ್ತಿದವರು. "The Changalvas now disappear for about three hundred years but at the beginning of the 16th Century they again emerge as an independent rulers of their old territory Nanjaraja was the founder of their new capital Nanjaraja Pattana on the Kaveeri in the Coorg, which still gives its name to one of the Taluk there."[3] ಎಂಬ ಹೇಳಿಕೆಯ ಆಧಾರದಿಂದ ಚಂಗಾಳ್ವ ರಾಜಮನೆತನವು ಹದಿನಾರನೆಯ ಶತಮಾನದಲ್ಲಿ ಮತ್ತೆ ತಲೆ ಎತ್ತಿತು ಎಂದು ಹೇಳಬಹುದು. ಈ ಚಂಗಾಳ್ವರಿಗೂ ಮಂಗರಸನಿಗೂ ಏನು ಸಂಬಂಧ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಚಂಗಾಳ್ವ ಮತ್ತು ಮಂಗರಸ ವಂಶಗಳ ಬಗೆಗೆ ಅನೇಕ ಕಥೆಗಳು ದೊರೆಯುತ್ತವೆ. ಈ ಕಥೆಗಳೆಲ್ಲವೂ ಕೇವಲ ಕಲ್ಪಿತವಾದುವುಗಳು. ಇವುಗಳಲ್ಲಿ ನಿಖರವಾದ ಚಾರಿತ್ರಿಕ ಅಂಶಗಳು ದೊರೆಯುವುದಿಲ್ಲ. ಇವುಗಳಲ್ಲಿ ಮೊದಲನೆಯದು ಉತ್ತರ ದೇಶದಿಂದ ಚಂಗಾಳ್ವ ಮತ್ತು ಮಂಗರಸ ಎಂಬ ಇಬ್ಬರು ವೀರರು ಬಂದು ಈ ಭಾಗದಲ್ಲಿ ನೆಲಸಿದರೆಂದು ಹೇಳುತ್ತಾರೆ. ಮೊದಮೊದಲು ಸಣ್ಣದಾಗಿ ಆರಂಭಿಸಿ ಕ್ರಮೇಣವಾಗಿ ರಾಜ್ಯ ವಿಸ್ತಾರ

1 ನೇಮಿಜಿನೇಶಸಂಗತಿ, ಮಂಗರಸ ಪೀಠಿಕಾ ಸಂಧಿ ೩೮.
2 ಜಯನೃಪಕಾವ್ಯ, ಮಂಗರಸ ಸಂಧಿ ೧, ಪ. ೧೪.
3 E.C. Vol. IV Page 17.

ಮಾಡಿದರು. ಹೀಗಿರುವಲ್ಲಿ "One day he found while encamped near Thirthankara betta a hare persuing a dog and thinking that it was an aspicious site for habitation he built a fort there and named the town Bettadapura. This town was given away to his son changalaraya. Next he built the town Kallahalli and gave it with adjacent territory to his minister Mangarasa"[1] ಈ ಹೇಳಿಕೆಯು ಮಂಗರಸ ಹೇಳುವ ಚಂಗಾಳ್ವ ನೃಪರ ದಂಡನಾಥ ಕುಲತಿಲಕರು ತಮ್ಮ ಪೂರ್ವಿಕರು ಎಂಬ ಮಾತನ್ನು ಸಮರ್ಥಿಸುತ್ತದೆ. ಅಷ್ಟೇ ಅಲ್ಲ ಈ ವಂಶಗಳು ಚಂಗಾಳ್ವ ಮತ್ತು ಮಂಗರಸ ಎಂಬ ಇಬ್ಬರು ವ್ಯಕ್ತಿಗಳಿಂದ ಆರಂಭವಾದುವೆಂಬುದೂ ಈ ಹೇಳಿಕೆಯಿಂದ ಶ್ರುತಪಡುತ್ತದೆ.

ಮತ್ತೊಂದು ಕಥೆಯಂತೆ "Certain jaina-kshatriya families left Dvaravati at the time of its disappearence and settled in various Countries. Among the desendents of such families who lived at Vijayanagara two Kshatriyas named Mangarasa and Changalva finding famine and political disturbances raging the country departed from the place with their families also taking with them 500 to 600 families of jaina families with other families settled at the town called Tunga"[2] ಈ ವಂಶದ ಮೂಲಪುರುಷರು ಪೌರಾಣಿಕ ಪ್ರಸಿದ್ಧ ದ್ವಾರಾವತಿಯಿಂದ ವಿಜಯನಗರಕ್ಕೆ ಬಂದು ಅಲ್ಲಿಂದ ಈ ಭಾಗಕ್ಕೆ ಬಂದರೆಂದು ಮೇಲಿನ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಈ ಹೇಳಿಕೆ ಕೂಡ ಚಂಗಾಳ್ವ ಮತ್ತು ಮಂಗರಸರಿಂದ ಈ ವಂಶ ಆರಂಭವಾಯಿತೆಂಬುದನ್ನು ಪ್ರತಿಪಾದಿಸುತ್ತದೆ. ಈ ವಂಶದವರು ದ್ವಾರಾವತಿಯಿಂದ ಬಂದರೆಂಬುದು ಕಲ್ಪಿತ ಕಥೆ. ಸಾಮಾನ್ಯವಾಗಿ ರಾಜವಂಶಗಳ ಬಗೆಗೆ ಕ್ರಮೇಣವಾಗಿ ಇಂತಹ ಕಥೆಗಳು ಹುಟ್ಟಿಕೊಳ್ಳುತ್ತವೆ. ಏಕೆಂದರೆ ಜನಸಾಮಾನ್ಯರಿಗೂ ರಾಜರಿಗೂ ಇರುವ ಅಂತರ ಕಲ್ಪಿಸುವುದು ಇಂತಹ ಕಥೆಗಳ ಹುಟ್ಟಿಗೆ ಕಾರಣ ಎಂದು ಹೇಳಬಹುದು. ಆದರೆ ವಿಜಯನಗರದ ಕಡೆಯಿಂದ ಈ ವಂಶದವರು ಬಂದರೆಂದು ಹೇಳುವ ಘಟನೆ ನಿಜ ಇದ್ದರೂ ಇರಬೇಕು. ಏಕೆಂದರೆ ಅನೇಕ ವೇಳೆ ರಾಜಮಹಾರಾಜರ ಸೇನೆಗಳಲ್ಲಿ ನಿಷ್ಠಾವಂತ ಸೇವೆ ಸಲ್ಲಿಸುವವರಿಗೆ ಅಂತಹ ರಾಜ ಮಹಾರಾಜರುಗಳು ಇವರಿಗೆ ಒಂದು ಭಾಗವನ್ನು, ಪ್ರಾಂತವನ್ನು ದತ್ತಿಯಾಗಿ ಕೊಡುತ್ತಿದ್ದರು. ಹೀಗೆ ಸಣ್ಣಪುಟ್ಟ ಪಾಳೆಯ

---

1 M. A. R. 1925 page 14. 2 M. A. R. 1925 page 15

ಗಾರರಾದವರು ಮುಂದೆ ಸ್ವಶಕ್ತಿಯಿಂದ ರಾಜ್ಯ ಸಂಪಾದನೆ ಮಾಡಿ ಸಾಮಂತ ರಾಜರಾಗುವುದು ತೀರಾ ಸಾಮಾನ್ಯ ಸಂಗತಿ. ಇಂತಹವರು ಮುಂದೆ ತಾವು ಮತ್ತು ತಮ್ಮ ವಂಶ ಅಸಾಮಾನ್ಯವಾದುದೆಂದು ತೋರಿಸಿಕೊಳ್ಳಲು ತಾವು ದ್ವಾರಕೆಯಿಂದ ಬಂದ ಯದುವಂಶದವರೆಂದೋ ಇಕ್ಷ್ವಾಕುವಂಶಸ್ಥರೆಂದೋ ಹೇಳಿಕೊಳ್ಳುತ್ತಿದ್ದರು. ಆದುದರಿಂದ ಕೇವಲ ಮೂಲನಿವಾಸಿಗಳಿಂದ ಕೂಡಿ ಅರಣ್ಯಪ್ರದೇಶವಾಗಿದ್ದ ಈ ಭಾಗಕ್ಕೆ ಜಂಗಾಳ್ಯ, ಘುಂಗರಸರೆಂಬ ಇಬ್ಬರು ಬಂದು ನೆಲಸಿ ಸುತ್ತ ಮುತ್ತಿನ ಪ್ರದೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿರಬೇಕೆಂದು ಊಹಿಸಬಹುದಾಗಿದೆ.

ತುಂಗದಲ್ಲಿ ನೆಲಸಿದ ಈ ವಂಶದವರು ಕ್ರಮೇಣವಾಗಿ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡಂತೆ ಕಾಣುತ್ತದೆ. ಈ ಬಗೆಗಿನ ಮತ್ತೊಂದು ಕಥೆ ಹೀಗಿದೆ. ಉತ್ತರದ ಕಡೆಯಿಂದ ಬಂದ ಕೆಲವು ರಾಜಮನೆತನದವರು ಈ ಭಾಗದಲ್ಲಿ ನೆಲಸಿದರು. ಆದರೆ ಇಲ್ಲಿ ಆಳುತ್ತಿದ್ದ ಬೇಡ ಪಾಳೆಯಗಾರರು ಅವರನ್ನು ವಿರೋಧಿಸಿದರು. ಆಗ ಈ ಕ್ಷತ್ರಿಯರು ತಾವು ರಾಜ್ಯ ಕಟ್ಟಲು ಇಲ್ಲಿಗೆ ಬಂದಿಲ್ಲವೆಂದೂ ತಮಗೆ ವಾಸಕ್ಕೆ ಒಂದು ಊರು ಕಟ್ಟಿಕೊಳ್ಳಲು ಅನುಮತಿ ನೀಡಬೇಕೆಂದು ಕೇಳಿದರು. ಅಷ್ಟೇ ಅಲ್ಲ ಹಾಗೆ ಪಡೆಯುವ ಹಳ್ಳಿಗೆ ಅಪಾರ ಹಣ ಕೊಡುವುದಾಗಿಯೂ ಹೇಳಿದರು. ಬೇಡರು ಹಣದ ಆಸೆಯಿಂದ ತುಂಗವನ್ನು ಇವರಿಗೆ ಮಾರಿದರು. ಇವರು ಆ ಊರಿಗೆ ಕೋಟೆಕೊತ್ತಲುಗಳನ್ನು ನಿರ್ಮಿಸಿಕೊಂಡರು. ಕ್ರಮೇಣವಾಗಿ ಈ ಕ್ಷತ್ರಿಯರಿಗೂ ಬೇಡರಿಗೂ ವಿರಸ ಆರಂಭವಾಯಿತು. ಅದಕ್ಕೆ ಈ ಕ್ಷತ್ರಿಯರ ಹೆಣ್ಣುಮಕ್ಕಳ ರೂಪು ಕಾರಣವಾಯಿತು.

ಕೆಲವು ಬೇಡ ಯುವಕರು ತುಂಗದಲ್ಲಿ ಬಂದು ನೆಲಸಿದ ಕ್ಷತ್ರಿಯರ ಹೆಣ್ಣುಮಕ್ಕಳ ಸೌಂದರ್ಯಕ್ಕೆ ಮನಸೋತು ಅವರನ್ನು ತಮಗೆ ಕೊಟ್ಟು ಮದುವೆಮಾಡಬೇಕೆಂದು ಒತ್ತಾಯ ಹಾಕಿದರು. ಆಗ ಕ್ಷತ್ರಿಯರಿಗೆ ಒಂದು ರೀತಿಯ ಧರ್ಮಸಂಕಟದ ಸ್ಥಿತಿ ಉಂಟಾಯಿತು. ಬೇಡರು ಅಪಾರ ಸಂಖ್ಯೆಯಲ್ಲಿದ್ದ ಕಾರಣ ಅವರನ್ನು ಎದುರು ಹಾಕಿಕೊಳ್ಳುವಂತಿಲ್ಲ. ತಮ್ಮ ಮಕ್ಕಳನ್ನು ಕೀಳು ಜಾತಿಯವರೆನಿಸಿದ ಬೇಡರಿಗೆ ಕೊಡುವಂತೆಯೂ ಇಲ್ಲ. ಆಗ ಇವರು ಒಂದು ಉಪಾಯ ಹೂಡಿದರು. ನಮ್ಮ ಹೆಣ್ಣುಮಕ್ಕಳನ್ನು ನಿಮಗೆ ಕೊಡಲೇನೂ ನಮಗೆ ಅಡ್ಡಿಯಿಲ್ಲ. ಆದರೆ ಸಂಪ್ರದಾಯದಂತೆ ನಮ್ಮಲ್ಲಿ ಮದುವೆ ನಡೆಯಬೇಕಾದಲ್ಲಿ ಭಾರಿ ಅರಮನೆಗಳುಬೇಕು. ಅವುಗಳಿಗೆ ಅಪಾರವಾದ ಹಣಬೇಕು. ಆದುದರಿಂದ ನೀವು ಸ್ವಲ್ಪಕಾಲ ಕಾಯಬೇಕಾಗುತ್ತದೆ ಎಂದರು. ಆದರೆ ಬೇಡರಿಗೆ ಸಹನೆಯಿರಲಿಲ್ಲ. ಅವರು ಅರಮನೆಯನ್ನು ನಾವೇ ಕಟ್ಟಿಕೊಡುತ್ತೇವೆ. ನಿಮಗೆ ಬೇಕಾದಷ್ಟು ಹಣವನ್ನು ಕೊಡುತ್ತೇವೆ ಎಂದರು. ಆಗ ವಿಧಿಯಿಲ್ಲದೆ ಇವರು ಮದುವೆಗೆ ಒಪ್ಪಬೇಕಾಯಿತು. ಮದುವೆಗಾಗಿ ವಿಶಾಲವಾದ ಚಪ್ಪರ ನಿರ್ಮಿತವಾಯಿತು. ಅದರ ಒಂದು ಕೊನೆಯಲ್ಲಿ ಆಳವಾದ ಕಂದಕ ತೆಗೆಯಲಾಯಿತು. ನಮ್ಮ ಸಂಪ್ರದಾಯದಂತೆ ಒಬ್ಬೊಬ್ಬರೇ ಒಳಗೆ ಬಂದು

ಆ ಕಡೆಯ ಮೂಲೆಯಲ್ಲಿರುವ ನಮ್ಮ ದೇವರಿಗೆ ಕೈಮುಗಿದು ಬಂದು ಕೂರಬೇಕೆಂದು ಜೇಡರಿಗೆ ಸೂಚಿಸಿದರು. ಅದರಂತೆ ಬಂದು ದೇವರಿಗೆ ನಮಸ್ಕರಿಸಲು ಬಗ್ಗಿದೊಡನೆಯೆ ಕತ್ತಲೆಯಲ್ಲಿ ಕತ್ತಿ ಹಿಡಿದು ನಿಂತ ವೀರರು ಅವರ ಕತ್ತು ಕತ್ತರಿಸಿ ಆ ಕಂದಕಕ್ಕೆ ತುಂಬುತ್ತಾ ಬಂದರು. ಹೀಗೆ ಜೇಡ ವೀರರೆಲ್ಲ ಸಾವನ್ನಪ್ಪಿದರು. ಉಳಿದವರು ಇವರನ್ನೆ ತಮ್ಮ ರಾಜರೆಂದು ಒಪ್ಪಿದರು. ಈ ಸಾಹಸದ ನಾಯಕತ್ವ ವಹಿಸಿದ ಇಬ್ಬರು ಯುವಕರು ಚಂಗಾಳ್ವ ಮತ್ತು ಮಂಗರಸ. ಈ ಇಬ್ಬರೂ ಅಣ್ಣ ತಮ್ಮಂದಿರೆಂಬ ಹೇಳಿಕೆಯೂ ದೊರೆಯುತ್ತದೆ. ಹಿರಿಯನಾದ ಚಂಗಾಳ್ವನು ರಾಜನಾಗಿಯೂ ಕಿರಿಯನಾದ ಮಂಗರಸನು ಮಂತ್ರಿಯಾಗಿಯೂ ಅಧಿಕಾರ ವಹಿಸಿಕೊಂಡರಂತೆ.

ಮೈಸೂರು ಮತ್ತು ಕೊಡಗು ಜಿಲ್ಲೆಯ ಬಹುಭಾಗವನ್ನು ಕ್ರಿ. ಶ. 11ನೆಯ ಶತಮಾನದಿಂದ 16 ನೆಯ ಶತಮಾನದವರೆಗೆ ಚಂಗಾಳ್ವ ಮನೆತನದವರು ಆಳಿದರು. ಚಂಗಾಳ್ವನೆಂಬುವನು ಈ ವಂಶದ ಮೂಲ ಪುರುಷನೆಂಬುದನ್ನು ಚರಿತ್ರೆಯೂ ಒಪ್ಪಿದೆ. ಚಿಕ್ಕಹನಸೋಗೆಯಲ್ಲಿ ದೊರೆತ ಶಾಸನಗಳಲ್ಲಿ ಇವರು ಯಾದವ ಕುಲಕ್ಕೆ ಸೇರಿದವರೆಂಬ ವಿಚಾರ ತಿಳಿಯುತ್ತದೆ. ಆದರೆ ಚಂಗಾಳ್ವರ ಈ ಶಾಸನಗಳಲ್ಲಿ ಮಂಗರಸರ ವಿಚಾರ ಬರುವುದಿಲ್ಲ. ಚಂಗಾಳ್ವನು 11ನೆಯ ಶತಮಾನದಲ್ಲಿದ್ದ ಮೊದಲನೆಯ ರಾಜನೆಂದು ಒಪ್ಪಿದಾಗ " The Mangarasa minister to Changalava Vikrama in Shaka 1547 was a jaina is evident from his Jayanripa-cherita, Sripalacherita and other works[1]" ಎಂಬ ಹೇಳಿಕೆ ಬಿದ್ದು ಹೋಗುತ್ತದೆ. ಇಲ್ಲಿ ಬರುವ ಮಂಗರಸ ಚಂಗಲರಾಯನ ಮಂತ್ರಿಯಾಗಿರಬೇಕೇ ವಿನಹ ಶ್ರೀಪಾಲ ಚರಿತೆಯ ಕರ್ತೃ ಮಂಗರಸನಾಗುವುದು ಸಾಧ್ಯವಲ್ಲ. ಏಕೆಂದರೆ ಚಂಗಾಳ್ವವಿಕ್ರಮನ ಕಾಲ ಸುಮಾರು 1422-45 ಎಂದು ಹೇಳಲಾಗಿದೆ. ಮೂರನೆ ಮಂಗರಸ 1509 ರಲ್ಲಿ ಬರುವವನು. ಪ್ರಾಯಃ ಮಂಗರಸನೆಂಬ ಅನೇಕ ಹೆಸರುಗಳಿದ್ದು ಈ ರೀತಿಯ ತಪ್ಪು ಗ್ರಹಿಕೆಗೆ ಅವಕಾಶವಾಗಿರಬೇಕೆಂದು ಕಾಣುತ್ತದೆ.

ನಮ್ಮ ನಾಡಿನ ರಾಜವಂಶಗಳ ಮೂಲದ ಬಗೆಗೆ ನಿಖರವಾದ ಚಾರಿತ್ರಿಕ ದಾಖಲೆಗಳು ದೊರೆಯುವುದಿಲ್ಲ ಎಂದೇ ಹೇಳಬೇಕು. ಈ ದಿಸೆಯಲ್ಲಿ ಶಾಸನಗಳು ಸಹ ನಮಗೆ ನ್ಯಾಯ ದೊರಕಿಸಿಕೊಡಲಾರವೆನಿಸುತ್ತದೆ. ಏಕೆಂದರೆ ಈ ರಾಜರ ಪೂರ್ವಿಕರು ಪಾಳೆಯಗಾರರೊ. ಸಾಮಂತರೊ ಆಗಿರುತ್ತಾರೆ. ಅಥವಾ ಸಂದರ್ಭದ ಅನುಕೂಲ ಪಡೆದು ರಾಜರಾಗಿರುವವರೂ ಉಂಟು. ಇಂತಹವರು ತಾವು ಶಾಸನಹಾಕಿಸುವ ಮಟ್ಟಕ್ಕೆ ಏರಿದಾಗ ತಮ್ಮ ನೈಜ ಮೂಲದ ಬಗೆಗೆ ಹೇಳಲು ಹಿಂಜರಿಯುತ್ತಾರೆ. ಈ ಹೊತ್ತಿಗೆ

1 M. A. R. 1925 Page 15


ಅವರಾಗಲಿ ತಮ್ಮ ಆಶ್ರಿತ ಪಂಡಿತರಿಂದ ತಮ್ಮದು ಸೂರ್ಯ ಅಥವಾ ಚಂದ್ರವಂಶವೆಂದು ಬರೆಯಿಸಿರುತ್ತಾರೆ. ಮುಂದೆ ಈ ಕಲ್ಪಿತ ಕಥೆಯೇ ಶಾಸನಗಳಲ್ಲಿ ಮೂಲವೆಂಬಂತೆ ಉಕ್ತವಾಗಿಬಿಡುತ್ತದೆ. ಮುಂಗರಸ ಮತ್ತು ಚಂಗಾಳ್ವ ವಂಶಗಳ ಬಗೆಗೂ ಮೇಲಿನ ಕಥೆಗಳು ಹಬ್ಬಿ ವಾಸ್ತವ ಸಂಗತಿಗಳನ್ನು ಮರೆಯಿಸಿವೆ. ಪ್ರಾಯಶಃ ಚಂಗಾಳ್ವ ತನ್ನ ಮಂತ್ರಿ ಮುಂಗರಸನಿಗೆ ಅವನ ಸೇವಾನಿಷ್ಠೆಯ ಪ್ರತೀಕವಾಗಿ ಕಲ್ಲಹಳ್ಳಿಯನ್ನು ದತ್ತಿಯಾಗಿ ನೀಡಿರಬೇಕು. ಮುಂದೆ ಈ ವಂಶದವರು ಇದನ್ನು ವಿಸ್ತರಿಸಿ ಹೊಸವೃತ್ತಿಯ ನಾಡಾಗಿ ಬೆಳೆಸಿರಬೇಕು. ಎರಡನೆಯದು ಮೇಲೆ ಉದಾಹರಿಸಿದ ಕಥೆಗಳಂತೆ ಚಂಗಾಳ್ವ ಮುಂಗರಸ ಸಹೋದರರಾಗಿದ್ದು ಮುಂದೆ ರಾಜ್ಯ ಅವರಲ್ಲಿ ಹಂಚಿಕೆಯಾಗಿರಬೇಕು. ಈ ಎಲ್ಲಕ್ಕಿಂತ ಹೆಚ್ಚಾಗಿ ಮೂಲತಃ ಪಾಳೆಯಗಾರರೊ, ಊರ ಗೌಡರೊ ಆಗಿದ್ದ ಈ ವಂಶದವರು ರಾಜರಾಗಿರುವುದೂ ಸಾಧ್ಯ. ಈ ವಂಶದ ಮೂಲದ ಬಗೆಗಿರುವ ಬೇಡರು ಹೆಣ್ಣು ಕೇಳಿದರೆಂಬ ಕಥೆ ಮೈಸೂರು ಅರಸರ ಬಗೆಗಿರುವ ಮಾರನಾಯಕನ ಕಥೆಯ ಅನುಕರಣೆಯಾಗಿರುವಂತೆ ಕಾಣುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪಾಳೆಯಗಾರನ, ಗೌಡನ ಮಗಳೊಬ್ಬಳನ್ನು ಕೀಳುಜಾತಿಯವನೊಬ್ಬ ಕೇಳಿದ ಎಂಬ ಕಥೆ ಕನ್ನಡನಾಡಿನ ಎಲ್ಲಾ ಮೂಲೆಗಳಲ್ಲಿಯೂ ಪ್ರಚಲಿತವಿದೆ. ಆದುದರಿಂದ ಇದೊಂದು ಜಾನಪದ ಅಂಶವಾಗಿರಬಹುದೆಂದೂ ಊಹಿಸಲವಕಾಶವಿದೆ. ಮೊಲ ನಾಯಿಯನ್ನು ಅಟ್ಟಿಸಿಕೊಂಡು ಹೋಯಿತು ಎಂಬುದು ಇಂಥದೆ ಮತ್ತೊಂದು ಪ್ರಚಲಿತ ಕಥೆ. ಈ ಎಲ್ಲಾ ತೊಡಕುಗಳಿಂದಾಗಿ ಕಲ್ಲಹಳ್ಳಿಯ ರಾಜವಂಶದ ಮೂಲದ ಬಗೆ ಖಚಿತವಾಗಿ ಹೇಳಲು ಆಗುವುದಿಲ್ಲ.

ಮುಂಗರಸನು ತನ್ನ ಜಯನೃಪಕಾವ್ಯ ಮತ್ತು ನೇಮಿಜಿನೇಶಸಂಗತಿ ಕಾವ್ಯಗಳಲ್ಲಿ ತಾನು,

ಜನನುತ ಕಲ್ಲಹಳ್ಳಿಯ ನಾಡಿನ ಪ್ರಭು
ವಿನಯ ವನಧಿ ಚಂದ್ರಮನು
ಮನು ನಿಭಚರಿತ ಮಾಧವಸುತ ಮಾಧವ
ತನುಜಸದೃಶ ವಿಜಯೇಂದ್ರ

ನ ಮಗನೆಂದು ಹೇಳಿದ್ದಾನೆ. ಮೇಲೆ ಹೇಳಿರುವ ಪದ್ಯದಂತೆ ಮುಂಗರಸನು ಮಾಧವನ ಸುತ ಮಾಧವ ಅವನ ತನುಜ ಸದೃಶನಾದ ವಿಜಯೇಂದ್ರನ ಮಗ ಎಂದಾಗುತ್ತದೆ. ಇದು ಮುಂಗರಸನ ಬಗೆಗೆ ಈವರೆಗೆ ವಿದ್ವಾಂಸರು ಹೇಳಿದ ವಿಚಾರಗಳ ಮೇಲೆ ಹೊಸಬೆಳಕು ಚೆಲ್ಲುತ್ತದೆ. ಇಲ್ಲಿ ಮಾಧವನ ಮಗ ಮಾಧವ. ಈ ಎರಡನೆಯ ಮಾಧವನಿಗೆ ತನುಜ ಸದೃಶನಾದವನು ವಿಜಯೇಂದ್ರ. ಅಂದರೆ ಮುಂಗರಸನ ತಂದೆಯಾದ ವಿಜಯೇಂದ್ರನು ಎರಡನೆಯ ಮಾಧವನ ತಮ್ಮ ಎಂಬುದು ಈ ಪದ್ಯದಿಂದ ಸ್ಪಷ್ಟ

ವಾಗುತ್ತದೆ. ಈ ಹೇಳಿಕೆಯನ್ನು ಪ್ರತಿಪಾದಿಸುವ ಮತ್ತೊಂದು ಹೇಳಿಕೆ ಹೀಗಿದೆ "Madhavaraja Vadeyar ruled over Kallahalli and Piriapattana Kingdom for six years and at the end of the period entrusted the government to his eldest son Madhavaraja Vadeyar and became a sanyasi. His Successor Madhavaraja Vadeyar ruled of 5 pattas and he became a sanyasi leaving the kingdom to his younger brother Vijaya raja Vadeyar next ruled for 3 pattas and became an asectic at the end of the period. His successor was his younger brother Vijayaraja .Vadeyar. He faught with Raya Rautas and died in the battle His son and successor was Mangarasa who ruled for 6 pattas and at the end of the period entrusted his young son Jayaraja Vadeyar to the care of his Uncle's son Nanjundarasu and his pradhana Bommarasya and became a sanyasi "[1] ಈ ಹೇಳಿಕೆಯೂ ಮಂಗರಸನ ಪದ್ಯದ ವಂಶಾವಳಿಯನ್ನೇ ಸಮರ್ಥಿಸುತ್ತದೆ. ಈ ಎರಡೂ ಆಧಾರಗಳಿಂದ ಮಂಗರಸನ ವಂಶಾವಳಿಯನ್ನು ಹೀಗೆ ರೂಪಿಸಬಹುದು.



ಈ ವಂಶಾವಳಿಯಲ್ಲಿ ಬರುವ ಒಂದನೆಯ ಮಾಧವ ಚಂಗಾಳ್ವ ನಂಜರಾಜನ ಸಹೋದರನಾಗಿರುವಂತೆ ಕಾಣುತ್ತದೆ. ಈ ಬಗೆ "Nanjaraja had a brother named Madhava" ಎಂಬ ಹೇಳಿಕೆ ಗಮನಾರ್ಹವಾಗುತ್ತದೆ. ಇನ್ನಿತರ ಚಾರಿತ್ರಿಕ ಆಧಾರಗಳು ಸಹ ಚಂಗಾಳ್ವ ನಂಜರಾಜನಿಗೆ ಸೋದರನಾದ ಮಾಧವ ಎಂಬ ತಮ್ಮನಿದ್ದ ಬಗ್ಗೆ ಸೂಚನೆ

---

1 Epigrapica carnatica vol IV page 17 2 M. A. R. 1925 page 16

ನೀಡುತ್ತವೆ. ಚಂಗಾಳ್ವ ಮತ್ತು ಮಂಗರಸರು ಸಹೋದರರು ಎಂಬ ವಾದಕ್ಕೆ ಇದು ಹೆಚ್ಚು ಒತ್ತು ಕೊಡುತ್ತದೆ. ಚಂಗಾಳ್ವ ವಂಶಾವಳಿಯ ಐದನೆಯ ತಲೆಮಾರಿನಲ್ಲಿ ಈ ನಂಜರಾಜ ಮತ್ತು ಮಾಧವ ಬರುತ್ತಾರೆ. ಆದರೆ ಮಂಗರಸ ಎಂಬುದು ಈ ವಂಶ ಸ್ಥರಿಗೆ ಹೇಗೆ ಬಂದಿತೆಂಬ ಬಗ್ಗೆ ಸರಿಯಾದ ಆಧಾರಗಳಿಲ್ಲ.

ಚಂಗಾಳ್ವ ನಂಜರಾಜನ ಸಹೋದರನಾದ ಮಾಧವನೆ ಮುಂದೆ ಕಲ್ಲಹಳ್ಳಿಯ ರಾಜನಾದಂತೆ ಕಾಣುತ್ತದೆ. ಈತನು ನಂಜರಾಜನಿಗೆ ಸಚಿವನಾಗಿದ್ದು ಅನಂತರ ಈ ಪ್ರಾಂತ್ಯಕ್ಕೆ ರಾಜನಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗೆ ಹೇಳುವಾಗ ಚಂಗಾಳ್ವರು ವೀರಶೈವರು ಮಂಗರಸರು ಜೈನರು ಎಂಬ ವಾದವಿದೆ. ಕೆಲವು ವಿದ್ವಾಂಸರು "ಇವರು ವೀರಶೈವ ಧರ್ಮಾನುಯಾಯಿಗಳು. ಶ್ರೀಗಿರಿ ಅಂದರೆ, ಈಗಿನ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ಇವರ ಇಷ್ಟದೈವ"[1] ಎಂದು ಅಭಿಪ್ರಾಯಪಡುತ್ತಾರೆ. ಆದರೆ ಚಂಗಾಳ್ವರು ಶೈವಧರ್ಮೀಯರೆಂಬುದು ನಿಜವಾದರೂ ವೀರಶೈವರಲ್ಲ. ಮೂರನೆಯ ಮಂಗರಸ ಪಂಚಜೈನ ಕಾವ್ಯಗಳನ್ನು ರಚಿಸಿದನೆಂಬ ಕಾರಣದಿಂದ ಅವನು ಜೈನ ಧರ್ಮೀಯ ಎಂದು ಹೇಳುವುದು ಸರಿಯಲ್ಲ. ಕವಿ ತಾನು ಜಿನಭಕ್ತ ಎಂದಿದ್ದಾನೆಯೇ ಹೊರತು ಜೈನಧರ್ಮೀಯ ಎಂದು ಹೇಳಿಲ್ಲ. ಅಲ್ಲದೆ ರಾಜರಾದವರು ತಾವು ಪ್ರಭಾವಿತ ರಾದ ಗುರುವಿನ ಧರ್ಮದತ್ತ ಹೆಚ್ಚು ಒಲವು ತೋರಿಸುತ್ತಿದ್ದರಾದರೂ ಸಾಮಾನ್ಯವಾಗಿ ಸರ್ವಧರ್ಮಸಮಾಶ್ರಯಿಗಳಾಗಿರುತ್ತಿದ್ದರು. ಅಲ್ಲದೆ ಮಂಗರಸನ ಪೂರ್ವಜರು ಜೈನರಾಗಿದ್ದಂತೆ ಕಂಡುಬರುವುದಿಲ್ಲ. ಅಷ್ಟೇಕೆ ಮಂಗರಸ ಎಂಬ ಹೆಸರೇ ಜೈನ ಸಂಪ್ರದಾಯದ್ದಲ್ಲ. ಆದುದರಿಂದ ಮಂಗರಸನು ಜಿನಭಕ್ತನಾಗಿದ್ದಿರಬೇಕೇ ವಿನಹ ಜೈನಮತಾವಲಂಬಿ ಯಾಗಿದ್ದನೆಂದು ಹೇಳಲು ಬರುವುದಿಲ್ಲ.

ಮೂರನೆಯ ಮಂಗರಸನ ಈ ವಂಶಾವಳಿಯನ್ನು ಒಪ್ಪಿಕೊಂಡಾಗ ಮತ್ತೊಂದು ಸಮಸ್ಯೆ ತಲೆ ಎತ್ತುತ್ತದೆ. ಈವರೆಗೆ ಮೂರನೆಯ ಮಂಗರಸನು ಕುಮಾರರಾಮಸಾಂಗತ್ಯದ ಕರ್ತೃವಾದ ನಂಜುಂಡನ ದೊಡ್ಡಪ್ಪ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈಗ ಅದು ಸರಿಯಲ್ಲವೆಂಬುದು ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ. ಕವಿ ಚರಿತೆಕಾರರು ನಂಜುಂಡನನ್ನು ಕುರಿತು ಬರೆಯುತ್ತ "ಈತನು ಜಯನೃಪ ಕಾವ್ಯವೇ ಮೊದಲಾದ ಗ್ರಂಥಗಳನ್ನು ಬರೆದ ಮಂಗರಸನ (1508) ಸಹೋದರನ ಮಗನೆಂದು ವ್ಯಕ್ತವಾಗುತ್ತದೆ. ಮಂಗರಸನು ಶುದ್ಧ ಜೈನನಾಗಿದ್ದು ಅವನ ಸಹೋದರನ ಮಗನಾದ ಈತನು ಶೈವಮತದಲ್ಲಿ ಪಕ್ಷಪಾತವನ್ನು ತೋರ್ಪಡಿಸಿರುವುದನ್ನು ನೋಡಿದರೆ ಜೈನ

---

1. ಶ್ರೀಕಂಠತೀರ್ಥ ಚಂಗಾಳ್ವರು ಬಾ. ಲ. ಗೋಪಾಲ್ ಪು. 707.

ಮತವನ್ನು ಬಿಟ್ಟು ಶೈವಮತವನ್ನು ಅವಲಂಬಿಸಿರಬಹುದೆಂಬ ಊಹೆ ಹುಟ್ಟುತ್ತದೆ* ಮುಂದೆ ಈ ಇಬ್ಬರು ಕವಿಗಳನ್ನು ಕುರಿತು ಬರೆದ ಎಲ್ಲ ವಿದ್ವಾಂಸರೂ ನಂಜುಂಡನಿಗೆ ಮಂಗರಸನು ಹಿರಿಯಯ್ಯ ಎಂದರೆ ದೊಡ್ಡಪ್ಪ ಎಂದಿದ್ದಾರೆ. ಈ ವಂಶಾವಳಿಯಲ್ಲಿ ಬರುವ

---

* ಕರ್ನಾಟಕ ಕವಿಚರಿತೆ, ಆರ್. ನರಸಿಂಹಾಚಾರ್, ಸಂ ೩. ಪುಟ ೨೦೩.

2 ನೇಮಿಜಿನೇಶ ಸಂಗತಿಯೇ ಮೊದಲಾದ ಕಾವ್ಯಗಳನ್ನು ಬರೆದಿರುವ ಮಂಗರಸನು, ಸಮ್ಯಕ್ತ್ವ ಕೌಮುದಿಯನ್ನು ಶಾಲಿವಾಹನ ಶಕ ೧೪೩೧ನೆಯ ವರ್ಷದ ಆಶ್ವಯುಜ ಶುಕ್ಲಪಕ್ಷ ಸೋಮವಾರದಂದು ಬರೆದು ಮುಗಿಸಿದ್ದಾನೆ. (ಕ್ರಿ. ಶ. 1509 ನೆಯ ಸೆಪ್ಟೆಂಬರ್ ಹದಿನೈದನೆಯ ದಿನ) ಈತನಿಗೆ ನಂಜುಂಡ ಕವಿಯು ಚಿಕ್ಕಪ್ಪ (ಸ ಮಗ) ನಾಗಬೇಕು.

ರಾಮನಾಥ ಚರಿತೆ ಸಂ. ಎಚ್. ದೇವೀರಪ್ಪ — ಅರಿಕೆ I

3 ಜಯನೃಪ ಕಾವ್ಯವೇ ಮೊದಲಾದ ಗ್ರಂಥಗಳನ್ನು ರಚಿಸಿರುವ ಮಂಗರಸನ ತಂದೆಯಾದ ವಿಜಯ ನೃಪಾಲನೂ ಇದೇ ವಿಶೇಷಣಗಳಿಂದ ಸಂಬೋಧಿತನಾಗಿರುವುದರಿಂದ ನಂಜುಂಡನು ಮಂಗರಸನ ಸಹೋದರನ ಮಗನಾಗಿರಬೇಕು.

ಕುಮಾರ ರಾಮ ಸಾಂಗತ್ಯ ಸಂಗ್ರಹ. ಎಸ್. ಅನಂತರಂಗಾಚಾರ್


4 ಈ ಕೃತಿಯನ್ನು ರಚಿಸಿರುವವರಲ್ಲಿ ಪ್ರಸಿದ್ಧನಾಗಿರುವವನು ಕವಿ ನಂಜುಂಡ. ವಿಜಯ ನೃಪಾಲನಿಗೆ ಮೂರು ಮಂದಿ ಮಕ್ಕಳು. ಅವರಲ್ಲಿ ಮಂಗರಸನೂ ಒಬ್ಬ. ಮಾಧವ ಮತ್ತೊಬ್ಬ. ಮಾಧವನ ಮಗನೇ ಕುಮಾರರಾಮ ಸಾಂಗತ್ಯದ ಕರ್ತೃವಾದ ನಂಜುಂಡ ಇದರಿಂದ ಮಂಗರಸನು ನಂಜುಂಡನಿಗೆ ಹಿರಿಯಯ್ಯನೆಂಬುದು ಸ್ಪಷ್ಟಪಡುತ್ತದೆ.

ಸೂಪಶಾಸ್ತ್ರ, ಸಂ. ಎಸ್. ಎನ್. ಕೃಷ್ಣ ಜೋಯಿಸ್ ಪುಟ xvii

5 Madhava must have been a brother of mangarasa who was the author of Jayanripa Kavya and other works and died in 1508

M. A. R. 1929 **page** 36

6 ಮಂಗರಸ ಮತ್ತು ನಂಜುಂಡರ ಕೃತಿಗಳಲ್ಲಿ ಕಾಣುವ ಸ್ವಪರಿಚಯಾತ್ಮಕವಾದ ವಿವರಣೆಗಳ ಪರಸ್ಪರ ತುಲನೆ ಸಮನ್ವಯಗಳಿಂದ ಅವರ ವಂಶವೃಕ್ಷವನ್ನು ಮುಂದೆ ಕಂಡಂತೆ ರಚಿಸಬಹುದೆಂದು ತೋರುತ್ತದೆ.



ಇಮ್ಮಡಿ ಮಹಾದೇವರು ಮತ್ತು ಇಮ್ಮಡಿ ವಿಜಯರು ಈ ತಪ್ಪು ಗಣಿಕೆಗೆ ಕಾರಣವೆಂದು ಕಾಣುತ್ತದೆ. ಅವರ ಜೊತೆಗೆ ಅನಂತರ ಈ ವಂಶದ ಬಗೆಗಿನ ವಿವರಗಳನ್ನು ಮೈಸೂರು ಅರಸರ ಸಂಬಂಧ ದೊಂದಿಗೆ ಬೆರೆಸಿ ಅವರ ಹೆಸರಿನ ಮುಂದೆ 'ಒಡೆಯರ್' ಅಂಕಿತ ಗಳನ್ನು ಸೇರಿಸಲಾಗಿದೆ. ಇದನ್ನು ಅಧಿಕೃತವೆಂದು ಪರಿಗಣಿಸುವ ಅವಶ್ಯಕತೆಯೇನೂ ಕಂಡುಬರುವುದಿಲ್ಲ. ಹೀಗಾಗಿ ಮೂರನೆಯ ಮಂಗರಸ ಮತ್ತು ಕುಮಾರರಾಮ ಸಾಂಗತ್ಯದ ಕರ್ತೃ ನಂಜುಂಡರ ಸಂಬಂಧವನ್ನು ಮರು ಪರಿಶೀಲಿಸಲಾಗಿದೆ.

ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖೆಯ ವರದಿಗಳಲ್ಲಿ ಮಂಗರಸ ಮತ್ತು ಅವನ ವಂಶಸ್ಥರ ವಿಚಾರ ಹೇಳಿದೆ. ಈ ವಂಶದವರ ಬಗೆಗಿನ ಅಧಿಕೃತ ಮೂಲಹಸ್ತ ಪ್ರತಿಗಳನ್ನು ಕರ್ನಲ್ ಮೆಕೆಂಜಿ ತೆಗೆದುಕೊಂಡು ಹೋದನೆಂದು ಹೇಳಲಾಗಿದೆ. ಈ ವಾರ್ಷಿಕ ವರದಿಯ ಹೇಳಿಕೆಗಳನ್ನು ಮೈಸೂರಿನ ಚತುರಂಗ ಬಸವರಾಜ ಅರಸಿನವರ ಬಳಿಯಿದ್ದ ನಕಲುಗಳಿಂದ ಸಿದ್ಧಪಡಿಸಲಾಗಿದೆ. ಈ ಹಿಂದೆಯೇ ಹೇಳಿದಂತೆ ಈ ವಂಶದಲ್ಲಿ ಬರುವ ಒಂದೇ ಹೆಸರಿನವರನ್ನು ತಪ್ಪಾಗಿ ಅರ್ಥಮಾಡಿಕೊಂಡುದೆ ಈ ತೊಡಕಿಗೆ ಕಾರಣವಾಗಿದೆ. ಈ ಹಿಂದೆ ಮಂಗರಸನ ವಂಶಾವಳಿಯನ್ನು ನಿರೂಪಿಸಲು ಉದಾಹರಿಸಿರುವ ಪ್ರಾಚ್ಯ ಸಂಶೋಧನಾ ಇಲಾಖೆಯ 1925 ರ ವರದಿಯನ್ನು ಕುರಿತು "ನಾಲ್ಕನೆಯ ಲಿಖಿತದಲ್ಲಿ ಮಂಗರಸನ ಪೂರ್ವಜರ ಹೆಸರುಗಳನ್ನು ಹೇಳ ಲಾಗಿದೆ. ಇಲ್ಲಿನ ಸಂಗತಿಗಳು ತುಂಬಾ ತೊಡಕಾಗಿವೆ. ಇತ್ತೀಚಿನ ರಚನೆಯಾದ್ದರಿಂದ ಹೀಗಾಗಿರಬಹುದು. ಮಂಗರಸನ ತಂದೆಯಾದ ವಿಜಯರಾಜ ಒಡೆಯರ್ ಎಂಬಾತನು ರಾಯರಾವುತರ ಮೇಲೆ ಹೋರಾಡಿ ಸತ್ತನೆಂದೂ ಮಂಗರಸನು ತನ್ನ ಮಗನಾದ ಜಯರಾಜೇಶ್ವರನನ್ನು ತನ್ನ ದಾಯಾದಿಯಾದ ನಂಜುಂಡನ ಪೋಷಣೆಗೆ ಒಪ್ಪಿಸಿ ತಾನು ಸನ್ಯಾಸಿಯಾದನೆಂದೂ ತಿಳಿದು ಬರುತ್ತದೆ.[1]" ಎಂದು ಅಭಿಪ್ರಾಯವಿದೆ. ಈ ನಾಲ್ಕನೆಯ ಹೇಳಿಕೆಯಲ್ಲಿ ವಿದ್ವಾಂಸರ ಪ್ರಕಾರ ತೊಡಕಾಗಿರುವ ಸಂಗತಿಗಳು ಎರಡು. ಒಂದು 'ಒಡೆಯರ್' ಎಂಬ ವಿಶೇಷಣ. ಮತ್ತೊಂದು ಮಂಗರಸ ತನ್ನ ಮಗ ಜಯರಾಜನನ್ನು ನಂಜುಂಡನ ರಕ್ಷಣೆಗೆ ಒಪ್ಪಿಸಿ ಸನ್ಯಾಸಿಯಾದನೆಂಬುದು. 'ಒಡೆಯರ್' ವಿಶೇಷಣ ಮೈಸೂರು ಅರಸರೊಂದಿಗೆ ಇವರು ಸಂಪರ್ಕ ಬೆಳೆಸಿಕೊಂಡನಂತರ ಸೇರಿಸಿದುದು. ಇನ್ನು ಮಂಗರಸನ ತಂದೆ ರಾಯರಾವುತರ ಮೇಲೆ ಯುದ್ಧಮಾಡಿ ಸತ್ತದ್ದು ಮತ್ತು ಜಯರಾಜನನ್ನು ದಾಯಾದಿ ನಂಜುಂಡನಿಗೆ ಒಪ್ಪಿಸಿದ್ದು ಮಂಗರಸನ ನಿಜವಾದ ವಂಶಾವಳಿಯಂತೆ ಈ ಎರಡೂ ಘಟನೆಗಳೂ ಸರಿಯಾಗಿವೆ. ಇವುಗಳಲ್ಲಿ ಯಾವ ತೊಡಕೂ ಕಂಡು ಬರುವುದಿಲ್ಲ.

ಹೊಯ್ಸಳರ ಅವನತಿಯೊಂದಿಗೆ ಅನೇಕ ಸಣ್ಣಪುಟ್ಟ ರಾಜರುಗಳೆಲ್ಲ ಸ್ವತಂತ್ರ ರಾದರು. ಹೀಗೆ ಸ್ವಾತಂತ್ರ್ಯವನ್ನು ಘೋಷಿಸಿಕೊಂಡವರಲ್ಲಿ ಚಂಗಾಳ್ವರು ಮತ್ತು

---

1 ಕುಮಾರರಾಮನ ಸಾಂಗತ್ಯಗಳು ... ಡಾ. ಜಿ. ವರದರಾಜರಾವ್. [illegible]

ಉಮ್ಮತ್ತೂರಿನ ರಾಜರೂ ಸೇರುತ್ತಾರೆ. ಸುಮಾರು ಮುನ್ನೂರು ವರ್ಷಗಳ ಕಾಲ ಮರೆಯಾಗಿದ್ದ ಚಂಗಾಳ್ವರು ಮತ್ತೆ ತಲೆ ಎತ್ತಿ ನಂಜರಾಜ ಪಟ್ಟಣದಿಂದ ಆಳುತ್ತಿದ್ದ ಸಂಗತಿಯನ್ನು ಈ ಹಿಂದೆ ಹೇಳಿದೆ. ಪುನಃಶ್ಚೇತನಗೊಂಡ ಚಂಗಾಳ್ವವಂಶದ ಉನ್ನತಿಗೆ ಕಾರಣನಾದ ನಂಜರಾಜನು 1502 ರಿಂದ 1533 ರವರೆಗೆ ಆಳಿದನೆಂದು ತಿಳಿದು ಬರುತ್ತದೆ. "ನಂಜರಾಜನು (1502 ರಲ್ಲಿ) ಅಧಿಕಾರಕ್ಕೆ ಬಂದ ಕೆಲವು ವರ್ಷಗಳಲ್ಲಿಯೇ ಎಂದರೆ 1509 ರಲ್ಲಿ ಕೃಷ್ಣದೇವರಾಯನು ಪಟ್ಟಕ್ಕೆ ಬಂದನು. ಆತನು ಆಡಳಿತವನ್ನು ವಹಿಸಿಕೊಂಡ ಕೂಡಲೆ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದಾಗ ಹೊಯ್ಸಳ ನಾಡಿಗೂ ಬಂದಿದ್ದನೆಂದು ಚರಿತ್ರೆಯಲ್ಲಿ ವರ್ಣಿತವಾಗಿದೆ. ಆ ಸಂದರ್ಭದಲ್ಲಿ ಸ್ವತಂತ್ರನಾಗಿಯೇ ಇರಲು ಯತ್ನಿಸಿದ ಚಂಗಾಳ್ವ ನಂಜರಾಜನಿಗೂ ಕೃಷ್ಣದೇವರಾಯನ ಸೈನ್ಯಕ್ಕೂ ಯುದ್ಧ ನಡೆದಿರಬಹುದು.[1]" ಕುಮಾರ ರಾಮಸಾಂಗತ್ಯದ ಕರ್ತೃವಾದ ನಂಜುಂಡನೂ ಈ ವಿಚಾರವನ್ನು ಹೇಳಿದ್ದಾನೆ.

ತುರುಗದಂಡಕೆ ಬಲು ಝಲ್ಲಿಯ ಕಟ್ಟಿದ
ಬಿರುದುಳ್ಳರಾವುತ ನಿಮ್ಮ
ಹಿರಿಯಯ್ಯ ನಿಮ್ಮ ಕಿಱಿಯ ತಂದೆ ವಿಜಯನೀ
ಧರಣಿಯಱಿಯೆ ಘೋರದೊಳಗೆ

ರಾಯದಳವ ಕಾಣುತ ತನ್ನ ಪತಿ ನಂಜ
ರಾಯನ ಮುಂದೆ ಕುದುರೆಯ
ರಾಯರಾವುತರ ಮೇಲೇಱಿ ತಿವಿದು ಸುರ
ರಾಯನಗರಿಗೆಯ್ದಿದನು.[2]

ಮೇಲಿನ ಪದ್ಯದಲ್ಲಿ ಬರುವ 'ಹಿರಿಯಯ್ಯ' 'ಕಿಱಿಯ ತಂದೆ' ಎಂಬ ಮಾತುಗಳು ಇಲ್ಲಿ ಬಹು ಮುಖ್ಯ. ವಾಸ್ತವವಾಗಿ ಇಲ್ಲಿ ಹಿರಿಯಯ್ಯ ತಾತನಿಗೂ ಕಿರಿಯತಂದೆ ಚಿಕ್ಕಪ್ಪನಿಗೂ ಅನ್ವಯವಾಗುತ್ತದೆ. ನಂಜುಂಡ ಈ ಪದ್ಯಗಳಲ್ಲಿ ತನ್ನ ತಾತ ಒಂದನೆಯ ಮಾಧವನನ್ನೂ ಚಿಕ್ಕಪ್ಪ ವಿಜಯನನ್ನೂ ಸ್ಮರಿಸಿದ್ದಾನೆ. ಪ್ರಾಚ್ಯ ಸಂಶೋಧನಾ ಇಲಾಖೆಯ ನಾಲ್ಕನೆಯ ವರದಿ ಸಹ ವಿಜಯನನ್ನು ಕುರಿತು " He fought with Raya Rauthas and died in the battle. His son and successor was Mangarasa "[3] ಎಂದೇ ಹೇಳುತ್ತದೆ. ಆದುದರಿಂದ ಮಂಗರಸನ ತಂದೆ ವಿಜಯನು

---


1 ಕುಮಾರರಾಮ ಸಾಂಗತ್ಯಗಳು ಡಾ. ಜಿ. ವರದರಾಜರಾವ್ ಪುಟ ೨೦

2 [illegible]

3 M. A. R. 1925 page 16

ನಂಜುಂಡನಿಗೆ ಚಿಕ್ಕಪ್ಪನಾಗುತ್ತಾನೆ. ಇದರಿಂದ ಪ್ರಾಚ್ಯ ಸಂಶೋಧನಾ ಸಂಸ್ಥೆಯ ನಾಲ್ಕನೆಯ ಹೇಳಿಕೆ ಗೊಂದಲವನ್ನುಂಟುಮಾಡುತ್ತದೆ ಎಂದು ಹೇಳುವುದು ಸರಿಯಲ್ಲ.

ನಂಜುಂಡ ಮತ್ತು ಮೂರನೆಯ ಮಂಗರಸರ ಸಂಬಂಧವನ್ನು ಕುರಿತ ಮತ್ತೊಂದು ಹೇಳಿಕೆಯೂ ಮೇಲಿನ ವಾದವನ್ನೇ ಸಮರ್ಥಿಸುತ್ತದೆ. ಅದು ಹೀಗಿದೆ "ಮತ್ತಂ ಕಲ್ಲಹಳ್ಳಿಯ ವಿಜಯ ಭೂಪಾಲ ಸಚಿವಾಗ್ರಗಣ್ಯ ಸುಪುತ್ರ ಮಂಗರಸನೆಂಬಂ ತದಗ್ರಜಂ ನಂಜುಂಡರ ಸೆಂದಿರಲಾ ಕಾಲದೊಳ್ ಗಂಗನೆಂಬಂ ಕುಮ್ಮಟದ ಬೇಡರ ರಾಮಸಂಗೀತವೆಂದು ಕೃತಿಯಂ ಮಾಡಿ ಓದುತಿಪ್ಪುದು ನಿಜಗಣಕೆಯಿಂ ಕೇಳಿಯಾತಂ ಲಿಂಗಧಾರಿಯಾಗಿ ವೀರಶೈವಾಚಾರಿಯಾಗಿರ್ದವರಿಂದಾ ರಾಮನ ಸಂಗೀತಮಂ ವಿಶಾಲವಾಗಿ ಮಾಡಲೆಂದು ತೊಡಗಿ ತನ್ನ ತಮ್ಮನಪ್ಪ ಮಂಗರಸಂ ಜಿನಭಕ್ತರಡಿಗಳುಸೆಯುದಂ ತೊಡಗಿ ಮೂವತ್ತೆರಡು ಸಂಧಿಯಂ ಮಿಥ್ಯಾಮಾರ್ಗವಿಡಿದು ಕರ್ನಾಟ ಭಾಷೆಯಿಂ ಶೃಂಗಾರರಸಪೂರಿತವಾಗೆ ಕಿರಾತ ಶುಚಿಯಂ ವರ್ಣಿಸಿ ಕೃತಿಯಂ ಮಾಡಿ ಜಗಮಂ ಮೆಚ್ಚಿಸಲದಕ್ಕೆ ಮಂಗರಸನ ಗುರುಗಳು ನಿರಂಜಿಸಿ ಮಿಥ್ಯಾಕಥೆಯಿಂ ಪಾಪ ಸಂಪಾದನೆಯಾಗಿ ಕೆಟ್ಟುಪೋಪೆಯೆನಲವರ ಪ್ರಾಯಶ್ಚಿತ್ತಕ್ಕೆ 'ಹರಿವಂಶಮಂ' 'ಪ್ರಭಂಜನ ಕಥೆಯಂ' 'ಶ್ರೀಪಾಲಚರಿತೆಯಂ' ಜಯಕುಮಾರ ಪರಿವರ್ಧಿನೀಷಟ್ಪದಿಯಂ ಕೌಮುದೀಷಟ್ಪದಿಯೆಂಬೀ ಪಂಚಕಾವ್ಯಮಂ ಸಂಸ್ಕೃತ ವಸ್ತುಕಗಳಿಂ ತೆಗೆದು ಕನ್ನಡದಿ ಪಂಚಕೃತಿಯಂಮಾಡಿದ[1]." ದೇವಚಂದ್ರನ ಈ ಹೇಳಿಕೆಯು ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಮಂಗರಸನು ನಂಜುಂಡನಿಗೆ ತಮ್ಮನಾಗಬೇಕೆಂದು ಈ ಹೇಳಿಕೆಯಿಂದ ತಿಳಿಯುತ್ತದೆ. ಇದನ್ನು ಪ್ರಾಚ್ಯ ಸಂಶೋಧನಾ ಇಲಾಖೆಯ ನಾಲ್ಕನೆಯ ಹೇಳಿಕೆ ಮತ್ತು ಮಂಗರಸನ ಪದ್ಯಗಳೂ ಸಮರ್ಥಿಸುತ್ತವೆ. ಈ ಆಧಾರಗಳಿಂದ ಮಂಗರಸ ಮತ್ತು ನಂಜುಂಡರ ಸಂಬಂಧವನ್ನು ಹೀಗೆ ರೂಪಿಸಬಹುದು.



ನಂಜುಂಡನು ಹಿರಿಯಯ್ಯ ಎಂದು ಒಂದನೆಯ ಮಾಧವನನ್ನೂ ಕಿರಿಯ ತಂದೆ ಎಂದು ಎರಡನೆಯ ವಿಜಯನನ್ನೂ ಕುರಿತು ಈ ಹಿಂದೆ ಉದಾಹರಿಸಿರುವ ಪದ್ಯದಲ್ಲಿ ಹೇಳಿಕೊಂಡಿದ್ದಾನೆಂಬುದು ಸ್ಪಷ್ಟವಾಗುತ್ತದೆ.

---

1 ರಾಜಾವಳಿಕಥೆ ದೇವಚಂದ್ರ ಹಸ್ತಪ್ರತಿ ಕೆ. ೩. ೭೦೦ [illegible]

ಮಂಗರಸ ಮತ್ತು ನಂಜುಂಡರ ಸಂಬಂಧವನ್ನು ವಿದ್ವಾಂಸರು ತಪ್ಪಾಗಿ ಗುರುತಿಸಲು ಪ್ರಾಚ್ಯ ಸಂಶೋಧನಾ ಇಲಾಖೆಯ ನಾಲ್ಕನೆಯ ಹೇಳಿಕೆಯಲ್ಲಿ ಬರುವ "Entrusted his young son Jayarajeswara to the care of his Uncle's son Nanjundarasu[1]" ಎಂಬ ಹೇಳಿಕೆ ಕಾರಣವಾಗಿದೆ. ಅದೇ ಹೇಳಿಕೆ ಮುಂದುವರಿದು "Nanjundarasu had administerd the Kingdom for one patta. Nandhinathayya general of Raja Vadeyar invaded the kingdom and Nanjundarasu was wounded in battle and died leaving the Kingdom to Jayaraja Vadeyar[3]" ಎಂದಿದೆ. ಈ ಹೇಳಿಕೆಯಲ್ಲಿ ಬರುವ ನಂಜುಂಡ ಮತ್ತು ರಾಮನಾಥ ಸಾಂಗತ್ಯ ಬರೆದ ನಂಜುಂಡ ಒಂದೇ ಎಂದು ತಿಳಿದು ವಿದ್ವಾಂಸರು ಮೂರನೆಯ ಮಂಗರಸನನ್ನು ನಂಜುಂಡನ ದೊಡ್ಡಪ್ಪ ಎಂದು ಕರೆದಿದ್ದಾರೆ. ಆದರೆ ವಾಸ್ತವವಾಗಿ ಈ ಇಬ್ಬರೂ ಬೇರೆ ಬೇರೆ ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಕುಮಾರರಾಮನ ಸಾಂಗತ್ಯ ಬರೆದ ನಂಜುಂಡ ಮೈಸೂರಿನ ರಾಜ ಒಡೆಯರ ಕಾಲದವರೆಗೆ ಬದುಕಿದ್ದ ಎಂಬುದು ನಂಬಲಸಾಧ್ಯವಾದ ಸಂಗತಿಯಾಗುತ್ತದೆ. ಮೂರನೆಯ ಮಂಗರಸ ಬಹಳ ಕಾಲ ಬದುಕಿದ್ದನೆಂದೂ, ಅವನಿಗೆ ಕೊನೆಗಾಲದಲ್ಲಿ ಒಬ್ಬ ಮಗನಾದನೆಂದೂ ತಿಳಿದುಬರುತ್ತದೆ. ಅವನೇ ಜಯರಾಜ. ಈ ಜಯರಾಜನನ್ನು ತನ್ನ ಪೋಷಣೆಗೆ ತೆಗೆದುಕೊಂಡವನು ಚಂಗಾಳ್ವ ನಂಜುಂಡ. ಇವನೂ ಕಲ್ಲಹಳ್ಳಿಯ ರಾಜರಿಗೆ ದಾಯಾದಿ ಎಂಬ ಸಂಗತಿ ಈ ಹಿಂದೆಯೇ ಬಂದಿದೆ. "Nanjundaraja, Srikantaraja and other arsus of Nanjaraja Pattna called themselves the descendents of Changalvas in their incriptions and were saivities[2]."

ಹದಿನೇಳನೆಯ ಶತಮಾನದ ಅನೇಕ ಶಾಸನಗಳಲ್ಲಿ "ಶ್ರೀಮನ್ಮಹಾಮಂಡಳೀಕ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಶ್ರೀ ವೀರನಂಜುಂಡದೇವ ಮಹಾ ಅರಸುಗಳ ಕುಮಾರ ಶ್ರೀಕಂಠದೇವ" ಎಂದು ಹೇಳಿದೆ. ಮಂಗರಸ ತನ್ನ ಮಗ ಜಯರಾಜನನ್ನು ಒಪ್ಪಿಸಿದ್ದು ಈ ಚಂಗಾಳ್ವ ನಂಜುಂಡನಿಗೇ ವಿನಃ ಕುಮಾರರಾಮನ ಸಾಂಗತ್ಯ ಬರೆದ ನಂಜುಂಡನಿಗಲ್ಲ.

ನಂಜುಂಡ ಮತ್ತು ರಾಜಒಡೆಯನ ದಂಡನಾಥ ನಂದಿನಾಥಯ್ಯನ ಮಧ್ಯೆ ಯುದ್ಧ ನಡೆದು ನಂಜುಂಡ ಗಾಯಗೊಂಡು ಸತ್ತ ಉಲ್ಲೇಖವೂ ನಾಲ್ಕನೆಯ ಹೇಳಿಕೆಯಲ್ಲಿಯೇ ಬರುತ್ತದೆ. ಸರಿಸುಮಾರಾಗಿ ಇದೇ ಕಾಲದಲ್ಲಿ ಮೈಸೂರಿನ ರಾಜ ಒಡೆಯರು

---

1 Epigrahica Carnatica, Vol.IV, Page17. 2 M.A.R. 1925, Page 15.
3 E.C. Vol. VI, Page 267.

ರಾಜ್ಯ ವಿಸ್ತಾರ ಮಾಡಿದ ಬಗ್ಗೆ ಆಧಾರಗಳು ದೊರೆಯುತ್ತವೆ. "Raja Wodeyar extended the possessions of his family over all the south of the present Mysore District......His rule was remarkable for the rigour and severity which he Exercised towards the subordinate Wodeyars" ಎಂಬ ಹೇಳಿಕೆಯನ್ನು ಗಮನಿಸಬೇಕು. ಸ್ವತಂತ್ರನಾಗಿದ್ದ ಚಂಗಾಳ್ವ ನಂಜುಂಡನನ್ನು ರಾಜ ಒಡೆಯರು ಸೋಲಿಸಿ ಆ ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದು ಕೊಂಡರು ಎಂದು ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಆದರೆ ಈ ನಂಜುಂಡನ ಮಗ ಶ್ರೀಕಂಠರಾಜ ಸ್ವತಂತ್ರನಾಗಿದ್ದ ಬಗೆಗೆ ಶಾಸನ ಉಲ್ಲೇಖಗಳಿವೆ. ಮೂರನೆಯ ಮಂಗರಸನ ಮಗ ಜಯರಾಜನ ಬಗೆಗೆ ಹೆಚ್ಚು ವಿವರಗಳು ದೊರೆಯುವುದಿಲ್ಲ. ಈ ಕಾರಣದಿಂದಾಗಿ ಮಂಗರಸನಿಗಿಂತ ಮುಂಚೆಯೇ ಅವನಿಗಿಂತ ಹಿರಿಯನಾದ ನಂಜುಂಡ ತೀರಿಕೊಂಡಿದ್ದನೆಂದು ಕಾಣುತ್ತದೆ.

ಮಂಗರಸನೂ ಒಂದು ಕುಮಾರರಾಮ ಸಾಂಗತ್ಯ ಬರೆದಿರುವನೆಂಬ ಊಹೆಯನ್ನು ಕೆಲವು ವಿದ್ವಾಂಸರು ಮಾಡಿದ್ದಾರೆ. ಅದು ಸರಿಯಲ್ಲವೆಂದು ಕಾಣುತ್ತದೆ. ನಂಜುಂಡನ ರಾಮನಾಥ ಸಾಂಗತ್ಯವನ್ನು ಮಂಗರಸ ತಿದ್ದಿಕೊಟ್ಟಿರಬೇಕು. ಅಲ್ಲದೆ ದೇವಚಂದ್ರ ನಂಜುಂಡನು "ರಾಮನ ಸಂಗೀತಮಂ ವಿಶಾಲವಾಗಿ ಮಾಡಲೆಂದು ತೊಡಗಿ ತನ್ನ ತಮ್ಮನಪ್ಪ" ಮಂಗರಸನೊಂದಿಗೆ ಮೂವತ್ತೆರಡು ಸಂಧಿಯನ್ನು ಮಾಡಿದನೆಂದು ಹೇಳಿದ್ದಾನೆ. ಅಷ್ಟರಲ್ಲಿ ಮಂಗರಸನ ಗುರುವಿಗೆ ಈ ವಿಚಾರ ತಿಳಿದು "ಮಿಥ್ಯಾಕಥೆಯಿಂ ಪಾಪ ಸಂಪಾದನೆಯಾಗಿ ಕೆಟ್ಟುಪೋಪೆ" ಎಂದು ನಿರಂಜಿಸಿದನು. ಇಲ್ಲಿ ಮೂವತ್ತೆರಡು ಸಂಧಿಯನ್ನು ಒಟ್ಟಿಗೇ ಮಾಡಿದರು ಎಂಬುದು ಮುಖ್ಯ. ಏಕೆಂದರೆ ನಂಜುಂಡನು ಕೇವಲ ಸ್ಫೂರ್ತಿಯಿಂದ ಕವಿಯಾದಂತೆ ಕಾಣುತ್ತದೆ. ಪಾಂಚಾಲಿಗಂಗನ ಕುಮ್ಮಟದ ರಾಮನ ಸಂಗೀತಮಂ ನಿಜಗಣಿಕೆಯಿಂದ ಕೇಳಿ ಅವನಿಗೆ ಅದನ್ನು ವಿಶಾಲವಾಗಿ ಮಾಡುವ ಮನಸ್ಸಾದಂತೆ ಕಾಣುತ್ತದೆ. ಈ ಕಾರಣದಿಂದ ಅವನು ತನ್ನ ತಮ್ಮನಾದ ಮಂಗರಸನ ಸಹಾಯವನ್ನು ತೆಗೆದುಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಈ ಕಾರಣದಿಂದಲೇ ಮಂಗರಸನೂ ಒಂದು ರಾಮನಾಥ ಸಾಂಗತ್ಯವನ್ನು ಬರೆದಿದ್ದಾನೆಂಬ ಹೇಳಿಕೆ ಹಬ್ಬಿ ಕೊಂಡಿರಬೇಕು. ನಂಜುಂಡ ಕವಿಯ ರಾಮನಾಥ ಚಾರಿತ್ರವನ್ನು ಮಂಗರಸ ತಿದ್ದಿದ್ದಾನೆ ಅಥವಾ ಅಣ್ಣನೊಂದಿಗೆ ಸೇರಿ ರಚಿಸಿದ್ದಾನೆಂಬುದನ್ನು ಶ್ರೀಪಾಲಚರಿತೆ ಮತ್ತು ರಾಮನಾಥ ಚಾರಿತ್ರದ ಪೀಠಿಕಾಪದ್ಯಗಳಲ್ಲಿ ಕಾಣಬಹುದು. ಉದಾಹರಣೆಗೆ ಕೆಳಗಿನ ಎರಡು ಪದ್ಯಗಳನ್ನು ನೋಡಬಹುದು.

---

1 Mysore Gazetter, Hayavadana Rao, Vol. II, Part IV, Page 2437.

ಮೊಳೆಯಿಡುವಗೆಯ ನಡುವ·ನೀರೂಡುವ
ಕಳೆಗೀಳ್ವ ಕೊಬ್ಬನಗ್ಗಿಸುವ
ಬೆಳೆಗೊಯ್ದು ಪೊಱುವ ಪಾಮರೀಜನ
ಬಳಸಿಹುದಾವಕಾಲದೊಳು

ಅಗೆವೊಯ್ದು ಕಳೆಗೀಳ್ದು ಬಿದೆಯ ಬಿತ್ತು ಸಸಿರ
ಬಗೆಯಱಿದೂಡುವ ಸಸಿಯ
ತೆಗೆವ ನಡುವ ನಗುಮೊಗದ ಪಾಮರಿಯರ
ಬಗೆ ಬೆಡಗಾಗಿಹುದಲ್ಲಿ[1]

ಮೇಲೆ ಹೇಳಿರುವ ಪದ್ಯಗಳಿಂದ ಮುಂದೆ ಅನೇಕ ಕಡೆಗೆ ಈ ರೀತಿಯ ಸಾಮ್ಯ ಕಂಡುಬರುತ್ತದೆ. ಇದರಿಂದ ಮಂಗರಸನು ನಂಜುಂಡನ ರಾಮನಾಥ ಚಾರಿತ್ರವನ್ನು ತಿದ್ದಿಕೊಟ್ಟಿದ್ದಾನೆಂಬುದರಲ್ಲಿ ಅನುಮಾನವಿಲ್ಲ. ಈ ಸಂಗತಿಯನ್ನು ಪರಿಶೀಲಿಸುವಾಗ ನಂಜುಂಡ ತನ್ನ ಕಾವ್ಯವನ್ನು ತಿದ್ದಿಕೊಟ್ಟ ಮಂಗರಸನನ್ನು ಏಕೆ ಸ್ಮರಿಸಲಿಲ್ಲ ಎಂಬ ಸಮಸ್ಯೆಯು ತಲೆದೋರುತ್ತದೆ. ನಂಜುಂಡ ಮಂಗರಸನನ್ನು ನೆನೆಯದಿರಲು ಎರಡು ಕಾರಣಗಳಿರುವಂತೆ ಕಾಣುತ್ತದೆ. ಒಂದು ನಂಜುಂಡ ಮಂಗರಸನಿಗಿಂತ ಹಿರಿಯನಾದುದರಿಂದ ಅವನ ಸಹಾಯವನ್ನು ಸ್ಮರಿಸುವ ಪ್ರಮೇಯ ಬರುವುದಿಲ್ಲ. ಮತ್ತೊಂದು ರಾಮನಾಥ ಚಾರಿತ್ರದಂತಹ ಕಾವ್ಯರಚನೆಗೆ ಸಹಾಯ ಮಾಡಿದರೆ ಪಾಪ ಬರುವುದೆಂಬ ಗುರುವಿನ ಎಚ್ಚರಿಕೆಯ ನುಡಿ. ಇವರೊಂದಿಗೆ ಈ ಇಬ್ಬರೂ ಅಪ್ಪಿದ ಧರ್ಮಗಳ ಮಧ್ಯೆ ಇರುವ ಅಂತರ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಆ ಕಾಲದ ಕಾವ್ಯವಸ್ತುವಿನ ಆಯ್ಕೆಯ ಬಗೆಗಿನ ಮನೋಭಾವ. ಕೇವಲ ದೇವಾಧಿದೇವತೆಗಳನ್ನು, ಭಕ್ತರನ್ನು, ಪುಣ್ಯಪುರುಷರನ್ನು ಕುರಿತು ಕಾವ್ಯ ಬರೆಯುವ ಸಂಪ್ರದಾಯ ಆಗಿನ ಕಾಲದ್ದು. ಇಂತಹ ಪರಿಸ್ಥಿತಿಯಲ್ಲಿ ನಂಜುಂಡ ಒಂದು ರೀತಿಯಲ್ಲಿ ಸಮಕಾಲೀನವೆನಿಸಿದ ಒಬ್ಬ ಬೇಡನ ಕಥೆಯನ್ನು ಆಧರಿಸಿ ಕಾವ್ಯ ರಚಿಸಿದುದು ಸಂಪ್ರದಾಯಶರಣರಿಗೆ, ಧರ್ಮಗುರುಗಳಿಗೆ ಸಹಿಸದೇ ಹೋಗಿರಬೇಕು. ಹಾಗೆ ಬಂದ ಟೀಕೆಗಳಿಗೆ ಉತ್ತರವೋ ಎಂಬಂತೆ ನಂಜುಂಡ,

ಇದು ಪುಣ್ಯಕಥೆಯಲ್ಲದು ಪೂರ್ವಚರಿತವ
ಲ್ಲಿದು ಪುರಾಣದೊಳುಕ್ತವಲ್ಲ
ಇದನೆಂತಾಲಿಪೆನೆಂಬ ಸಜ್ಜನ ಕೇ
ಳಿದಕುತ್ತರವ ಪೇಳುವೆನು

---

1 ಶ್ರೀಬಾಲಚರಿತೆ, ಸಂಧಿ ೧, ಪದ್ಯ ೫೦
2 ಕುಮಾರರಾಮನ ಸಾಂಗತ್ಯ, ಸಂ. ಎಚ್. ದೇವೀರಪ್ಪ, ಸಂಧಿ ೧, ಪದ್ಯ ೪೫
3 ಕುಮಾರರಾಮನ ಸಾಂಗತ್ಯ, ಸಂ. ಎಚ್. ದೇವೀರಪ್ಪ, ಸಂಧಿ ೧, ಪದ್ಯ ೯೦

ಎಂದು ಉತ್ತರ ಹೇಳಿದ್ದಾನೆ. ಇದು ಪ್ರಭುಕಥೆಯಲ್ಲಿ, ಪೂರ್ವಚರಿತ್ರದಲ್ಲಿ, ಪುರಾಣದಲ್ಲಿ ಉಕ್ತವಾಗಿಲ್ಲ ಹಾಗಾದರೆ ಇದನ್ನು ಕೇಳುವುದು ಹೇಗೆ ಎಂದು ಮೂದಲಿಸಿದ ಜನರಿಗೆ ನಂಜುಂಡ ತಾನು ಸೂಕ್ತ ಉತ್ತರ ಹೇಳುತ್ತೇನೆ ಎಂದು ಸವಾಲು ಹಾಕಿದ್ದಾನೆ. ಈ ಕಾರಣದಿಂದಲೂ ನಂಜುಂಡ ಮಂಗರಸನನ್ನಾಗಲಿ, ಮಂಗರಸ ನಂಜುಂಡನನ್ನಾಗಲಿ ತಮ್ಮ ಕಾವ್ಯಗಳಲ್ಲಿ ನೆನೆಯದಿರಬಹುದು.

ದೇವಚಂದ್ರನ ರಾಜಾವಳಿ ಕಥೆಯಲ್ಲಿ "ಗಂಗನೆಂಬಂ ಕುಮ್ಮಟದ ಬೇಡರ ರಾಮು ಸಂಗೀತವೆಂದು ಕೃತಿಯುಂ ಮಾಡಿ ಓದುತ್ತಿಪ್ಪುದುಂ" ಎಂಬ ಮಾತಿದೆ. ದೇವಚಂದ್ರನ ಈ ಹೇಳಿಕೆ ಕುಮಾರರಾಮನ ಜೀವನ ಸಾಹಸಗಳನ್ನು ಕುರಿತು ಮೊದಲು ಕೃತಿ ರಚಿಸಿದವನು ಪಾಂಚಾಲಗಂಗನೆಂಬುದನ್ನು ಖಚಿತಪಡಿಸುತ್ತದೆ. ದೇವಚಂದ್ರ ಕೃತಿಯುಂ ಮಾಡಿ ಓದುತ್ತಿಪ್ಪುದುಂ ಎಂದು ಹೇಳಿದರೂ ಗಂಗನ ಕೃತಿ ಜಾನಪದ ಧಾಟಿಯಲ್ಲಿರಬೇಕೆಂದು ತೋರುತ್ತದೆ. ದೇವಚಂದ್ರನೇ ಹೇಳುವ ಬೇಡರ ರಾಮು ಸಂಗೀತಮುಂ ಮಾಡಿ ಎಂಬ ಮಾತೂ ನಂಜುಂಡನು ಈ ಕಥೆಯನ್ನು 'ನಿಜಗಣಿಕೆಯಿಂ ಕೇಳಿ' ಎಂಬ ಮಾತೂ ಗಮನಾರ್ಹವಾಗಿದೆ. ಇದರಿಂದ ಪಾಂಚಾಲಗಂಗನು ಈ ಕಥೆಯನ್ನು ಜನಪದ ಕಾವ್ಯದ ರೀತಿಯಲ್ಲಿ ಕಟ್ಟಿ ಹಾಡುತ್ತಿದ್ದನೆಂದೂ ಅನಂತರ ಸಾಂಗತ್ಯ ರೂಪದಲ್ಲಿ ಅದು ಬರಹ ರೂಪಕ್ಕೆ ಬಂದಿರಬೇಕೆಂದೂ ಕಾಣುತ್ತದೆ. ಏಕೆಂದರೆ ಗಂಗನು ಶಿವಕಥೆಗಳನ್ನು ಹಾಡುತ್ತಾ ಸುತ್ತಾಡುವ ಶಿವಶರಣನಿದ್ದಂತೆ ತೋರುತ್ತದೆ. ಈ ಕಾರಣಗಳಿಂದ ಪಾಂಚಾಲಗಂಗನ ಕೃತಿಯೇ ನಂಜುಂಡನದಕ್ಕಿಂತ ಮೊದಲು ಎಂದು ಹೇಳಬಹುದು. ಏಕೆಂದರೆ "ಮಾನ್ಯ ಎಚ್. ಎಚ್. ವಿಲ್ಸನ್ನರವರು ಪ್ರಕಟಿಸಿರುವ ಕರ್ನಲ್ ಮೆಕೆಂಜಿಯ ಹಸ್ತಪ್ರತಿಗಳ ಪಟ್ಟಿಯಲ್ಲಿ ಕುಮಾರರಾಮನ ಸಾಂಗತ್ಯವನ್ನು ಕುರಿತು ಬರೆದಿರುವ ಟಿಪ್ಪಣಿಯೆ ಸದ್ಯದಲ್ಲಿ ಅತ್ಯಂತ ಪ್ರಾಚೀನವಾದ ಉಲ್ಲೇಖವಾಗಿದೆ." ಮೆಕೆಂಜಿಯ ಈ ಹಸ್ತಪ್ರತಿ ಸಂಗ್ರಹಕಾರ್ಯದಲ್ಲಿ ಪ್ರಧಾನ ಮಾರ್ಗದರ್ಶಕನಾಗಿ ಕೆಲಸ ಮಾಡಿದವನು ದೇವಚಂದ್ರ. ಈತ ಮೆಕೆಂಜಿಯೊಂದಿಗೆ ಕಲ್ಲಹಳ್ಳಿಗೂ ಹೋಗಿದ್ದನೆಂದು ತಿಳಿದುಬರುತ್ತದೆ. ಆದುದರಿಂದ ದೇವಚಂದ್ರನು ನಂಜುಂಡನಿಗಿಂತ ಹಿಂದೆಯೇ ಪಾಂಚಾಲಗಂಗನ ಕೃತಿ ಪ್ರಚಲಿತವಿದ್ದಿತೆಂದು ಹೇಳುವುದನ್ನು ಒಪ್ಪಬೇಕಾಗುತ್ತದೆ. ಅಲ್ಲದೆ ಪಾಂಚಾಲಗಂಗನ ಕೃತಿಯನ್ನು ಕುರಿತು "ಈತನ ಕೃತಿ ಕಾಲಕಾಲಕ್ಕೆ ಬೆಳೆದು ಬಂದಿರಬೇಕೆಂದು ಹೇಳಲು ಅವಕಾಶವುಂಟು. ಅದರ ಮೂಲಸ್ವರೂಪವನ್ನು ಆಧುನಿಕ ಗ್ರಂಥ ಸಂಪಾದನಾ ನಿಯಮಕ್ಕೆ ಅನುಸಾರವಾಗಿ ನಿರ್ಧರಿಸಿದ್ದೇ ಆದರೆ ಆಗ ಕಾಲ ನಿರ್ಣಯಕ್ಕೆ ಸ್ವಲ್ಪ ಸಹಾಯವಾದೀತು. ಸ್ಥೂಲವಾಗಿ ನೋಡಿದಾಗ ಗಂಗನ ಕೃತಿಯ ಸರಳತೆ, ಸಂಕ್ಷಿಪ್ತತೆ ಮತ್ತು ಕೆಲವು ಸಾಂಪ್ರದಾಯಿಕ ವಸ್ತುನಿರೂಪಣೆಗಳಿಂದ ಈ ಕೃತಿ ಜನಪ್ರಿಯವಾದುದೆಂದೂ ಅನೇಕ ವರ್ಷಗಳಿಂದ ಪ್ರಚಾರದಲ್ಲಿದ್ದಿರಬಹುದಾದುದೆಂದೂ

---

1 ಕುಮಾರರಾಮನ ಸಾಂಗತ್ಯಗಳು, [illegible]

ಮನವರಿಕೆಯಾಗುತ್ತದೆ." ಈ ಎಲ್ಲ ಕಾರಣಗಳಿಂದ ನಂಜುಂಡನ ರಾಮನಾಥ ಚಾರಿತ್ರದ ಮೂಲ ಪ್ರೇರಣೆ ಪಾಂಚಾಲಗಂಗನ ಕೃತಿಯೆಂಬುದರಲ್ಲಿ ಅನುಮಾನವಿಲ್ಲ.

ಮಂಗರಸ ಎಂಬ ಹೆಸರಿನ ಕವಿಗಳು ಎಷ್ಟು ಮಂದಿ ಎಂಬ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ವಾದವಿವಾದಗಳು ನಡೆದಿವೆ. ಪ್ರಸ್ತುತ ಶ್ರೀಪಾಲಚರಿತೆಯನ್ನು ಬರೆದ ಮಂಗರಸನನ್ನು ಮೂರನೆಯ ಮಂಗರಸನೆಂದು ಸೂಚಿಸಲಾಗಿದೆ. ಈತನಿಗಿಂತ ಹಿಂದೆ ಇಬ್ಬರು ಮಂಗರಸರಿದ್ದರೆಂಬುದನ್ನು ಕವಿ ಚರಿತೆಕಾರರು ಹೇಳಿದ್ದಾರೆ. ಅವರೆಂದರೆ 1360 ರ ಮಂಗರಾಜ ಮತ್ತು 1398 ರ ಅಭಿನವ ಮಂಗರಾಜ. ಮೊದಲನೆಯವನು ಖಗೇಂದ್ರಮಣಿದರ್ಪಣವೆಂಬ ವೈದ್ಯ ಗ್ರಂಥವನ್ನು ಎರಡನೆಯವನು ಅಭಿನವ ನಿಘಂಟನ್ನು ರಚಿಸಿದ್ದಾರೆ. "ಹಿಂದೆ ಚರ್ಚಿಸಿದ ಮೂರು ವಂಶವೃಕ್ಷಗಳನ್ನು ಒಂದೆಡೆಗೆ ಸೇರಿಸಿದರೆ ಒಂದೇ ಮನೆತನದ ವಂಶವೃಕ್ಷವಾಗಲಿದೆ. ಮತ್ತು ವಿಜಯನಗರದ ಹರಿಹರರಾಜನಿಂದ ಪ್ರೌಢದೇವರಾಯನ ಕಾಲದವರೆಗಿನ (೧೩೩೬–೧೪೪೬) ೧೦೦ ವರ್ಷಗಳ ರಾಜಕೀಯ ಹಿನ್ನೆಲೆ ಕಣ್ಣ ಮುಂದೆ ನಿಲ್ಲುತ್ತದೆ[2]" ಎಂಬ ಅಭಿಪ್ರಾಯವಿದೆ. ಒಂದು ಮತ್ತು ಎರಡನೆಯ ಮಂಗರಸರನ್ನು ಅಷ್ಟು ಸುಲಭವಾಗಿ ಮೂರನೆಯ ಮಂಗರಸನ ಪೂರ್ವಿಕರು ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ಈ ಬಗೆಗೆ ಯಾವ ಆಧಾರಗಳೂ ಇಲ್ಲ. ಹೆಸರಿನ ಸಾಮ್ಯದಿಂದ ಹೀಗೆ ಊಹಿಸುವುದು ಕೇವಲ ಅಭಿಮಾನವಾಗುತ್ತದೆ. ಒಂದುವೇಳೆ ಈ ಇಬ್ಬರು ಹಿರಿಯರು ಮಂಗರಸನ ವಂಶಸ್ಥರಾಗಿದ್ದಲ್ಲಿ ಮೂರನೆಯ ಮಂಗರಸನಾಗಲಿ, ನಂಜುಂಡನಾಗಲಿ ತಮ್ಮ ಕಾವ್ಯಗಳಲ್ಲಿ ಸ್ಮರಿಸದೆ ಇರುತ್ತಿರಲಿಲ್ಲವೆಂಬುದನ್ನು ಗಮನಿಸಬೇಕು. ಸರಿಯಾದ ಆಧಾರಗಳು ದೊರೆತಲ್ಲದೆ ಒಂದು ಮತ್ತು ಎರಡನೆಯ ಮಂಗರಸರು ಮೂರನೆಯ ಮಂಗರಸನ ವಂಶೀಕರೆಂದು ಒಪ್ಪಲು ಸಾಧ್ಯವಾಗದು.

ಕೆಲವು ವಿದ್ವಾಂಸರು "ಇಷ್ಟೇ ಅಲ್ಲ ಕವಿ ಚರಿತೆಕಾರರ ದೃಷ್ಟಿಗೆ ಬೀಳದ ಮತ್ತೊಬ್ಬ ಮಂಗರಸನಿದ್ದಾನೆ. ಈತನ ಕೃತಿ ಮನ್ಮಥಮಣಿದರ್ಪಣ. ಇದು ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಸಮಗ್ರ ಕೃತಿ ದೊರೆತಿಲ್ಲ. ಆರಂಭದಿಂದ ೬೧ ನೆಯ ಸಂಧಿ ೩೩ ನೆಯ ಪದ್ಯದವರೆಗೆ ಗ್ರಂಥವಿದೆ. ಪ್ರಥಮಾಶ್ವಾಸದ, ಕೊನೆಯಲ್ಲಿ 'ಬೊಮ್ಮಣ್ಣ ಕವಿಯ ಕುಮಾರ ರಾಮಣ್ಣ ಅಭಿನವ ಮಂಗರಸ ವಿರಚಿತಮಪ್ಪ ಹರಿವಂಶ ಕಥಾಪುರಾಣದೊಳು ಮನ್ಮಥಮಣಿದರ್ಪಣವನುಸರಿಸಿದ ಟೀಕಾ ಪ್ರಸಂಗ ಪ್ರಥಮಾಶ್ವಾಸಂ' ಎಂದಿದೆ[3]" ಈ ರಾಮಣ್ಣನು ಮೂರನೆಯ ಮಂಗರಸನ ಕಿರಿಯ ವಯಸ್ಸಿನ ಮಗ ಜಯರಾಜನನ್ನು ತನ್ನ ಪೋಷಣೆಗೆ ತೆಗೆದುಕೊಂಡ ಚೆಂಗಾಳ್ವ ನಂಜುಂಡನ ಪ್ರಧಾನನಾದ ಬೊಮ್ಮಣ್ಣನ ಮಗನಿರುವಂತೆ ಕಾಣುತ್ತದೆ. ಬೊಮ್ಮಣ್ಣನೆ ಮೂರನೆಯ ಮಂಗರಸನ ಮಗನನ್ನು

1 ಕುಮಾರರಾಮನ ಸಾಂಗತ್ಯಗಳು. ಡಾ. ಜಿ. ವರದರಾಜನ್, ಪುಟ ೬
2 ಸಮ್ಯಕ್ತ್ವ ಕೌಮುದಿ ಸಂ. ಬಿ. ಜಿ. ಮಹೀಶವಾಡಿ ಪುಟ xxii.
3 ಶಬ್ದಶಾಸ್ತ್ರ. ಸಂ. ಎಸ್. ಎನ್. ಕೃಷ್ಣಜೋಯಿಸ್, ಪುಟ xiii.

ಭಾಮಿನೀ ಷಟ್ಪದಿಯಲ್ಲಿ ಬರೆಯಲಾರಂಭಿಸಿದ್ದನೆಂದೂ ಆತ ರಾಜ ಒಡೆಯರೊಂದಿಗೆ ನಡೆದ ಯುದ್ಧದಲ್ಲಿ ಮಡಿದುದರಿಂದ ಆತನ ಮಗನಾದ ರಾಮಣ್ಣನು ಅದನ್ನು ಬರೆದು ಮುಗಿಸಿದನೆಂದೂ ತಿಳಿದುಬರುತ್ತದೆ.

ಮೇಲೆ ಹೇಳಿದ ಮಂಗರಸನಲ್ಲದೆ "ಭಾರತೀಯ ಜ್ಞಾನಪೀಠದ ಕನ್ನಡ ಪ್ರಾಂತೀಯ ತಾಡಗ್ರಂಥ ಸೂಚಿಯ 134 ನೆಯ ಪುಟದಲ್ಲಿ ಸೂಚಿಸಿರುವಂತೆ ಮೂಡಬಿದ್ರಿಯ ಜೈನ ಮಠದ 367 ನೆಯ ಗ್ರಂಥಾಂಕದ 'ಶೃಂಗಾರ ಸುಧಾಬ್ಧಿ'ಯೆಂಬ ಕಾವ್ಯವು ಕವಿ ಮಂಗರಸ ರಚಿತವಾದುದೆಂದು ತಿಳಿದುಬರುತ್ತದೆ. ಈತನು ಮೇಲೆ ತಿಳಿಸಿದ ಮಂಗರಸರಲ್ಲೊಬ್ಬನೋ ಅಥವಾ ಬೇರೆಯೊಬ್ಬನೋ ಎಂಬ ವಿಚಾರವಾಗಲಿ, ಕಾಲಾದಿ ವಿವರಗಳಾಗಲಿ ಗೊತ್ತಾಗುವುದಿಲ್ಲ[1]" ಎಂಬ ಅಭಿಪ್ರಾಯವಿದೆ. ಈ ಹೇಳಿಕೆಯು ತಪ್ಪುಗ್ರಹಿಕೆಯಿಂದಾದುದು. ಏಕೆಂದರೆ ಮಂಗರಸನು ಶ್ರೀಪಾಲಚರಿತೆಯ ಪ್ರತಿ ಸಂಧಿಯ ಕೊನೆಯ ಪದ್ಯವನ್ನು

ಇದು ಭಾವಕಜನ ಕರ್ಣವಿಭೂಷಣ
ಮಿದು ರಸಿಕರ ಚಿತ್ತದೆಱಿಕ
ಇದು ವಾಣೀ ಮುಖಮಾಣಿಕ್ಯ ಮುಕುರ ಮ
ತ್ತಿದು ಶೃಂಗಾರ ಸುಧಾಬ್ಧಿ

ಎಂದು ಮುಗಿಸುತ್ತಾನೆ. ಪ್ರಾಂತೀಯ ಗ್ರಂಥ ಸೂಚಿಕಾರರು ಇದೊಂದು ಸ್ವತಂತ್ರ ಕಾವ್ಯವೆಂದು ಭ್ರಮಿಸಿ ಹಾಗೆ ಹೇಳಿರಬೇಕು.

ಇಷ್ಟೇ ಅಲ್ಲದೆ, ಮಂಗರಸ ಎಂಬ ಹೆಸರು ಕರ್ನಾಟಕದ ಅನೇಕ ಕಡೆ ದೊರೆಯುತ್ತದೆ. ಗೌರಿಬಿದನೂರು ತಾಲೂಕು ಮಂಚೇನಹಳ್ಳಿ ಹೋಬಳಿ ಕೊಡಿಗಾನಹಳ್ಳಿ ಎಂಬ ಗ್ರಾಮದ ಶಾಸನವೊಂದರಲ್ಲಿ "ಮಂಗರಸರ ಸರ್ವಮಾನ್ಯದ ಹೊಲ ಗದ್ದೆ ಒಂದು ಖ ಈ ಶಾಸನಕ್ಕೆ ಮೂಡಣ ಮಂಗಳ." ಎಂಬ ಉಲ್ಲೇಖ ದೊರೆಯುತ್ತದೆ. ಭೂಮಿಯನ್ನು ಸರ್ವಮಾನ್ಯವಾಗಿ ಪಡೆದ ಈ ಮಂಗರಸನೂ ಪ್ರಸಿದ್ಧನೇ ಆಗಿರಬೇಕು. ಆದರೆ ಈತನ ಬಗೆಗೆ ಹೆಚ್ಚೇನೂ ವಿವರಗಳು ದೊರೆಯುವುದಿಲ್ಲ. ಮಂಗರಸ, ಮಂಗಣ್ಣ, ಮಂಗಪ ಎಂಬ ಹೆಸರುಗಳು ಶಾಸನಗಳಲ್ಲಿ ಅಪರೂಪವೇನಲ್ಲ. ಆದರೆ ಈ ಎಲ್ಲರೂ ಒಂದೇ ವಂಶಾವಳಿಗೆ ಸೇರಿದವರೆಂಬುದಾಗಲಿ, ಪರಸ್ಪರ ಸಂಬಂಧಿಕರೆಂಬುದಾಗಲಿ ಸರಿಯಲ್ಲ ಅಷ್ಟೆ.

ಮಂಗರಸ ಮತ್ತು ನಂಜುಂಡರ ಬಗೆಗಿನ ವಿವರಗಳನ್ನು ಗಮನಿಸುತ್ತಾ ಹೋದಂತೆ ಈ ಇಬ್ಬರು ಕವಿಗಳ ಮತ ವಿಚಾರ ಕುತೂಹಲಕಾರಿಯಾಗುತ್ತದೆ. ಈಗಾಗಲೇ

---

1 ಸೂಪಶಾಸ್ತ್ರ, ಸಂ. ಎನ್. ಎಸ್. ಕೃಷ್ಣಜೋಯಿಸ್, ಅದೇ ಪುಟ XIV

ವಿದ್ವಾಂಸರು ಅಭಿಪ್ರಾಯಪಟ್ಟಿರುವಂತೆ ಮಂಗರಸ ಮತ್ತು ನಂಜುಂಡರ ವಂಶಸ್ಥರು ಜೈನ ಮತೀಯರಾಗಿದ್ದಂತೆ ಕಂಡುಬರುವುದಿಲ್ಲ. ಇವರ ದಾಯಾದಿಗಳಾದ ಚಂಗಾಳ್ವರು ಶೈವ ಧರ್ಮೀಯರೆಂದು ಈ ಹಿಂದೆಯೇ ಗಮನಿಸಲಾಗಿದೆ. ನಮ್ಮಲ್ಲಿ ಶೈವ ಎಂದೊಡನೆಯೆ ವೀರಶೈವ ಅರ್ಥಾತ್ ಲಿಂಗಾಯತ ಮತದವರು ಎಂಬ ನಂಬಿಕೆ ಬಂದು ಹೋಗಿದೆ. ವೀರಶೈವ ಹನ್ನೆರಡನೆಯ ಶತಮಾನದಲ್ಲಿ ಶೈವ ಸಂಪ್ರದಾಯದಲ್ಲಿ ಹುಟ್ಟಿಕೊಂಡ ಒಂದು ಟಿಸಿಲು ಅಷ್ಟೆ. ಆದರೆ "The History of the development of Saivism, particularly in the south has been a complex study. Ever since the pauranic age (300 BC 1200 AD) Saivism has been regarded as a very rich heritage to the Hindu theocratic form, as well as to the system of yoga."[1] ಚಂಗಾಳ್ವರು ಹನ್ನೊಂದನೆಯ ಶತಮಾನಕ್ಕಿಂತ ಹಿಂದಿನಿಂದಲೂ ಇದ್ದವರು. ಆದ್ದರಿಂದ ಇವರು ಶೈವರಾಗಿದ್ದುದು ನಿಜವಾದರೂ ವೀರಶೈವರಾದುದರ ಬಗ್ಗೆ ಆಧಾರಗಳಿಲ್ಲ. ಅಲ್ಲದೆ ಮಾಧವ, ಮಂಗರಸ ಎಂಬ ಹೆಸರುಗಳು ಜೈನ ವೀರಶೈವ ಮತಗಳನ್ನು ಪ್ರತಿನಿಧಿಸುವುದಿಲ್ಲ. ಶ್ರವಣಬೆಳಗೊಳದ ೧೫೦೬ ನೆ ವರ್ಷದ ಶಾಸನವೊಂದರಲ್ಲಿ "ಮಹಾದೇವ (ಮಾಧವ) ಅನ್ನದಾನಿಲಿಂಗಕ್ಕೆ ಗ್ರಾಮದಾನ ಮಾಡಿದ" ವಿಷಯ ಹೇಳಿದೆ. ಈ ಮಹಾದೇವ ಅಥವಾ ಮಾಧವನೆ ಪ್ರಾಚ್ಯ ಸಂಶೋಧನಾ ಇಲಾಖೆಯ ನಾಲ್ಕನೆ ಹೇಳಿಕೆಯ ಮಾಧವನಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದು ಸರಿಯಾದರೆ ಮಂಗರಸನ ಪೂರ್ವಿಕರು ಶೈವರೆಂದಾಗುತ್ತದೆ. ಅಲ್ಲದೆ ಇವರು ರಾಜರಾದುದರಿಂದ ಆಯಾಕಾಲದಲ್ಲಿ ಪ್ರಭಾವಶಾಲಿಯಾಗಿರುತ್ತಿದ್ದ ಧರ್ಮದ ಬಗೆಗೆ ಒಲವನ್ನು ತೋರಿರಬೇಕು. ಮುಂದೆ ಈ ವಂಶದವರು ವೈಷ್ಣವ ಧರ್ಮವನ್ನು ಪ್ರೋತ್ಸಾಹಿಸಿದ ಉದಾಹರಣೆಗಳೂ ಉಂಟು. ಈ ಕಾರಣದಿಂದಾಗಿ ಮಂಗರಸ ತಾನು ಜಿನಭಕ್ತನೆಂದು ಹೇಳಿಕೊಂಡಿದ್ದರೂ ಅವನ ಪೂರ್ವಿಕರೂ ಜೈನರಾಗಿದ್ದರೆಂದು ಹೇಳಲು ಬರುವುದಿಲ್ಲ.

ಭಾರತೀಯ ಧಾರ್ಮಿಕ ಆಂದೋಲನವನ್ನು ಗಮನಿಸಿದರೆ ಆರ್ಯರು ಬಂದನಂತರ ವಿಶೇಷವಾಗಿ ವರ್ಣಾಶ್ರಮ ಮತ್ತು ಜಾತಿ ಪದ್ಧತಿಗಳು ಜಾರಿಗೆ ಬಂದನಂತರ ಯಾವ ವರ್ಣ ಮತ್ತು ಜಾತಿಗೂ ಸೇರದ ನೈಸರ್ಗಿಕ ಕುಲದವರು ಬೇರೆ ಬೇರೆ ಧರ್ಮಗಳಿಗೆ ಹೋಗುವುದನ್ನು ಕಾಣುತ್ತೇವೆ. ಕರ್ನಾಟಕದಲ್ಲಿ ಸಹ ನೈಸರ್ಗಿಕ ಶೈವ ಪಂಗಡಕ್ಕೆ ಸೇರಿದ ಒಕ್ಕಲಿಗರು ಜೈನ, ವೀರಶೈವ ಮತ್ತು ವೈಷ್ಣವ ಧರ್ಮಗಳಿಗೆ ಬೇರೆಯಾಗಿ ಮತಾಂತರವಾದ ವಿಚಾರ ಸ್ಪಷ್ಟವಾಗಿದೆ. ಆರ್ಯರು ಭಾರತಕ್ಕೆ ಬರುವುದಕ್ಕೆ ಮುಂಚೆಯೆ ಶೈವವು ಪ್ರಸಿದ್ಧವಾಗಿತ್ತು. ಹರಪ್ಪ, ಮೊಹೆಂಜದಾರೊ ಮತ್ತು ಸಿಂಧೂನದೀ ತೀರದ ನಾಗರೀಕತೆಗಳು ಶೈವಸಂಪ್ರದಾಯದ್ದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. "The study of saivism is very fascinating field of enquiry, with its roots

1 Saivism and the phallic world B. Bhattacharya page 755

in the pre-Aryan civilization of India, that developed into a mighty tree with various branches and off-shoots. From Kashmir in the north to Ceylon in the south, from Afganistan in the west to far off countries like Sumatra, Java, Combodia in the East saivism was a dominant religion in the first twelve hundred years of the Christian era "[1] ಎಂಬ ಹೇಳಿಕೆಯು ಗಮನಾರ್ಹವಾಗಿದೆ. ಈ ಆರ್ಯ ಪೂರ್ವ ನಾಗರೀಕತೆಯ ಜನರು ಪ್ರಧಾನವಾಗಿ ವ್ಯವಸಾಯ ಮತ್ತು ಪಶುಪಾಲನೆಯಲ್ಲಿ ನಿರತರಾಗಿದ್ದರೆಂಬುದು ಗೊತ್ತಿರುವ ವಿಷಯ. ಈ ಜನರು ಮುಂದೆ ಚತುರ್ಥ ವರ್ಣದವರಾಗಿ ಉಳಿದರು. ಶಾಂತಿಕಾಲದಲ್ಲಿ ವ್ಯವಸಾಯಯುಗಾರರಾಗಿ ಯುದ್ಧಕಾಲದಲ್ಲಿ ಸೈನಿಕರಾಗಿಯೂ ದುಡಿಯುವುದು ಇವರ ಕಾರ್ಯ ವ್ಯಾಪ್ತಿಯಾಗಿತ್ತು. ದಂಡಿಗೆ ಮನೆಗೊಂದು ಆಳು ಹೋಗಬೇಕೆಂಬ ಪದ್ಧತಿ ಇದ್ದ ಬಗೆಗೆ ಜನಪದ ಸಾಹಿತ್ಯದಲ್ಲಿ ವಿಪುಲವಾದ ಆಧಾರಗಳು ದೊರೆಯುತ್ತವೆ. ಆದುದರಿಂದ ಚಂಗಾಳ್ವರು ಮೊದಲಿಗೆ ಇಂತಹ ವ್ಯವಸಾಯ ಮತ್ತು ಯುದ್ಧದಲ್ಲಿ ಪಾಲುಗೊಳ್ಳುವ ಹೋರಾಟಗಾರ ಮನೆತನದವರಾಗಿದ್ದು ಕ್ರಮೇಣ ರಾಜರಾದಂತೆ ಕಾಣುತ್ತದೆ. ಈ ಮಾತು ಮಂಗರಸನ ವಂಶೀಯರಿಗೂ ಅನ್ವಯವಾಗುತ್ತದೆ.

ವರ್ಣಾಶ್ರಮಧರ್ಮ ಜಾತಿಪದ್ಧತಿಯಾಗಿ ಪರಿವರ್ತನೆಗೊಂಡಾಗ ವ್ಯವಸಾಯ ನಿರತರಾದವರು ಒಕ್ಕಲಿಗರಾದರು. ಇದು ಒಂದು ಜಾತಿಯಲ್ಲ. ಒಕ್ಕಲುತನ ಮಾಡುವ ಯಾರೇ ಆದರೂ ಒಕ್ಕಲಿಗರು ಎಂದು ಕೆಲವರು ಇಂದಿಗೂ ವಾದಿಸುತ್ತಾರೆ. ವರ್ಣಾಶ್ರಮ ಧರ್ಮದ ಆರಂಭದಲ್ಲಿಯೇ ಕಸುಬಿನ ಆಧಾರದಿಂದ ಭಾರತೀಯ ಸಮಾಜ ಜಾತಿಗಳಾಗಿ ಒಡೆದಿರುವ ಬಗ್ಗೆ ಆಧಾರಗಳು ದೊರೆಯುತ್ತವೆ. ಉದಾಹರಣೆಗೆ 'ಗೌಡ' ಎಂಬುದು ಅತ್ಯಂತ ಪ್ರಾಚೀನಕಾಲದಲ್ಲಿಯೇ ಜಾತಿಸೂಚಕವಾಗಿದ್ದುದು ಶಾಸನಗಳಲ್ಲಿಯೇ ಕಂಡು ಬರುತ್ತದೆ. ಬಸವಣ್ಣನವರ ಸಮಕಾಲೀನರಾದ ಮಾದಾರ ಚನ್ನಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯರನ್ನು ಆಯಾ ಜಾತಿಯ ಪ್ರತಿನಿಧಿ ಎಂದು ಹೇಳುವ ವಿದ್ವಾಂಸರು ಒಕ್ಕಲಿಗ ಮುದ್ದೇಗೌಡನನ್ನು ಒಕ್ಕಲಿಗ ಜಾತಿಯವನೆಂದು ಹೇಳುವುದಿಲ್ಲ. ಅವನ ಕಸುಬು ವ್ಯವಸಾಯ ಎಂದು ತಿಳಿಸಿ ಮುಂದೆ ಹೋಗುತ್ತಾರೆ. ಮಾದಾರ ಚನ್ನಯ್ಯ ಮಾದಿಗ ಎನ್ನುವುದನ್ನು ಒಪ್ಪುವುದಾದರೆ, ಮಡಿವಾಳ ಮಾಚಯ್ಯ ಅಗಸನೆಂಬುದು ಸತ್ಯವಾದರೆ ಒಕ್ಕಲಿಗ ಮುದ್ದಯ್ಯ ಜಾತಿಯಲ್ಲಿ ಒಕ್ಕಲಿಗನೆಂದು ಒಪ್ಪಲೇಬೇಕಾಗುತ್ತದೆ. ಈ ಎಲ್ಲ ಆಧಾರಗಳಿಂದ ವ್ಯವಸಾಯನಿರತರದ್ದೇ ಒಂದು ಜಾತಿಯಾಗಿತ್ತು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಜನ ಮುಂದೆ ಜೈನ ವೀರಶೈವ ಮತ್ತು ಶ್ರೀ ವೈಷ್ಣವಮತಗಳಿಗೆ ಮತಾಂತರ ಹೊಂದಿದ ಉದಾಹರಣೆಗಳು ದೊರೆಯುತ್ತವೆ. ದೇವಚಂದ್ರನು ತನ್ನ ರಾಜಾವಳಿ ಕಥೆಯಲ್ಲಿ " ಜೈನ ಗೌಡರೆಲ್ಲ ನಾಮಧಾರಿಗಳಾದ " ಪ್ರಸಂಗವನ್ನು ಹೇಳಿದ್ದಾನೆ. ಮಂಗಳೂರು, ಮೈಸೂರು

---

1 The Origin and development of Saivism in Shankara and Shammata by R. Nagaswamy.

ಗಳಲ್ಲಿ ಒಕ್ಕಲಿಗರು ಜೈನರಾದ ಬಗೆಗೆ ಇಂದಿಗೂ ಉದಾಹರಣೆಗಳಿವೆ. ತುಮಕೂರು ಜಿಲ್ಲೆಯಲ್ಲಿ ಅನೇಕ ಒಕ್ಕಲಿಗರು ಇತ್ತೀಚೆಗೆ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಈ ಎಲ್ಲಾ ಕಾರಣಗಳಿಂದಲೂ ಮಂಗರಸ ಮತ್ತು ನಂಜುಂಡರ ಪೂರ್ವಿಕರು ಒಕ್ಕಲಿಗರಾಗಿದ್ದರೆಂದು ಹೇಳಲಡ್ಡಿಯಿಲ್ಲ. ಅವರು ರಾಜರಾದ ಮೇಲೆ ಬೇರೆ ಧರ್ಮಗಳಿಗೆ ಒಲವು ತೋರಿರಬಹುದು. ನಂಜುಂಡ ಕುಮಾರರಾಮನ ಕಥೆಗಾಗಿ ಲಿಂಗಧಾರಿಯಾರಿಯಾದನೆಂದು ಹೇಳುತ್ತಾನೆ ದೇವಚಂದ್ರ. ಮಂಗರಸ ತಾನು ಜಿನಭಕ್ತನೆಂದು ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಈ ಕವಿಗಳ ಮತ ವಿಚಾರವನ್ನು ಪರಿಶೀಲಿಸಬೇಕಾಗುತ್ತದೆ.

ದೇವಚಂದ್ರನು ನಂಜುಂಡ ಪಾಂಚಾಲಗಂಗನಿಂದ ಕುಮ್ಮಟದ ಬೇಡರ ರಾಮನ ಕಥೆಯನ್ನು ಅರಿಯಲು ಲಿಂಗಧಾರಿಯಾದನೆಂದೂ, ತನ್ನ ಹೆಸರನ್ನು ಬದಲಾಯಿಸಿ ಕೊಂಡನೆಂದೂ ಹೇಳುತ್ತಾನೆ. ದೇವಚಂದ್ರನ ಈ ಮಾತಿಗೆ ಸಾಕ್ಷಿಯಾಗಿ ರಾಮನಾಥ ಚರಿತ್ರದ ಹಸ್ತಪ್ರತಿಯೊಂದರ ಆರಂಭದಲ್ಲಿ "ಶುಭಮಸ್ತು ಶ್ರೀ ವೀತರಾಗಾಯನಮಃ ಶಾರದಾಗುರುವೇಗತಿ ಕನಕಗಿರಿಯಯ್ಯ ಪದ್ಮಾವತಿಯಮ್ಮನವರ ದಿವ್ಯ ಶ್ರೀ ಪಾದವೇ ಗತಿ. ಜೋಳುಗುಲಿಯ ಬ್ರಹ್ಮದೇವರ ಪಾದವೇ ಗತಿ. ಕಲ್ಲಹಳ್ಳಿಯ ದೇವರಸಗೌಡ ಹೇಳಿದ ರಾಮನಾಥನ ಸಾಂಗತ್ಯಕ್ಕೆ ಮಂಗಳ" ಎಂದಿದೆ. ಇದು ನಂಜುಂಡನಿಗೆ ಬೇರೊಂದು ಹೆಸರಿದ್ದಿತೆಂಬ ವಾದಕ್ಕೆ ಪುಷ್ಟಿ ನೀಡುತ್ತದೆ. ಇದರ ಆಧಾರದಿಂದ ಹೇಳಬಹುದಾದರೆ ಕಲ್ಲಹಳ್ಳಿಯ ಗೌಡಮನೆತನದವರು ಜೈನಧರ್ಮದ ಬಗೆಗೆ ತಮ್ಮ ಒಲವನ್ನು ತೋರಿದರೆಂದಾಗುತ್ತದೆ. ಅಲ್ಲಿಯ ಶಾಸನವೊಂದರ ಬಗೆ "An image of Adiparameswara was caused to be carved at the instance of Rayagowda son of Mudde Gowda who was the son of Malligowda and the Jaya Gowda disciples of Anantha Vidyadeva whose guru was Jayadavabhattaraka"[1] ಎಂಬ ಹೇಳಿಕೆ ದೊರೆಯುತ್ತದೆ. ಈ ಮನೆತನದವರಾಗಿ ಈಗಿನ ಕರ್ನಾಟಕದ ಮುಖ್ಯಮಂತ್ರಿಗಳಾಗಿರುವ ಶ್ರೀ ದೇವರಾಜ ಅರಸ್ ಮತ್ತು ಅವರ ಸಹೋದರರಿದ್ದಾರೆ. ಚಂಗಾಳ್ವ ವಂಶದವರಾಗಿ ಶ್ರೀ ಚತುರಂಗ ಬಸವರಾಜೇ ಅರಸ್ ಮತ್ತು ಶ್ರೀ ಸುಬ್ರಹ್ಮಣ್ಯರಾಜೇ ಅರಸ್ ಇದ್ದಾರೆ. ಇವರಾರೂ ಇಂದು ಜೈನಧರ್ಮೀಯರಾಗಿ ಉಳಿದಿಲ್ಲ. ಇವರನ್ನುಳಿದು ಈಗ ಕಲ್ಲಹಳ್ಳಿಯಲ್ಲಿರುವವರೆಲ್ಲಾ ಜೈನರು. ಇದರಿಂದ ಮಂಗರಸ ಮತ್ತು ನಂಜುಂಡರ ಪೂರ್ವಜರು ಒಕ್ಕಲಿಗರೂ, ಊರಗೌಡರೂ ಆಗಿದ್ದು ಕ್ರಮೇಣ ರಾಜ್ಯ ಸಂಪಾದನೆ ಮಾಡಿ ಅರಸರಾದಂತೆ ಕಾಣುತ್ತದೆ.

ಮಂಗರಸನ ಕಾಲದ ಬಗೆಗೆ ಕವಿ ಚರಿತೆಕಾರರು "ಮೂರನೆಯವನು ಹೊಯ್ಸಳ ದೇಶದ ಹೊಸವೃತ್ತಿಯ ನಾಡಿನಲ್ಲಿರುವ ಕಲ್ಲಹಳ್ಳಿಯ ಅಧಿಪನೆಂದೂ ಮಹಾಮಂಡಲೇಶ್ವರ ಚಂಗಾಳ್ವ ಭೂಮಿಪಾಲ ಸಚಿವರ ವಂಶದಲ್ಲಿ ಹುಟ್ಟಿದವನೆಂದೂ ಕಲ್ಲಹಳ್ಳಿಯ ಪ್ರಭುವಾದ

---

1 M.A.R. 1925, Page 109

ವಿಜಯೇಂದ್ರನ ಮಗನೆಂದೂ ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಸಮ್ಯಕ್ತ್ವ ಕೌಮುದಿಯನ್ನು ಶಕ ೧೪೩೦ರಲ್ಲಿ ಎಂದರೆ ೧೫೦೮ರಲ್ಲಿ ಬರೆದಂತೆ ಹೇಳಿದ್ದಾನೆ" ಎಂದಿದ್ದಾರೆ. ಅವರು ಹೇಳಿರುವ ಸಮ್ಯಕ್ತ್ವ ಕೌಮುದಿಯ ಪದ್ಯ ಹೀಗಿದೆ.

ಸಾಸಿರದ ಮೇಲೆ ನಾನೂರ ಮೂವತ್ತೊಂದು
ಭಾಸುರಂ ಬಡೆದ ಶಕವರ್ಷದೆಸವಾಶ್ವಯುಜ
ಮಾಸದಾ ಶುಕ್ಲ ಪಕ್ಷದ ಪಾಡ್ಯಮುಂ ಮಂದವಾರದೊಳಗೀ ಕೃತಿಯಿದು
ಈ ಸಂಸ್ಕೃತಿಶ್ರಾಂತ ವಿಶ್ರಾಂತಮುಂ ಮಾಡು
ವಾಸೆಯಿಂದಲೆ ಸಮಾಪ್ತಂಗೆಯ್ದೆ ನಿಂತಿದನು
ದಾಸೀನಮಂ ಮಾಡದೆ ಭವ್ಯಸಮಿತಿ ಸಂತೋಷದೊಳು ಲಾಲಿಪುದು

ಇದರಂತೆ ಸಾಸಿರದ ಮೇಲೆ ನಾನೂರ ಮೂವತ್ತೊಂದು ಶಕವರ್ಷದಲ್ಲಿ ಆಶ್ವಯುಜ ಮಾಸದ ಶುದ್ಧ ಪ್ರತಿಪದೆಯಂದು ಮಂದವಾರ (ಶನಿವಾರ) ದ ದಿವಸ ಕೃತಿಯನ್ನು ಮುಗಿಸಿದೆನೆಂದು ಕವಿ ಹೇಳಿದ್ದಾನೆ. ಶ.ಕ ೧೪೩೧ + ೭೮ = ೧೫೦೯ಕ್ಕೆ ಸರಿಹೋಗುತ್ತದೆ. ಇದನ್ನು ಕವಿ ಚರಿತೆಕಾರರು ಒಪ್ಪಿದ್ದಾರೆ. ಅನಂತರ ಈ ಕವಿಯ ಬಗ್ಗೆ ಬರೆದ ಎಲ್ಲಾ ವಿದ್ವಾಂಸರೂ ಈ ಕಾಲವನ್ನೇ ಒಪ್ಪಿದ್ದಾರೆ.

ಇತ್ತೀಚೆಗೆ ಮೂರನೆಯ ಮಂಗರಸನ ಕಾಲವನ್ನು ನೂರು ವರ್ಷ ಹಿಂದಕ್ಕೆ ಒಯ್ಯುವ ಪ್ರಯತ್ನಪಡಲಾಗಿದೆ. ಈ ಹಿಂದೆ ಹೇಳಿದ ಮಂಗರಸನ ಪದ್ಯಕ್ಕೆ

ಸಾಸಿರದ ಮೇಲೆ ಮುಂನೂರ ಮೂವತ್ತೊಂದು
ಭಾಸುರಂಬಡೆದ ಶಕವರುಷವೆನಿಪಾಶ್ವೀಜ
ಮಾಸದತಿ ಶುಕ್ಲ ಪಕ್ಷದ........ಕೃತಿಯಿದು[1]

ಎಂದು ಪಾಠಾಂತರವನ್ನು ಸೂಚಿಸಿದ್ದಾರೆ. "ಇದರಂತೆ ಸಾಸಿರದ ಮೇಲೆ ಮುನ್ನೂರ ಮೂವತ್ತೊಂದು (೧೩೩೧) ಶಕವರ್ಷದಲ್ಲಿ ಕೃತಿ ರಚನೆಯಾಗಿದೆ. ಇದು ನಮ್ಮ 'ಗ' ಹಸ್ತಪ್ರತಿಯಲ್ಲಿ ಸ್ಪಷ್ಟವಾಗಿದೆ. ಅಂದರೆ ಮಂಗರಸನ ಕಾಲ ೧೦೦ ವರ್ಷ ಹಿಂದೆ ಹೋಗುತ್ತದೆ. ಈ ಪದ್ಯದ ಆಧಾರದಿಂದ ಮಂಗರಸಕವಿಯ ಕಾಲ ೧೪೦೯ (ಶಕ ೧೩೩೧ + ೭೮ ಕ್ರಿ.ಶ. ೧೪೦೯) ಎಂದು ನಿರಾತಂಕವಾಗಿ ನಿರ್ಧರಿಸಲ್ಪಡುತ್ತದೆ....... ಈಗ ನಮ್ಮ ಬಳಿಯಲ್ಲಿರುವ (ಗ) ಹಸ್ತಪ್ರತಿಯ ತಾಡಓಲೆ ಮತ್ತು ಹಂಪನಾಗರಾಜಯ್ಯನವರ ಹತ್ತಿರವಿರುವ ತಾಡ ಓಲೆ ಒಂದೇ ವಿಷಯವನ್ನು ಪ್ರಕಟಿಸುವುದರಿಂದ ಈ ಕಾಲಮಾನವೇ ಸರಿಯಾಗಿದೆ ಎಂಬುದನ್ನು ವಿದ್ವಾಂಸರಾದ ಸಹೃದಯರ ಗಮನಕ್ಕೆ ತಂದು

1 ಸಮ್ಯಕ್ತ್ವ ಕೌಮುದಿ, ಸಂ. ಬಿ. ಎ. ಮಹೇಶವಾಡಿ, ಪುಟ xxii

ಕೊಡಲು ನಮಗೆ ಹೆಚ್ಚಿನ ಧೈರ್ಯವುಂಟಾಗಿದೆ. ಅಲ್ಲದೆ ಶಾಸನಾಂಶಗಳೂ ಸಾಹಿತ್ಯಾಧಾರಗಳೂ ನಮಗೆ ಬಲವಾದ ಪೋಷಣೆಯನ್ನು ನೀಡುತ್ತವೆ"[1] ಎಂದು ಕವಿಯ ಕಾಲವನ್ನು ನಿರ್ಧರಿಸಿರುತ್ತಾರೆ.

ಮೇಲೆ ಹೇಳಿರುವ ಸಾಸಿರದ ಮೇಲೆ ಮುನ್ನೂರ ಮೂವತ್ತೊಂದು ಶಕಾಂತರವನ್ನು ಅಧಿಕೃತವೆಂದು ಒಪ್ಪಿಕೊಂಡರೆ ಕವಿಗಳು ತಮ್ಮ ಕಾವ್ಯಗಳಲ್ಲಿ ಹೇಳಿರುವ ಚಾರಿತ್ರಿಕ ವಿಚಾರಗಳು ತಪ್ಪೆಂದು ಹೇಳಬೇಕಾಗುತ್ತದೆ. ನಂಜುಂಡನು ತನ್ನ ರಾಮನಾಥ ಚಾರಿತ್ರದಲ್ಲಿ

ರಾಯದಳವ ಕಾಣುತ ತನ್ನ ಪತಿ ನಂಜ
ರಾಯನ ಮುಂದೆ ಕುದುರೆಯ
ರಾಯ ರಾವುತರ ಮೇಲೇಱಿ ತಿವಿದು ಸುರ
ರಾಯ ನಗರಿಗೆಯ್ದಿದನು[2]

ಎಂದು ಹೇಳಿದ್ದಾನೆ. ಈ ಪದ್ಯದಲ್ಲಿ ಹೇಳಿರುವ ಪತಿ ನಂಜರಾಯ ಚಂಗಾಳ್ವ ನಂಜರಾಜ ನೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇವನು ೧೫೦೨ ರಿಂದ ೧೫೩೩ ರ ವರೆಗೆ ಆಳಿದನು. ಇವನ ಕಾಲದಲ್ಲಿಯೇ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದ ಕೃಷ್ಣದೇವ ರಾಯನ ಸೇನೆ ಚಂಗಾಳ್ವರೊಂದಿಗೆ ಯುದ್ಧ ಮಾಡಿದಂತಹ ಪ್ರಸಂಗ ಚರಿತ್ರೆಯಲ್ಲಿ ಉಲ್ಲೇಖವಾಗಿದೆ. ಈ ಯುದ್ಧದಲ್ಲಿಯೇ ಮಂಗರಸನ ತಂದೆ ವಿಜಯನು ರಾಯ ರಾವುತರೊಂದಿಗೆ ಹೋರಾಡಿ ಮಡಿದುದು.

ನಂಜುಂಡನ ಮತ್ತೊಂದು ಪದ್ಯವೂ ಮಂಗರಸನ ಕಾಲ ೧೫೦೮ ಎಂಬ ವಾದವನ್ನು ಖಚಿತ ಪಡಿಸುತ್ತದೆ. ಆ ಪದ್ಯ ಹೀಗಿದೆ :

ಡಿಳ್ಳಿಯ ಸುರತಾಳನ ರಾಜ್ಯವನೆಲ್ಲವ
ಕೊಳ್ಳೆಗೊಂಬನು ಕೋಪಿಸಿದಡೆ
ತಳ್ಳಂಕವೆಯ್ದಿಸುವನು ಗಜಪತಿರಾಯ
ಗುಳ್ಳದೇಶವನೆಲ್ಲವನು[2]

ಮೊದಲನೆಯದಾಗಿ ಮೇಲಿನ ಪದ್ಯ ಕರ್ನಾಟಕದ ಮೇಲಿನ ಮುಸಲ್ಮಾನ ದಾಳಿಯನ್ನು ಕುರಿತು ಹೇಳುತ್ತದೆ. ಈ ಬಗ್ಗೆ "But the muslim invasion that took place at the beginning of the 14th Century was altogether a new political

---

1 ಸಮ್ಯಕ್ತ್ವ ಕೌಮುದಿ. ಸಂ. ಟಿ. ಟಿ. ಮಹೀಶಾವತ. ಪುಟ xxii
2 ರಾಮನಾಥಚರಿತೆ, ಸಂ. ಎಚ್. ದೇವೀರಪ್ಪ, ಪದ್ಯ ೪೬

phenomenon.' It came like an avalanche carrying everything before it. Its first impact was so unexpected and catastrophic that the people as well as the local potentates had to bow before it and go under, watching helplessly the impetuous career of the ruthless invader right up to Ramesvaram and back [1]" ಕರ್ನಾಟಕವಷ್ಟೇ ಅಲ್ಲ ಇಡೀ ದಕ್ಷಿಣ ಭಾರತವನ್ನು ಈ ಮುಸಲ್ಮಾನ ದಾಳಿಯು ಒಂದು ರೀತಿಯಲ್ಲಿ ಕಂಗೆಡಿಸಿತು ಎಂದು ಹೇಳಬೇಕು. ಇದನ್ನು ಸ್ವಲ್ಪಮಟ್ಟಿಗೆ ಸಮರ್ಥವಾಗಿ ಎದುರಿಸಿದವನ್ "the small principality of Kummata acting as a buffer state wedged in among the Kingdoms of Devagiri, Dorasamudra and Warangal. under the leadership of Kumararama whose noble character and amazing bravery are still in Lining memory in that region [2]" ಕುಮಾರರಾಮ ಕರ್ನಾಟಕದ ಮೇಲೆ ಉಂಟಾದ ಮುಸಲ್ಮಾನ ದಾಳಿಯನ್ನು ಎದುರಿಸಲು ಅಪಾರವಾಗಿ ಹೋರಾಡಿದವನು. ಮುಂದೆ ಈ ದಾಳಿಗೆ ಅವನು ಬಲಿಯಾದರೂ ಜನಮನದಲ್ಲಿ ಚಿರನಾಗಿ ನಿಂತನು. ಮತ್ತೆ ಮುಸಲ್ಮಾನರ ದಾಳಿಯನ್ನು ಹತ್ತಿಕ್ಕಿ ಹಿಂದೂಧರ್ಮ ಸಂರಕ್ಷಣೆಯಾದುದು ವಿಜಯನಗರದ ಕಾಲದಲ್ಲಿ ಮಾತ್ರ.

ಕೃಷ್ಣದೇವರಾಯನು 1509 ರಲ್ಲಿ ಪಟ್ಟಕ್ಕೆ ಬಂದನು. ಪಟ್ಟಕ್ಕೆ ಬಂದಾಗ ಆತ ಇನ್ನೂ ಯುವಕನಾಗಿದ್ದ. ವಿಜಯನಗರದ ಅರಸರಲ್ಲಿ ಅತ್ಯಂತ ಹೆಸರುವಾಸಿಯೂ ವೀರನೂ ಆದವನು. ಕೃಷ್ಣದೇವರಾಯ ಪಟ್ಟಕ್ಕೆ ಬಂದು ನಿರಾತಂಕವಾಗಿರುವಂತಿರಲಿಲ್ಲ. ರಾಜ್ಯದ ಸುತ್ತಲೂ ಶತ್ರುಗಳು ಹೊಂಚುತ್ತಿದ್ದರು. ಒಂದು ಕಡೆ ಒರಿಸ್ಸಾದ ಪ್ರತಾಪರುದ್ರನ ಹಿಂಸೆಯಾದರೆ ಮತ್ತೊಂದು ಕಡೆ "The muslim sultans were active. Sultan Muhamad Shah II and Yusuf Alil Khan gathered a Large army with an impressive array of Muslim nobles and marched Southwards. in the Confident hope that the new Emperor of Vijayanagar would be unable to withstand them. This army came near the frontier, but was met by the forces of Vijayanagar. A battle followed and the enemy suffered a crushing defeat, the sultan himself being severely wounded. The muslim soldiers fell back in confusion.[3]" ಈ ಯುದ್ಧದ ಹಿನ್ನೆಲೆಯಲ್ಲಿ ನಂಜುಂಡ ಕುಮಾರರಾಮ ಕೋಟೆಯನ್ನು ಮೊದಲಿಯ ಸುಲ್ತಾನನನ್ನು ನಡುಗಿಸಿ ಅವನ ರಾಜ್ಯವನ್ನು ಸೂರೆಗೊಳ್ಳಬಲ್ಲ ಎಂದು ಹೇಳಿದ್ದಾನೆ. ಕುಮಾರರಾಮನು ದಕ್ಷಿಣದ ಮೇಲೆ ಆದ ಮುಸಲ್ಮಾನ

---

1 Karnataka through the ages. page 527
2 ,, ,, 528
3 ,, 546

ಥಾಳಿಯನ್ನು ಸಮರ್ಥನಾಗಿ ಎದುರಿಸಿದವನು. ಅಲ್ಲದೆ ಈ ಹೊತ್ತಿಗಾಗಲೇ ಕುಮಾರ ರಾಮ ಒಬ್ಬ ಕಥಾವೀರನಾಗಿದ್ದ ಎಂಬುದಕ್ಕೆ ಪಾಂಚಾಲಗಂಗನ ರಾಮನ ಸಂಗೀತ ನಿದರ್ಶನವಾಗಿದೆ.

ಮೇಲಿನ ಪದ್ಯದಲ್ಲಿಯೇ 'ತಳ್ಳಂಕನೆಯ್ದಿಸುವನು ಗಜಪತಿರಾಯಗುಳ್ಳ ದೇಶವೆಲ್ಲವನು' ಎಂಬ ಮತ್ತೊಂದು ಚಾರಿತ್ರಿಕ ಅಂಶವನ್ನೂ ನಂಜುಂಡ ಹೇಳಿದ್ದಾನೆ. ನಂಜುಂಡ ಹೇಳಿರುವ ಈ ಗಜಪತಿರಾಯ ಕ್ರಿ.ಶ. ೧೪೯೭ರಿಂದೀಚೆಗೆ ೧೫೩೬ ರೊಳಗೆ ಒರಿಸ್ಸಾದಲ್ಲಿ ಆಳುತ್ತಿದ್ದು ಕೃಷ್ಣದೇವರಾಯನಿಗೆ ಸೋತವನು. ಪ್ರಾಯಶಃ ಗಜಪತಿರಾಯ ಮುಸಲ್ಮಾನರ ಧಾಳಿಯತ್ತ ಗಮನವಿತ್ತಿದ್ದ ವಿಜಯನಗರವನ್ನು ಸೋಲಿಸಲು ಯೋಚಿಸಿದಂತೆ ಕಾಣುತ್ತದೆ. ಆದರೆ ಮುಸಲ್ಮಾನರು ಸೋತು ಹಿಂದಿರುಗಿದೊಡನೆಯೆ "Krishna devaraya next turned his attention to the Gajapati ruler of Orissa Prathaparudradeva. Orissa a country of strong forts and inaccessible fastness was difficult to conquer. But the Emperor himself often commanded the operations in person"[1] ಆದುದರಿಂದ ಗಜಪತಿ ರಾಜನ ರಾಜ್ಯವನ್ನು ತಳ್ಳಂಕಗೊಳಿಸಿದ ಕೃಷ್ಣದೇವರಾಯನ ಯುದ್ಧವನ್ನು ನಂಜುಂಡ ಕೇಳಿಬಲ್ಲನೊ, ನೋಡಿಬಲ್ಲನೊ ಹೇಳುವಂತಿಲ್ಲ. ಏಕೆಂದರೆ ನಂಜುಂಡನು ಈ ಕಾಲದಲ್ಲಿ ಬದುಕಿದ್ದನು. ಅಲ್ಲದೆ ಅವನೂ ಸಹ ರಾಜಮನತನಕ್ಕೆ ಸೇರಿದವನು. ಯುದ್ಧದಲ್ಲಿ ಭಾಗವಹಿಸಿಯೇ ಅರಿಯಬಲ್ಲ ಸಮರ್ಥ.

"ಮೂರನೆಯ ಮಂಗರಸನ ಗುರು ಪ್ರಭೇಂದು. ಅವರ ಶಿಷ್ಯ ಶ್ರುತಮುನಿ. ಕವಿ ಮಂಗರಸನು ಅವರನ್ನು ತನ್ನ ಕಾವ್ಯಗಳಲ್ಲಿ ಕೊಂಡಾಡಿದ್ದಾನೆ. ಗಮನಿಸುವ ಅಂಶವೆಂದರೆ ಶ್ರುತಮುನಿಯ ಸ್ತುತಿಯೊಂದಿಗೆ ಗುರುಪರಂಪರೆಯ ಸ್ಮರಣೆ ಮುಗಿಯುತ್ತದೆ[2]" ಎಂಬ ಅಭಿಪ್ರಾಯವಿದೆ. ಆದರೆ ಈ ಹೇಳಿಕೆಯು ಸರಿಯಲ್ಲವೆಂದು ತೋರುತ್ತದೆ. ಏಕೆಂದರೆ ಗುರುಪರಂಪರೆಯ ಸ್ಮರಣೆ ಅಲ್ಲಿಗೇ ಮುಗಿಯುವುದಿಲ್ಲ. ಅದು ಮತ್ತೂ ಮುಂದುವರಿದು ವಿಮಲಕೀರ್ತಿಯನ್ನು ಸ್ಮರಿಸುವ ಸಂಗತಿಯು—

ಶ್ರುತಮುನಿವರರ ಸಹೋದರನಾಗಿ ಸಂ
ಸೃತಿ ಬಂಧನವ ಪರಿಪಡಿಸಿ
ಅತಿ ಕೀರ್ತಿವಡೆದ ವಿಮಲಕೀರ್ತಿವೆಸರ ವಿ
ಶ್ರುತಮುನಿಗಿರಪೆರಗುವೆನು

---

1 Karnataka through the ages page 547

2 ನೇಮಿಜಿನೇಶ ಸಂಗತಿ, ಸಂ. ಎ. ಶಾಂತರಾಜಶಾಸ್ತ್ರಿ, ಪೀಠಿಕಾಭಾಗ, ಪುಟ ೩೦

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ. ಆದುದರಿಂದ ಶ್ರುತಮುನಿಯನ್ನು ಅಂತಿಮವಾಗಿಟ್ಟುಕೊಂಡು ಸ್ಮರಿಸಿದ್ದಾನೆಂಬ ವಾದ ಮೂರನೆಯ ಮಂಗರಸನ ಕಾಲ ನಿರ್ಣಯಕ್ಕೆ ಸಹಾಯಕವಾಗುವುದಿಲ್ಲ. ಇದೇ ವಿದ್ವಾಂಸರು ಒಂದನೆಯ ಮಂಗರಸನ ಗುರುಪರಂಪರೆಯ ಸ್ತುತಿಯ ಬಗ್ಗೆ "ಪೂಜ್ಯಪಾದರು ಮಂಗರಸನ ಪ್ರತ್ಯಕ್ಷ ಶಿಕ್ಷಾಗುರುವಾಗಲಿ ದೀಕ್ಷಾಗುರುವಾಗಲಿ ಅಲ್ಲ. ಗೌರವಸೂಚಕವಾಗಿ ಪರೋಕ್ಷ ಗುರುವೆಂದು ಭಾವಿಸಿ ಮಂಗರಾಜನು ಅವನ ಹೆಸರನ್ನು ಉಲ್ಲೇಖಿಸಿದ್ದಾನೆ ಎಂಬುದು ಸ್ಪಷ್ಟವಾಗಿದೆ[1]" ಎಂದು ಹೇಳಿದ್ದಾರೆ. ಮೊದಲನೆಯದಾಗಿ ಸುಮಾರು ೨೧ ಮಂದಿ ಪೂಜ್ಯಪಾದ ಹೆಸರಿನ ಜೈನ ಗುರುಗಳಿದ್ದಾರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದುದರಿಂದ ಒಂದನೆಯ ಮಂಗರಸ ಒಂದನೆಯ ಪೂಜ್ಯಪಾದನನ್ನೇ ಕುರಿತು ಹೇಳಿದ್ದಾನೆಂದು ಖಚಿತವಾಗಿ ತಿಳಿಯುವುದಿಲ್ಲ. ಎರಡನೆಯದು ಶ್ರುತಮುನಿಯನ್ನು ಕುರಿತೂ ಪರೋಕ್ಷಗುರುವೆಂದು ಹೊಗಳಿರಬಹುದು. ಈ ಕಾರಣಗಳಿಂದಾಗಿ ಶ್ರುತಮುನಿಯ ಸ್ತುತಿಯ ಆಧಾರ ಕಾಲನಿರ್ಣಯಕ್ಕೆ ಸರಿಯಾದ ಆಧಾರವಾಗುವುದಿಲ್ಲ.

ಮೂರನೆಯ ಮಂಗರಸನ ಕಾಲ ೧೪೦೯ ಎಂಬುದಕ್ಕೆ "ಶಾಸನಾಂಶಗಳೂ ಸಾಹಿತ್ಯಾಧಾರಗಳೂ ಬಲವಾದ ಪೋಷಣೆಯನ್ನು ನೀಡುತ್ತವೆ[2]" ಎಂಬ ವಾದವಿದೆ. ಸಾಹಿತ್ಯಾಧಾರಗಳು ೧೪೦೯ನ್ನು ಪೋಷಣೆ ಮಾಡುವುದಿಲ್ಲವೆಂದು ಈ ಹಿಂದೆಯೇ ವಿವರಿಸಲಾಗಿದೆ. ಇನ್ನು ಶಾಸನಗಳ ಬಗೆಗೆ ಹೇಳುವುದಾದರೆ ಶ್ರವಣಬೆಳಗೊಳ ಶಾಸನ ೩೫೭ (೨೬೩) ರಲ್ಲಿ ಇರುಗಪ ದಂಡನಾಯಕ ಬೆಳಗೊಳ ಹಳ್ಳಿಯನ್ನು ಶ್ರುತಮುನಿಗೆ ದಾನವಾಗಿ ಕೊಟ್ಟ ವಿವರವಿದೆ. ಇದು ವಿಮಲಕೀರ್ತಿಗಿಂತ ಹಿಂದಿನ ವಿಷಯವಾಯಿತು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇದೇ ಶ್ರವಣಬೆಳಗೊಳ ೩೭೯ (೨೨೮) ನೆಯ ಶಾಸನ. "ಶಕವರುಷ ೧೪೨೨ನೆಯ ಶುಕ್ಲ ಸಂವತ್ಸರದ ವಯಿಶಾಖ ಬ ೧೦ ಲೂ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಮಹಾದೇವ ಮಹೀಪಾಲನ ಪ್ರಧಾನ ಶಿರೋಮಣಿ ಕೇಶವನಾಥ ವರಪುತ್ರ ಕುಲಪವಿತ್ರಂ ಜಿನಧರ್ಮಸಹಾಯ ಪ್ರತಿಪಾಲಕರಹ ಬೊಮ್ಮಣ್ಣಮಂತ್ರಿಯ ಸಹೋದರರಹ ಸಮ್ಯಕ್ತ್ವಚೂಡಾಮಣಿ ಚನ್ನಬೊಮ್ಮರಸನು ನಂಜರಾಜಪಟ್ಟಣದ ಶ್ರಾವಕ ಭವ್ಯಜನಂಗಳ ಗೋಷ್ಠಿ ಸಹಾಯ ಶ್ರೀ ಗುಮ್ಮಟಸ್ವಾಮಿಯ ಬಳ್ಳಿವಾಡದ ಜೀರ್ಣೋದ್ಧಾರವ ಮಾಡಿಸಿದರು[3]" ಎಂದು ಹೇಳಿದೆ. ಈ ಶಾಸನದಲ್ಲಿ ಬರುವ ಪ್ರಧಾನ ಬೊಮ್ಮಣ್ಣ ಮಂಗರಸನ ಕಿರಿಯ ವಯಸ್ಸಿನ ಮಗ ಜಯರಾಜನನ್ನು ಪೋಷಣೆಗೆ ತೆಗೆದುಕೊಂಡ ಚಂಗಾಳ್ವ ನಂಜುಂಡನ ಪ್ರಧಾನ ಎಂಬುದನ್ನು ಶಾಸನ ಇಲ್ಲಿಯೂ ೧೫೦೦ರ ವರೆಗಿನ ಸ್ವಲ್ಪನೆ ಬೆಳಕೆಯು ತೀಸುತ್ತದೆ. ಆದುದರಿಂದ

1 ಸಮ್ಯಕ್ತ್ವ ಕೌಮುದಿ, ಸಂ. ಬಿ. ಬಿ. ಮಹೀಶವಾಡಿ, ಪುಟ xvi
2 ಅದೇ ಪುಟ xxii
3 E C. Vol 2, 1973 viii

೩೫೭ (೫೫೩) ಶಾಸನ ಮಂಗರಸನಿಗಿಂತ ಹಿಂದೆ ಹೋಗುತ್ತದೆ. ಅಲ್ಲಿದೆ "ದೊಡ್ಡಬೆಟ್ಟದ ಅಷ್ಟದಿಕ್ಪಾಲಕರ ಮಂಟಪದಲ್ಲಿನ ಕ್ರಿ. ಶ. ೧೫೫೯ನೆಯ ವರ್ಷದ ಶಾಸನ (೩೫೫) ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಮಹಾದೇವನನ್ನು ಉಲ್ಲೇಖಿಸುತ್ತದೆ. ಈತನು ಚಂಗಾಳ್ವ ಮನೆತನಕ್ಕೆ ಸೇರಿದ ಕ್ರಿ. ಶ. ೧೫೦೨ ರಿಂದ ೧೫೩೩ ರವರೆಗೆ ಆಳಿದ ನಂಜನ ಅನುಜ ಎಂಬ ಉಲ್ಲೇಖವೂ ಇದೆ. ಈ ಹಿಂದೆ ಚಂಗಾಳ್ವ ನಂಜರಾಜನಿಗೆ ಮಾಧವ ನೆಂಬ ಸೋದರನಿದ್ದನೆಂಬ ಸಂಗತಿಯನ್ನು ಶಾಸನ ಇಲಾಖೆಯ ನಾಲ್ಕನೆಯ ಹೇಳಿಕೆಯೂ ಪ್ರತಿಪಾದಿಸಿದೆ. ಈ ಎಲ್ಲ ಕಾರಣಗಳಿಂದ ಮಂಗರಸನ ಕಾಲ ೧೫೦೮ ಎಂಬ ಕವಿಚರಿತೆ ಕಾರರ ಹೇಳಿಕೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎರಡು ಹಸ್ತ ಪ್ರತಿಗಳಲ್ಲಿ 'ಸಾಸಿರದ ಮೇಲೆ ಮುನ್ನೂರು' ಎಂದಿದೆ ಎಂಬ ಕಾರಣವಷ್ಟರಿಂದಲೇ ಮಂಗರಸನ ಕಾಲ ವನ್ನು ೧೫೦೮ ಕ್ಕೆ ನೂರು ವರ್ಷ ಹಿಂದೆ ಒಯ್ಯಲು ಬರುವುದಿಲ್ಲ. ಶ್ರೀ ಹಂಪ ನಾಗರಾಜಯ್ಯನವರ ಪ್ರತಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ 'ಗ' ತಾಡಓಲೆ ಪ್ರತಿಗಳು ಒಂದೇ ಮೂಲದಿಂದ ಪ್ರತಿಮಾಡಿಕೊಂಡವಾಗಿರಬೇಕು.

ಮೂರನೆಯ ಮಂಗರಸನ ಕೃತಿಗಳು ಆರು. ಅವುಗಳಲ್ಲಿ ಐದು ಜೈನ ಧಾರ್ಮಿಕ ಮೂಲಗಳನ್ನು ಆಧಾರವಾಗುಳ್ಳವು. ನೇಮಿಜಿನೇಶಸಂಗತಿ, ಶ್ರೀಪಾಲಚರಿತೆ, ಸಮ್ಯಕ್ತ್ವ ಕೌಮುದಿ, ಪ್ರಭಂಜನ ಚರಿತೆ ಮತ್ತು ಜಯಕುಮಾರ ಚರಿತೆ. ನಂಜುಂಡನಿಗೆ ಕುಮ್ಮಟದ ಬೇಡರ ರಾಮನ ಕಥೆಯನ್ನು ಕುರಿತ ಕುಮಾರರಾಮ ಸಾಂಗತ್ಯದ ರಚನೆಗೆ ಮಂಗರಸ ಸಹಾಯ ಮಾಡಿದುದರಿಂದ ಉಂಟಾದ ಪಾಪ ಪರಿಹಾರಾರ್ಥವಾಗಿ ಸಂಸ್ಕೃತ ದಲ್ಲಿದ್ದ ಈ ಐದು ಕೃತಿಗಳನ್ನು ಕನ್ನಡದಲ್ಲಿ ಬರೆದನೆಂದು ದೇವಚಂದ್ರ ಹೇಳಿದ್ದಾನೆ. ಈ ಕಥೆಯು ಹರಿಶ್ಚಂದ್ರ ಕಾವ್ಯ ಬರೆದ ರಾಘವಾಂಕನ ಘಟನೆಯನ್ನು ನೆನಪಿಗೆ ತರುತ್ತದೆ. ಇವಲ್ಲದೆ ಅಡುಗೆಯ ಕಲೆಯನ್ನು ಕುರಿತ ಸೂಪಶಾಸ್ತ್ರ ಮಂಗರಸನ ಮತ್ತೊಂದು ಕೃತಿ. ಇದರ ಮೂಲವೂ ಸಂಸ್ಕೃತವೆಂದು ಕವಿ ಹೇಳಿದ್ದರೂ ಪ್ರಾದೇಶಿಕ ಅಡುಗೆಯನ್ನೂ ಅದರಲ್ಲಿ ಸೇರಿಸಿದ್ದಾನೆ. ಈ ಆರು ಗ್ರಂಥಗಳ ಕಥೆ, ವಸ್ತುನಿರೂಪಣೆ ಮತ್ತು ಕಾವ್ಯ ರಚನಾ ಶಕ್ತಿಯನ್ನು ಗಮನದಲ್ಲಿಟ್ಟು ಕೊಂಡು ಹೇಳುವುದಾದರೆ ಮೂರನೆಯ ಮಂಗರಸ ಪ್ರತಿಭಾವಂತನಾದ ಸಮರ್ಥಕವಿ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ನೇಮಿಜಿನೇಶಸಂಗತಿ : ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಜೀವನ ಸಾಧನೆಗಳನ್ನು ವಿವರಿಸುವ ಕಾವ್ಯ. ನೇಮಿನಾಥನನ್ನು ಸ್ತುತಿಸುವುದು ಕವಿಯ ಪ್ರಧಾನ ಆಶಯ. ಸಾಂಗತ್ಯ ರೂಪದಲ್ಲಿರುವ ಈ ಕಾವ್ಯ ೬೫ ಸಂಧಿ ಐದು ಸಾವಿರಕ್ಕೂ ಹೆಚ್ಚು ಪದ್ಯಗಳುಳ್ಳ ಬೃಹತ್ ಕಾವ್ಯ. ಕುರುಪಾಂಡವರ ಕಥೆಯೂ ಜೊತೆ ಜೊತೆಯಾಗಿ ಬರುತ್ತದೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಇದು ಜೈನ ಸಂಪ್ರದಾಯದ ಮಹಾಭಾರತ.

ಸಮ್ಯಕ್ತ್ವ ಕೌಮುದಿ : ಅರ್ಹದ್ದಾಸನೆಂಬ ಶೆಟ್ಟಿ ಮತ್ತು ಅವನ ಸ್ತ್ರೀಯರು ಉದಿತೋದಯನೆಂಬ ರಾಜನಿಗೆ ಹೇಳಿದ ಕಥೆಯನ್ನು ಕೇಳಿ ಸಮ್ಯಕ್ತ್ವವನ್ನು ಪಡೆದು ದೀಕ್ಷೆವಹಿಸಿ ಸ್ವರ್ಗಕ್ಕೆ ಸಂದ ಕಥೆ ವರ್ಣಿತವಾಗಿದೆ. ಮಗಧ ದೇಶದ ರಾಜ ಶ್ರೇಣಿಕ. ಅವನ ರಾಣಿ ಚೇಳಿನಿ. ಅವರ ರಾಜಧಾನಿ ರಾಜಗೃಹ. ಒಂದು ದಿನ ಅಗಣಿತ ಮಹೀಪಾಲರೊಂದಿಗೆ ಒಡ್ಡೋಲಗದಲ್ಲಿರುವಾಗ ವನಪಾಲಕನೊಬ್ಬ ಬಂದು ರಾಜನಿಗೆ ನಮಸ್ಕರಿಸಿದ. ಇಲ್ಲಿಂದ ಕಥೆ ಆರಂಭವಾಗುತ್ತದೆ. ಈ ಕಾವ್ಯದಲ್ಲಿ ಹನ್ನೆರಡು ಸಂಧಿ ಏಳುನೂರ ಎಂಬತ್ತೇಳು ಪದ್ಯಗಳಿವೆ. ಈ ಕೃತಿ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ.

ಪ್ರಬಂಜನ ಚರಿತೆ : ಈ ಕಾವ್ಯ ಸಾಂಗತ್ಯದಲ್ಲಿ ರಚಿತವಾಗಿದೆ. ಕುಂಭದೇಶದ ಭಂಬಾಪುರದ ರಾಜನಾದ ದೇವಸೇನನ ಮಗ ಪ್ರಭಂಜನನ ಕಥೆ ಇಲ್ಲಿ ವರ್ಣಿತವಾಗಿದೆ. ಹಗಲು ರಾತ್ರಿ ಕರ್ನಾಟವಿಯಲ್ಲಿ ತೊಳಲುವ ಆಟಕೋಟಲೆ ಹಿಂಗಲೆಂದು ಈ ಕೃತಿಯನ್ನು ಬರೆದುದಾಗಿ ಕವಿಹೇಳಿಕೊಂಡಿದ್ದಾನೆ. ಕನ್ನಡ ಅಧ್ಯಯನ ಸಂಸ್ಥೆ ಹಸ್ತ ಪ್ರತಿ ಭಂಡಾರದಲ್ಲಿ ಪೂರ್ಣ ಕಾವ್ಯ ಇರುವ ಹಸ್ತಪ್ರತಿ ಈವರೆಗೆ ದೊರೆತಿಲ್ಲ. ಕೆ. ೧೪೯೫ ನೆಯ ನಂಬರಿನ ಓಲೆ ಪ್ರತಿಯಲ್ಲಿ ಶ್ರೀಪಾಲಚರಿತೆಯಾದನಂತರ ಪ್ರಬಂಜನ ಚರಿತೆ ಆರಂಭವಾಗಿದೆ. ಆದರೆ ಸಂಧಿ 5 ಪೂರ್ಣವಾಗಿದ್ದು ಆರನೆಯ ಸಂಧಿ 67 ನೆಯ ಪದ್ಯದ ವರೆಗೆ ಮಾತ್ರ ಇದೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಕೂಡ "ಕೃತಿ ಅಪೂರ್ಣವಾಗಿದೆ. 5 ನೆ ಸಂಧಿಯ 67 ನೆಯ ಪದ್ಯದವರೆಗೆ ಮಾತ್ರ ದೊರೆತಿದೆ[1]" ಎಂದು ಹೇಳಿದ್ದಾರೆ. ಈ ಕಾವ್ಯದ ಪೂರ್ಣ ಹಸ್ತಪ್ರತಿಯೊಂದು ಈವರೆಗೆ ದೊರೆತಂತೆ ಕಾಣುವುದಿಲ್ಲ. ಈಗ ದೊರೆತಿರುವ ಎಲ್ಲಾ ಪ್ರತಿಗಳಲ್ಲಿಯೂ 5 ಸಂಧಿ 67 ನೆಯ ಪದ್ಯದವರೆಗೆ ಮಾತ್ರ ಇದೆ. ಮಂಗರಸ ಈ ಕಾವ್ಯವನ್ನು ಮುಗಿಸದೆ ಹೋಗಿರಬೇಕೆಂಬ ಅನುಮಾನವೂ ಇದೆ. ಪೂರ್ಣ ಪ್ರತಿಯೊಂದು ದೊರೆಯುವವರೆಗೆ ಈ ಬಗೆಗೆ ನಿಖರವಾಗಿ ಹೇಳಲು ಬರುವುದಿಲ್ಲ.

ಜಯನೃಪ ಕಾವ್ಯ : ಕುರುಜಾಂಗಣ ರಾಜ್ಯದ ರಾಜನಾದ ರಾಜಪ್ರಭದೇವನ ಮಗ ಜಯನೃಪನ ಕಥೆ ವರ್ಣಿತವಾಗಿದೆ. ವಿಪುಲಾಚಲದ ವೀರೇಶನ ಸನ್ನಿಧಿಯಲ್ಲಿ ಗೌತಮ ಗಣಧರರು ಶ್ರೇಣಿಕನಿಗೆ ಮೊದಲು ಈ ಕಥೆಯನ್ನು ಹೇಳಿದರು. ಅನಂತರ ಇದನ್ನು ಜಿನಸೇನಾಚಾರ್ಯರು ಒಂದು ಕೃತಿಯನ್ನಾಗಿ ಹೇಳಿದರು. ಅದನ್ನು ನಾನು ಪುಣ್ಯನಿಮಿತ್ತಂ ಕನ್ನಡದಲ್ಲಿ ಹೇಳಿದೆನೆಂದು ಕವಿ ಹೇಳಿಕೊಂಡಿದ್ದಾನೆ. ಇದರಲ್ಲಿ ಸಂಸ್ಕೃತ ಮತ್ತು ಕನ್ನಡವನ್ನು ಸಮ ಸಮನಾಗಿ ಬೆರೆಸಿರುವುದಾಗಿಯೂ ಕವಿ ಹೇಳಿದ್ದಾನೆ. ಇದರಿಂದಾಗಿ ಮಂಗರಸನು ಸಂಸ್ಕೃತದಲ್ಲಿಯೂ ಪಂಡಿತನಾಗಿದ್ದನೆಂದು ತಿಳಿಯುತ್ತದೆ. ಈತ ಕೆಲವು ಸಂಸ್ಕೃತ ಶಾಸನಗಳನ್ನು ಬರೆದಿದ್ದಾನೆಂಬ ಪ್ರತೀತಿಯುಂಟು.

---

1 ಸಮ್ಯಕ್ತ್ವ ಕೌಮುದಿ. ಸಂ. ಬಿ. ಬಿ. ಮಹೀಶವಾಡಿ. ಪುಟ XXIX

ಸೂಪಶಾಸ್ತ್ರ : ಅಡಿಗೆ ಕಲೆಯನ್ನು ವಿವರಿಸುವ ಗ್ರಂಥ. ಸಂಸ್ಕೃತದಲ್ಲಿ ಖ್ಯಾತಿಪಡೆದ ಸೂಪ ಶಾಸ್ತ್ರದಿಂದ ಅರಿವನಿತು ತೆಗೆದು ಕನ್ನಡದಲ್ಲಿ ಜಾತಿ ಪ್ರಮದೆಯಜೀವನುಗೆಂಪ್ಪ ಮಾಳ್ಕೆಯೊಳು ಚಾತುರ್ಯವಿದರು ನೆರೆ ಲಾಲಿಸುವಮಾಳ್ಕೆಯೊಳು ಪೇಳಿಪ್ಪೆನೆಂದು ಕವಿ ಹೇಳಿದ್ದಾನೆ. ಆದುದರಿಂದ ಇದು ಸಂಸ್ಕೃತ ಸೂಪ ಶಾಸ್ತ್ರದ ಸಂಗ್ರಹ ರೂಪವಿದ್ದಂತೆ ಕಾಣುತ್ತದೆ. ಆದರೆ ಮಂಗರಸ ಕನ್ನಡನಾಡಿನ ಪ್ರಾದೇಶಿಕ ಅಡುಗೆಯ ವೈವಿಧ್ಯತೆಗಳನ್ನು ಇದರಲ್ಲಿ ಸೇರಿಸಿದ್ದಾನೆ. ಒಟ್ಟಿನಲ್ಲಿ ಅಡುಗೆಯ ಬಗೆಗಿನ ತಾಂತ್ರಿಕ ಗ್ರಂಥ ಎಂಬ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿ ಮಂಗರಸನ ಸೂಪಶಾಸ್ತ್ರ ಗ್ರಂಥಕ್ಕೆ ಒಂದು ಮಹತ್ತರವಾದ ಸ್ಥಾನವಿದೆ ಎಂಬುದನ್ನು ಯಾರೂ ತಳ್ಳಿ ಹಾಕುವುದು ಸಾಧ್ಯವಿಲ್ಲ.

ಪ್ರಸ್ತುತ ಶ್ರೀಪಾಲಚರಿತೆ ಸಾಂಗತ್ಯದಲ್ಲಿ ರಚಿತವಾಗಿದೆ. ಪುಂಡರೀಕಿಣೀಪುರದ ರಾಜಗುಣಪಾಲ ಮತ್ತು ಅವನ ಸತಿ ಕುಬೇರಶ್ರೀಯರ ಮಗ ಶ್ರೀಪಾಲನ ಶೌರ್ಯ ಸಾಹಸಗಳೇ ಈ ಕಾವ್ಯದ ವಸ್ತು. ಮನಸ್ಸನ್ನು ದುರ್ಭಾವದಿಂದ ಸದ್ಭಾವದತ್ತ ತಿರುಗಿಸಲು ಈ ಕಾವ್ಯ ಬರೆದುದಾಗಿ ಕವಿ ಹೇಳಿದ್ದಾನೆ. ಇದರಲ್ಲಿ 14 ಸಂಧಿ 1527 ಪದ್ಯಗಳೂ ಇವೆ. ಈ ಕಾವ್ಯದಲ್ಲಿ "ಸಂಧಿ 15 ಪದ್ಯ 1527 ಇವೆ" ಎಂದು ವಿದ್ವಾಂಸರೊಬ್ಬರು ಹೇಳಿದ್ದಾರೆ. ಪದ್ಯಸಂಖ್ಯೆ ಸರಿಯಾಗಿದೆಯಾದರೂ ಸಂಧಿ 15 ಎಂಬುದು ಸರಿಯಲ್ಲ. ಶ್ರೀಪಾಲಚರಿತೆಯ ಪ್ರಕಟನೆಯೊಂದಿಗೆ ಮಂಗರಸನ ಆರು ಕೃತಿಗಳಲ್ಲಿ ಐದು ಹೊರಬಂದಂತಾಗುತ್ತದೆ. ಪ್ರಭಂಜನಚರಿತೆಯೊಂದು ಹೊರಬರಬೇಕಾಗಿದೆ. ಈ ಕಾವ್ಯ ಪೂರ್ಣವಾಗಿ ದೊರೆತಿಲ್ಲವಾದ ಕಾರಣ ಅದು ದೊರೆಯುವವರೆಗೆ ಪ್ರಕಟನೆ ಅಸಾಧ್ಯ. ಈ ಆರೂ ಕೃತಿಗಳು ಕಾವ್ಯಶಕ್ತಿ, ಛಂದೋವೈವಿಧ್ಯತೆ ಮತ್ತು ವರ್ಣನಾಚತುರತೆಗಳಿಂದ ಕೂಡಿವೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀಪಾಲಚರಿತೆಯ ಕಥೆ ಹೀಗಿದೆ : ಪುಷ್ಕಳಾವತಿ ರಾಜ್ಯ. ಅದರ ರಾಜಧಾನಿ ಪುಂಡರೀಕಿಣಿಪುರ. ಅದನ್ನಾಳುವವನು ಗುಣಪಾಲನೆಂಬ ಅರಸ. ಅವನ ರಾಣಿ ಕುಬೇರಶ್ರೀ ಈ ದಂಪತಿಗಳಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ಕುಭೇರಶ್ರೀ ತನಗೆ ಸಂತಾನವಿಲ್ಲದ ಕಾರಣ ಮನದಲ್ಲಿ ಬುಮ್ಮಳಿಸುತ್ತಿದ್ದಳು. ತನ್ನೋರಗೆಯವರಿಗೆಲ್ಲ ಮಕ್ಕಳಿವೆ ತನಗಿಲ್ಲ ಎಂಬುದು ಆಕೆಯ ಸಂಕಟ. ಆಕೆ ಒಂದುದಿನ ಹೊತ್ತಾರೆಯೊಳು ಮರಾಳ, ಹೆರುಗೆಯ ಹೊತ್ತಿನ ಕಪೋತಿ, ಪೆತ್ತ ಅರಗಿಳಿ, ಕುಟುಕೀವ ಪರಮೆವಣಿ, ಕಾಲನೆಕ್ಕಿ ನೊಣೆಯುಸಿವ ಹುಲ್ಲೆಯನ್ನು ಕನಸಿನಲ್ಲಿ ಕಂಡಳು. ಆ ಸಂತೋಷದಲ್ಲಿ ಎಚ್ಚರಗೊಂಡ ಅವಳಿಗೆ ಅದು ಕನಸೆಂದು ತಿಳಿದಾಗ ತುಂಬಾ ನಿರಾಶೆಯಾಯಿತು. ರಾಣಿಯು ದುಃಖದಿಂದಿರುವ ವಿಚಾರವನ್ನು ಸಖಿಯರು ಗುಣಪಾಲನಿಗೆ ಪೇಳಿದರು, ಅವನು ಬಂದು ಮಕ್ಕಳಪಡೆವ

1 ಸೂಪಶಾಸ್ತ್ರ, ಸಂ. ಎನ್. ಎಸ್. ಕೃಷ್ಣಜೋಯಿಸ್, ಪುಟ xxvii

ದಿವಸ ನಿನಗೆ ಮುಂದುಂಟು ಎಂದು ಹೇಳಿ ಅವನಿಗೆ ಜೋಯಿಸನೊಬ್ಬ ಹೇಳಿದ್ದ ಭವಿಷ್ಯ ವನ್ನು ಹೇಳಿದನು. ಗಂಡನ ಮಾತನ್ನು ಕೇಳಿದ ಕುಬೇರಶ್ರೀಗೆ ಅಮಿತಾನಂದವಾಯಿತು.

ಕೆಲವು ದಿನಗಳು ಕಳೆದನಂತರ ಒಂದು ದಿನ ಕುಬೇರಶ್ರೀ ತನ್ನ ನಲ್ಲನೊಂದಿಗೆ ಸುರತದಲ್ಲಿ ಸಂತೋಷಪಟ್ಟು ಮಲಗಿರುವಾಗ ಸೂರ್ಯ, ಚಂದಿರ, ಮತ್ತಗಜ, ತರುಣ ಹರಿಗಳನ್ನು ಕನಸಲ್ಲಿ ಕಂಡಳು. ಆಕೆ ಈ ವಿಚಾರವನ್ನು ಗುಣಪಾಲನಿಗೆ,ಹೇಳಿದಳು. ಅವನು ಚಂದಿರನನ್ನು ಕಂಡುದರಿಂದ ಕಲಾಧರನೂ ಸೂರ್ಯನನ್ನು ಕಂಡುದರಿಂದ ತೇಜೋವಂತನೂ ಆನೆಯನ್ನು ಕಂಡುದರಿಂದ ದಾನಿಯೂ ಸಿಂಹವನ್ನು ಕಂಡುದರಿಂದ ಪರಾಕ್ರಮಿಯೂ ಆದ ಮಗ ನಿನಗೆ ಜನಿಸುವನೆಂದನು. ಅದರಂತೆ ಗರ್ಭತಳೆದ ಕುಬೇರಶ್ರೀ ಒಂಬತ್ತನೆಯ ತಿಂಗಳಿಗೆ ಒಬ್ಬ ಮಗನನ್ನು ಹಡೆದಳು. ಗುಣಪಾಲನು ಅವನಿಗೆ ಹನ್ನೆರಡನೆಯ ದಿನಕ್ಕೆ ಕರ್ಮಗಳನ್ನು ಮಾಡಿಸಿ ಶ್ರೀಪಾಲನೆಂದು ಹೆಸರಿಡಿಸಿದನು. ಬಾಲಕ ಶ್ರೀಪಾಲ ಬಾಲಶಶಿ ಬೆಳೆಯುವಂತೆ ಬೆಳೆದು ದೊಡ್ಡವನಾದನು.

ಒಂದು ದಿನ ಗುಣಪಾಲನು ಚಂದ್ರಗ್ರಹಣವನ್ನು ಕಂಡನು. ಕೂಡಲೆ ಅವನಿಗೆ ಈ ವಸುಧೆಯೊಳು ದೇಹವ ಹೊತ್ತ ಮನುಜರಿಗೆ ಈಗತಿ ನಿಶ್ಚಯವೆಂದು ಬಗೆದು ನಿರ್ವೇಗ ಪರಾಯಣನಾಗಿ ಕಂತುಮರ್ದನನನ್ನು ಪೂಜಿಸಿದ. ಮುನಿಗಳಿಗೆ ನಮಸ್ಕರಿಸಿ, ತನ್ನ ಮಕ್ಕಳಿಗೆ ಅಧಿರಾಜ ಯುವರಾಜ ಪದವಿಯನಿತ್ತು ದೀಕ್ಷೆ ಪಡೆದನು. ಗುಣಪಾಲನ ನಂತರ ಶ್ರೀಪಾಲನು ಪುಷ್ಕಳಾವತಿಯ ರಾಜನಾದನು.

ಒಂದು ದಿನ ಶ್ರೀಪಾಲನು ಸಂದಣಿಸಿದ ಮಾಂಡಲೀಕರ ನಡುವೆ ಆಸ್ಥಾನದಲ್ಲಿ ಕುಳಿತಿದ್ದನು. ಆಗ ವನಪಾಲನೊಬ್ಬ ಬಂದು ಅವನಿಗೆ ನಮಸ್ಕರಿಸಿದನು. ಅವನು ಎಲೈ ರಾಜನೆ ನಾನು ನೋಡಿಕೊಳ್ಳುತ್ತಿರುವ ವನದಲ್ಲಿರುವ ಆಲದಮರದ ಅಡಿಯಲ್ಲಿ ಯುವಕನೊಬ್ಬ ಕುಳಿತು ಹಾಡುತ್ತಿದ್ದಾನೆ. ಅವನ ಸಂಗೀತ ಯಕ್ಷಗಾನದಂತಿದೆ ಎಂದನು. ಈ ಸಂಗತಿಯನ್ನು ಕೇಳಿದ ಶ್ರೀಪಾಲ ಕುತೂಹಲತಳೆದು ತಾನೂ ಅದನ್ನು ಕೇಳುವಾಸೆಯಿಂದ ವನದತ್ತ ಹೊರಟನು. ವನದ ಸೌಂದರ್ಯವನ್ನು ಸವಿಯುತ್ತಾ ಅಲ್ಲಿಗೆ ಬಂದ ಅವನು ಆ ಗೀತವನ್ನು ಕೇಳಿ ಆಶ್ಚರ್ಯಪಟ್ಟನು. ಅವನು ನೋಡುತ್ತಿದ್ದ ಹಾಗೆಯೇ ಆ ಆಲದಮರ ಯಕ್ಷನ ರೂಪು ತಾಳಿತು. ಈ ವಿಚಿತ್ರವನ್ನು ನೋಡುತ್ತಿದ್ದಂತೆಯೇ ಹಾಡುತ್ತಿದ್ದ ಬಾಲಕನ ರೂಪಳಿದು ಬಾಲಕಿಯಾಯ್ತು. ಈ ಆಶ್ಚರ್ಯವೇನೆಂದು ತಿಳಿಯಲು ಶ್ರೀಪಾಲ ಆ ಬಾಲಕಿಯ ಹತ್ತಿರ ಬಂದು ಕೇಳಲು ಆಕೆ ತನ್ನ ಕಥೆಯನ್ನು ಹೇಳತೊಡಗಿದಳು.

ಖಾಂಡವನ ವಿಜಯಾರ್ಧಗಿರಿತಟದಲ್ಲಿ ನೂರಹತ್ತು ವಿದ್ಯಾಧರ ದೇಶಗಳಿವೆ. ಅವುಗಳ ಮಧ್ಯದಲ್ಲಿರುವುದೇ ಮನೋಹರವೆಂಬ ದೇಶ. ಅದರ ರಾಜಧಾನಿ ಶಿವಂಕರನಗರಿ. ಅದನ್ನಾಳುವವನು ವಿಮಲವಾಹನನೆಂಬ ವಿದ್ಯಾಧರ. ಅವನಿಗೆ ಕಾಂತಾವತಿಯೆಂಬ ಸತಿ.

ಆ ದಂಪತಿಗಳಿಗೆ ಮನ್ಮಥನಂಥ ರೂಪುಳ್ಳ ಮಗ. ಅವನ ಹೆಸರು ಅರವಿಂದ. ಅರವಿಂದನ ನಂತರ ಸಮುದ್ರಮಥನ ಕಾಲದಲ್ಲಿ ಲಕ್ಷ್ಮಿಯುದಿಸಿದಂತೆ ಮಗಳೊಬ್ಬಳು ಹುಟ್ಟಿದಳು. ಅವಳ ಹೆಸರು ಜಯಾವತಿ. ಅವಳು ಸಂತತವಾಗಿ ಮನ್ಮಥನ ಆಯುಧಕ್ಕೆ ಹರಿತ ಉಂಟಾದಂತೆ ಯೌವ್ವನೆಯಾದಳು. ಆ ರೂಪವತಿಯೂ ಗುಣವತಿಯೂ ಆದ ಜಯಾವತಿಯ ಸಖಿ ಭಾವಕಿ ಎಂಬುವಳು ನಾನು. ಮಗಳು ವಯಸ್ಸಿಗೆ ಬಂದುದನ್ನರಿತ ವಿಮಲವಾಹನ ಅಷ್ಟಾಂಗ ನೈಮಿತ್ತಿಕನನ್ನು ಕರೆದು ತನ್ನ ಮಗಳಿಗೆ ಗಂಡನಾಗುವವನು ಯಾರು ಎಂದು ಕೇಳಿದನು. ಆಗ ಜೋಯಿಸನು ನಿನ್ನ ಮಗಳ ಸಖಿಯಾದ ಭಾವಕಿಯು ಪುಂಡರೀಕಿಣಿಪುರದ ಬಹಿರ್ವನದಲ್ಲಿ ಗಂಡುವೇಷದಿಂದ ಹಾಡುತ್ತಿರಲಿ. ಯಾರ ದೃಷ್ಟಿಗೆ ಆಕೆಯ ಗಂಡುರೂಪಳಿದು ಹೆಂಗಸಾಗುವಳೋ ಆತ ನಿನ್ನ ಮಗಳಿಗೆ ಗಂಡನಾಗುವನು ಎಂದು ಹೇಳಿದನು. ಅಷ್ಟೇ ಅಲ್ಲ ಅವನಿಗೆ ಚಕ್ರರತ್ನ ದೊರೆಯುವುದು ನಿನ್ನ ಮಗನಾದ ಅರವಿಂದ ಅವನ ಸೇನಾಧಿಪತಿಯಾಗುವನು ಎಂದನು. ಆದುದರಿಂದಲೇ ನೀನು ನೋಡುತ್ತಿದ್ದಂತೆಯೆ ಗಂಡುವೇಷದ ಭಾವಕಿಗೆ ಹೆಣ್ಣುರೂಪವುಂಟಾಯಿತು. ಜಯಾವತಿ ನಿನಗೆ ಹೆಂಡತಿಯಾಗುವಳು. ಅವಶ್ಯಕತೆ ಬಿದ್ದಾಗ ನೀನು ನನ್ನನ್ನು ನೆನೆ ಎಂದು ಹೇಳಿ ಆ ಯಕ್ಷನು ಭಾವಕಿಯೊಂದಿಗೆ ಆಕಾಶಕ್ಕೇರಿದನು. ಇತ್ತ ಅಂತಹ ಸುಂದರಯುವತಿಯನ್ನು ಪತ್ನಿಯಾಗಿ ಪಡೆಯುವ ಶ್ರೀಪಾಲನ ಅದೃಷ್ಟವನ್ನು ಕೊಂಡಾಡುತ್ತ ಜನರು ನಗರದ ಕಡೆಗೆ ನಡೆದರು.

ಜಯಾವತಿಯ ರೂಪಿನ ವರ್ಣನೆಯನ್ನು ಕೇಳಿ ಶ್ರೀಪಾಲ ವಿರಹಾಗ್ನಿಗೆ ಒಳಗಾದನು. ಆ ತಾಪದಿಂದ ಮುಕ್ತನಾಗಲು ಅವನು ವನದಲ್ಲಿ ಅಡ್ಡಾಡುತ್ತಿದ್ದನು. ಸ್ವಲ್ಪಹೊತ್ತು ವಿಹರಿಸಿ ಸಮಾಧಾನವಾದ ಮೇಲೆ ಅವನು ನಗರದತ್ತ ಹೊರಟನು. ಆಗ ಇದ್ದಕ್ಕಿದ್ದ ಹಾಗೆಯೆ ಉತ್ತಮ ಜಾತಿಯ ಕುದುರೆಯೊಂದು ಕಾಣಿಸಿಕೊಂಡಿತು. ಶ್ರೀಪಾಲನೊಂದಿಗೆ ಬರುತ್ತಿದ್ದ ಸವಾರನೊಬ್ಬ ಆ ಜಾತ್ಯಶ್ವವನ್ನು ಹಿಡಿದು ಜೀನು ಬಿಗಿದು ಸವಾರಿಗೆ ಸಿದ್ಧಪಡಿಸಿದನು. ಅವನು ಆ ವನದ ಸುತ್ತಲೂ ಅದರ ಮೇಲೆ ಸವಾರಿಮಾಡಿ ಶ್ರೀಪಾಲನ ಮುಂದೆ ತಂದು ನಿಲ್ಲಿಸಿದನು. ಅದರ ಚುರುಕು ನಡಿಗೆಗೆ ಮನಸೋತ ಶ್ರೀಪಾಲ ತಾನು ಸವಾರಿ ಮಾಡುವಾಸೆಯಿಂದ ಅದನ್ನು ಏರಿದನು. ಕುದುರೆಯು ಮುಖವನ್ನೊಮ್ಮೆ ಸವರಿ ಶ್ರೀಪಾಲನು ಅದನ್ನೇರಿ ಲಗಾಮನ್ನು ಸಡಲಿಸಿ ಪಕ್ಕೆಯನ್ನೊತ್ತಿದನು. ಕೂಡಲೇ ಆ ಕುದುರೆ ಆಕಾಶಕ್ಕೆ ನೆಗೆಯಿತು. ಹಾರುವ ಆ ಕುದುರೆಯ ಬೆನ್ನಮೇಲೆ ಶ್ರೀಪಾಲ ಧೈರ್ಯದಿಂದ ಕುಳಿತಿದ್ದನು. ತಮ್ಮ ರಾಜನನ್ನು ಆಕಾಶಕ್ಕೆ ಕೊಂಡೊಯ್ದ ದುಷ್ಟಾಶ್ವವನ್ನು ಕಂಡು ಪೌರರು, ಬಂಧುಗಳು ದುಃಖಪಡುತ್ತಿದ್ದರು. ಮಗನನ್ನು ಮಾಯಾಕುದುರೆಯು ಹೊತ್ತುಕೊಂಡು ಹೋಯಿತೆಂಬ ವಿಷಯವನ್ನು ಕೇಳಿ ಗುಣಪಾಲನು ಮೂರ್ಛೆ ಹೋದನು. ಆ ವೇಳೆಯಲ್ಲಿ ಶಕುನಿಗನೊಬ್ಬನು ಬಂದು ನಿನ್ನ ಮಗನು ಸುಂದರವಾದ ಯುವತಿಯನ್ನೂ ಚಕ್ರರತ್ನವನ್ನೂ ಪಡೆದು ಹಿಂತಿರುಗುವನು. ನೀನು ಧೈರ್ಯದಿಂದಿರು ಎಂದು ಸಮಾಧಾನ ಹೇಳಿದನು.

ಕುದುರೆಯು ಶ್ರೀಪಾಲನನ್ನು ಹೊತ್ತುಕೊಂಡು ವೇಗವಾಗಿ ಹಾರುತ್ತಿತ್ತು. ಆಗ ಯಕ್ಷನೊಬ್ಬನು ರಾಜಕುಮಾರನನ್ನು ಬಿಡು. ಇಲ್ಲದಿದ್ದರೆ, ನಿನ್ನನ್ನು ಕಡಿದು ಹಾಕುವೆನು ಎಂದು ಘರ್ಜಿಸಿದನು. ಆ ಘರ್ಜನೆಯನ್ನು ಕೇಳಿ ಮಾಯಾಕುದುರೆಯು ಶ್ರೀಪಾಲನನ್ನು ಕೆಡವಿ ಓಡಿಹೋಯಿತು.

ಸಂಜೆಯ ಸೂರ್ಯನು ಪಡುವಣ ಸಮುದ್ರಕ್ಕೆ ಬೀಳುವಂತೆ ಶ್ರೀಪಾಲನು ಭೂಮಿಗೆ ಬೀಳುತ್ತಿದ್ದುದನ್ನು ಯಕ್ಷ ಕಂಡನು. ಆಗ ಆ ಯಕ್ಷನು ಅವನನ್ನು ಆತುಕೊಂಡು ಮೈದಡವಿದನು. ಆಮೇಲೆ ಮುಂದೆ ಏನಾಗುವುದು ಎಂಬುದನ್ನು ಬಲ್ಲ ಯಕ್ಷನು ಅವನನ್ನು ರತ್ನಾರ್ವತವೆಂಬ ಪರ್ವತದ ತುದಿಗೆ ತಂದುಬಿಟ್ಟನು. ಅಲ್ಲಿ ಅನೇಕ ಯಕ್ಷ ಯಕ್ಷಿಯರು ಕಿನ್ನರ ಕಿನ್ನರಿಯರು ಸಂತೋಷದಿಂದ ಹಾಡಿ, ಆಡಿ ಕಾಲ ಕಳೆಯುತ್ತಿದ್ದರು. ಶ್ರೀಪಾಲನನ್ನು ಕಂಡ ಯಕ್ಷನೊಬ್ಬ ಅವನಿಗೆ ಚಿತ್ರಾಂಬರ ವಿದ್ಯೆಯನ್ನು ಹೇಳಿ ಈ ವಿದ್ಯೆಯ ಸಹಾಯದಿಂದ ನಿನಗೆ ಬೇಕಾದ ಬಟ್ಟೆಗಳನ್ನು ಪಡೆಯಬಹುದು ಎಂದು ಹೇಳಿ ಮಾಯವಾದನು. ಶ್ರೀಪಾಲನು ಬಹಳ ಕಷ್ಟದಿಂದ ಆ ಗಿರಿಯ ಶಿಖರಕ್ಕೆ ಹತ್ತಿ ಬಂದನು. ಅವನಿಗೆ ಬಹಳ ಆಯಾಸವಾಗಿದ್ದಿತು. ಅಲ್ಲಿದ್ದ ಕೋಡುಗಲ್ಲೊಂದರ ನೆರಳಿನಲ್ಲಿ ಮಲಗಲು ಯೋಚಿಸಿದನು. ಅವನ ಹತ್ತಿರ ಹಾಸಲು ಹೊದೆಯಲು ಬಟ್ಟೆಗಳಿರಲಿಲ್ಲ. ಆಗ ಅವನಿಗೆ ಯಕ್ಷನು ತಿಳಿಸಿದ್ದ ಚಿತ್ರಾಂಬರ ವಿದ್ಯೆಯ ನೆನಪಾಯಿತು. ಅದರ ಸಹಾಯದಿಂದ ಕೆಂಪುವಸ್ತ್ರವೊಂದನ್ನು ನಿರ್ಮಿಸಿಕೊಂಡು ಅದನ್ನು ಹೊದ್ದು ಮಲಗಿದನು. ಆಯಾಸಗೊಂಡಿದ್ದ ಶ್ರೀಪಾಲನನ್ನು ನಿದ್ರೆಯಾವರಿಸಿತು. ಆಯಾಸ ಪರಿಹಾರದನಂತರ ನಿದ್ರೆ ತಿಳಿದೆದ್ದ ಶ್ರೀಪಾಲನು ಅಲ್ಲಿಯೇ ಹರಿಯುತ್ತಿದ್ದ ಹಳ್ಳದ ತಿಳಿನೀರಿನಲ್ಲಿ ಮುಖತೊಳೆದನು. ಅನಂತರ ಆ ಕೋಡುಗಲ್ಲನ್ನು ಹತ್ತಿ ಸುತ್ತಲೂ ನೋಡಿದನು. ಆಗ ಅನತಿ ದೂರದಲ್ಲಿ ಗೋಪುರವೊಂದು ಕಾಣಿಸಿತು. ಈ ಬೆಟ್ಟದ ತುದಿಯಲ್ಲಿ ಏನು ಕಾರಣದಿಂದ ಮಣಿಮಾಡವಿದೆಯೆಂದು ನೋಡಿದನು. ಆ ಗೋಪುರದಲ್ಲಿ ಆತುರದಿಂದ ಸುತ್ತಲೂ ನೋಡುತ್ತಿರುವ ಮುದುಕಿಯೊಬ್ಬಳನ್ನು ಕಂಡನು. ಶ್ರೀಪಾಲನನ್ನು ನೋಡಿದೊಡನೆಯೇ ಆ ಮುದುಕಿಯು ಹರೆಯದ ಯುವತಿಯಾದಳು. ಅವಳ ಜೊತೆಯಲ್ಲಿ ಹದಿನಾರು ಕಲೆಗಳ ಪ್ರತಿನಿಧಿಗಳೋಯೆಂಬಂತೆ ಹದಿನಾರು ಮಂದಿ ತರುಣಿಯರಿದ್ದರು. ಆ ತರುಣಿಯನ್ನು ಕಂಡ ಶ್ರೀಪಾಲ ನೀನು ಯಾವ ರಾಜನ ಮಗಳು, ಯಾವ ದೇಶ ಎಂದು ಕೇಳಿದನು. ಅವನ ಮಾತಕೇಳಿ ಆ ತರುಣಿ ಕೈಮುಗಿದು ತಮ್ಮ ವೃತ್ತಾಂತವನ್ನು ವಿವರಿಸಿದಳು.

ಶಿವಂಕರಿಯ ರಾಜ ವಿಮಲವಾಹನ. ಅವನ ರಾಣಿ ಕಾಂತಾವತಿ. ಅವರಿಗೆ ಜಯಾವತಿ ಮಗಳು. ನಿನ್ನೆಯದಿನ ನಿಮ್ಮೂರಿನ ಆಲದ ಮರದಡಿಯಲ್ಲಿ ಭಾವಕಿ ಕೊಂಡಾಡಿದ ಚನ್ನೆ ಇವಳೆ. ಬಾಲಕರೂಪದಲ್ಲಿದ್ದು ನಿನ್ನ ಕಂಡೊಡನೆಯೆ ನಿಜರೂಪು ತಾಳಿದ ಭಾವಕಿ ಎಂಬುವಳು ನಾನೆ. ನನ್ನೊಡನೆ ಇದ್ದ ಯಕ್ಷನು ಜಯಾವತಿಯ ಅಣ್ಣ. ಅಲ್ಲಿಂದ ಬಂದ ಮೇಲೆ ಅವನು ನಿನ್ನ ರೂಪು, ಯೌವನ ಗುಣಾತಿಶಯಗಳನ್ನು

ತನ್ನ ತಂಗಿಯ ಹತ್ತಿರ ವಿವರಿಸಿದನು. ಆ ಗುಣಕಥನವನ್ನು ಕೇಳಿ ಸಂತೋಷದಿಂದ ಜಯಾವತಿ ಹಿರಿಹಿಗ್ಗಿದಳು. ವಿರಹದಿಂದ ಬೆಂದಳು. ನೀನು ಬೇಗ ಸಿಗಲೆಂದು ಅರುಹನನ್ನು ಪೂಜಿಸಿದಳು. ಮೂರನೆಯ ಬೆಳಗ್ಗೆ ನಮ್ಮೆಲ್ಲರೊಂದಿಗೆ ಕಂತುನಿವಾಸವೆಂಬ ವನಕ್ಕೆ ಬಂದಳು. ಮನ್ಮಥನ ರಾಣಿಯಂತೆ ಶೋಭಿಸುತ್ತಿದ್ದ ಜಯಾವತಿಯನ್ನು ಆಕಾಶದಲ್ಲಿ ಹೋಗುತ್ತಿದ್ದ ಅಶನಿವೇಗನೆಂಬ ದುಷ್ಟನು ಕಂಡು ಮೋಹಿಸಿದನು.

ಸುಳಿವ ಜಂಗಮಲತೆಯಂತೆ ಕಾಣುವ ಜಯಾವತಿಯಿದ್ದಲ್ಲಿಗೆ ಅವನು ಇಳಿದು ಬಂದನು. ಹೊಸಬನಾದ ನನ್ನನ್ನು ಕಂಡು ಅವಳು ಬೆದರಿಯಾಳೆಂದು ಅವನು ಅದೃಶ್ಯನಾಗಿ ಆಕೆಯನ್ನು ನೋಡಲು ನಿರ್ಧರಿಸಿದನು. ಆ ಯುವತಿಯರ ವನವಿಹಾರ, ನೀರಾಟಗಳನ್ನು ನೋಡಿ ಅಶನಿವೇಗ ಹುಚ್ಚನಂತಾದನು. ಅವನು ಅಲ್ಲಿಂದ ಹೊರಡಲಾರದೆ ತೊಳಲಿದನು. ಕಡೆಗೆ ನಮ್ಮೆಲ್ಲರನ್ನೂ ಅಂತರಿಕ್ಷಕ್ಕೆ ತೆಗೆದುಕೊಂಡು ಹೋಗುವುದಾಗಿ ಹೆದರಿಸಿ ಹಿಡಿದನು. ಆಮೇಲೆ ನಮ್ಮನ್ನೆಲ್ಲಾ ಎತ್ತಿಕೊಂಡು ಆಕಾಶಕ್ಕೆ ಅಡರಿದನು. ವಿಮಾನದಲ್ಲಿಟ್ಟು ನಮ್ಮನ್ನೆಲ್ಲಾ ಈ ಗಿರಿಯ ಶಿಖರಿಗೆ ತಂದನು. ಜಯಾವತಿಯನ್ನು ಕುರಿತು ನಿನ್ನ ರೂಪಿಗೆ ಮನ ಸೋತಿದ್ದೇನೆ ನನ್ನನ್ನೊಲಿದು ಕೂಡು ಎಂದು ಅಂಗಲಾಚಿದನು. ಅದಕ್ಕೆ ಜಯಾವತಿಯು ನನಗೆ ಪುಂಡರೀಕಿಣಿ ಪುರದ ರಾಜ ಶ್ರೀಪಾಲನೆ ಗಂಡನೆಂದು ಜೋಯಿಸನು ಹೇಳಿದ್ದಾನೆ. ಆದುದರಿಂದ ನನ್ನ ತಂದೆತಾಯಿಯರು ನನ್ನನ್ನು ಶ್ರೀಪಾಲನ ಪಟ್ಟದರಸಿ ಎಂದು ತೀರ್ಮಾನಿಸಿದರು. ನಾನು ನಿನಗೆ ಹೆಂಡತಿಯಾಗುವುದು ಸಾಧ್ಯವಿಲ್ಲ. ಶ್ರೀಪಾಲ ನನಗೆ ಗಂಡ ಮಿಕ್ಕ ಗಂಡಸರು ನನಗೆ ಸೋದರ ಸಮಾನ ಎಂದಳು. ಅವಳ ಮಾತಿನಿಂದ ಸಿಟ್ಟುಗೊಂಡ ಅಶನಿವೇಗನು ಮಹೋಪಸರ್ಗ ಮಾಡಿದನು. ಆ ತೊಂದರೆಗಳಿಗೆ ಹೆದರದೆ ಜಯಾವತಿ ನಿಶ್ಚಲದಿಂದಿದ್ದಳು. ಇದರಿಂದ ಕೋಪಗೊಂಡ ಅಶನಿವೇಗನು ನೀನು ಯಾರಕಾರಣದಿಂದ ನನ್ನನ್ನು ತಿರಸ್ಕರಿಸುತ್ತಿರುವೆಯೊ ಆತನನ್ನು ಇಲ್ಲಿಗೆ ತಂದು ನಿನ್ನ ಎದುರಿಗೆ ಕೊಲ್ಲುವೆನೆಂದನು. ಬಳಿಕ ಏಕೊ ಏನೊ ನಿನ್ನನ್ನಿಲ್ಲಿ ಬಿಟ್ಟು ಕೊಲ್ಲದೆ ಓಡಿಹೋದನು ಎಂದು ಆಕೆ ವಿವರಿಸಿದಳು.

ಭಾವಕಿ ಹೇಳಿದ ಕಥೆಯನ್ನು ಕೇಳಿದ ಶ್ರೀಪಾಲನು ಮಾಯದಾಕುದುರೆ ತನ್ನನ್ನು ಅಲ್ಲಿಗೆ ತಂದ ಕಥೆಯನ್ನು ವಿವರಿಸಿದನು. ಆಗ ಭಾವಕಿಯು ಅರಸುವ ಬಳ್ಳಿ ಕಾಲಿಗೆ ತೊಡರಿತೆಂಬಂತೆ ನೀನು ದೊರೆತಿದ್ದೀಯೆ, ಜಯಾವತಿಯೊಂದಿಗೆ ನೀನು ಈ ಗಿರಿಯಲ್ಲಿ ನಿಂತರೆ ದುಷ್ಟನಾದ ಅಶನಿವೇಗ ನಿಮಗೆ ತೊಂದರೆ ಕೊಡದೆ ಬಿಡನು. ಆದುದರಿಂದ ಈಗಲೇ ನಮ್ಮೂರಿಗೆ ವಿಮಾನದಲ್ಲಿ ಹೋಗಿಬಿಡೋಣ ಎಂದಳು. ಅವಳ ಮಾತನ್ನು ಕೇಳಿದ ಶ್ರೀಪಾಲ ಶತ್ರು ಕೊಲ್ಲುವನೆಂಬ ಸುದ್ದಿ ಕೇಳಿ ಶ್ರೀಪಾಲ ನಗರಕ್ಕೆ ಓಡಿದ ಎಂಬ ಮಾತು ಕೇಳಿ ಜನರು ನಗುವುದಿಲ್ಲವೆ? ಏನು ಮಾಡಿದರೂ ಜೀವ ಶಾಶ್ವತವಲ್ಲ. ಆದುದರಿಂದ ಹೆದರಿ ಬಾಳುವುದು ಪ್ರಯೋಜನವಿಲ್ಲ. ಹೆದರದೆ ಹೋರಾಡಿ [illegible]

ಹೋಗುವುದೇ ರಾಜಧರ್ಮ. ಹೀಗೆ ಧೈರ್ಯದಿಂದ ಮಾತನಾಡಿದ ಶ್ರೀಪಾಲನ ಮಾತು ಕೇಳಿ ಜಯಾವತಿ ಚಿಂತೆಗೊಳಗಾದಳು.

ನೀನು ಏನೇ ಹೇಳಿದರೂ ಇಲ್ಲಿರುವುದು ಸರಿಯಲ್ಲ. ಈ ಕೂಡಲೆ ನೀನು ಜಯಾವತಿಯೊಂದಿಗೆ ಪುಂಡರೀಕಿಣಿಪುರಕ್ಕೆ ಹೊರಡು ಎಂದು ಭಾವಕಿ ಹೇಳಿದಳು. ಆದಕ್ಕೆ ಶ್ರೀಪಾಲನು ತಂದೆತಾಯಿಯರ ಅನುಮತಿಯಿಲ್ಲದೆ ಹೆಣ್ಣುಗಳೊಂದಿಗೆ ಕೂಡುವುದು ಧರ್ಮವಲ್ಲ ಎಂದನು. ಅವನ ಮಾತನ್ನು ಕೇಳಿದ ಜಯಾವತಿ ತನ್ನ ತಂದೆ ವಿಮಲವಾಹನ ನನ್ನು ಕರೆದುತರುವುದೇ ಸರಿ ಎಂದುಕೊಂಡಳು. ಆದರೆ ನಾವು ನಗರಿಗೆ ಹೋಗಿ ಬರುವ ಹೊತ್ತಿಗೆ ಈತ ಇಲ್ಲಿರುತ್ತಾನೆಯೊ ಇಲ್ಲವೊ ಎಂಬ ಅನುಮಾನ ಜಯಾವತಿಗೆ ಉಂಟಾಯಿತು. ಆಗ ತನ್ನ ವಿದ್ಯೆಯ ಬಲದಿಂದ ಅವನಿಗೆ ಮೂರ್ಛೆ ಬರಿಸಿ ಆ ಕೋಡುಗಲ್ಲಿನ ಅಡಿಯಲ್ಲಿ ಮಲಗಿಸಿ ಕೆಂಪುವಸ್ತ್ರವನ್ನು ಹೊದಿಸಿದಳು. ಅನಂತರ ತನ್ನ ಸಖಿಯರೊಂದಿಗೆ ತಂದೆ ವಿಮಲವಾಹನನನ್ನ ಕರೆತರಲು ಹೋದಳು. ಅದೇ ಕಾಲದಲ್ಲಿ ದೇವೇಂದ್ರನು ಜಗತ್ಪಾಲಮುನಿಯ ಕೇವಲ ಬೋಧಪೂಜೆ ಮಾಡುತ್ತಿದ್ದನು. ವಿಮಲ ವಾಹನನು ಅಲ್ಲಿಗೆ ವಿದ್ಯಾಧರರೆಲ್ಲರೊಂದಿಗೆ ಹೊರಟುಹೋಗಿದ್ದನು. ಈ ವಿಷಯವನ್ನು ಕೇಳಿದ ಜಯಾವತಿ ಕೂಡಲೆ ಅಲ್ಲಿಗೆ ತನ್ನ ತಂದೆಯನ್ನು ಕರೆತರಲು ಹೋದಳು.

ರಾತ್ರಿ ಕಳೆದು ಹಗಲಾಯಿತು. ಈ ಜಗತ್ತಿನ ಚರಾಚರಗಳ ಮೇಲೆಲ್ಲಾ ಸೂರ್ಯ ಕಿರಣಗಳು ಬಿದ್ದುವು. ಆಗ ಶ್ರೀಪಾಲನು ಮಲಗಿದ್ದ ಕಡೆಗೆ ಭೇರುಂಡ ಪಕ್ಷಿಯೊಂದು ಹಾರಿ ಬಂದಿತು. ಅದು ಕೆಂಪು ವಸ್ತ್ರವನ್ನು ಹೊದ್ದು ಮಲಗಿದ್ದ ಶ್ರೀಪಾಲನನ್ನು ಕಂಡು ಮಾಂಸವೆಂದು ಭ್ರಮಿಸಿತು. ಮಾಂಸದಾಶೆಯಿಂದ ಕೆಂಪು ವಸ್ತ್ರದೊಳಗಿದ್ದ ಶ್ರೀಪಾಲನನ್ನು ಕೊಕ್ಕಿನಿಂದ ಕಚ್ಚಿಕೊಂಡು ಉತ್ತರ ದಿಕ್ಕಿಗೆ ಹಾರಿತು. ಇದನ್ನು ಕಂಡ ಜಯಾವತಿಯ ಸಖಿಯರು ಹೆದರಿ ಹಮ್ಮೈಸಿದರು. ಉತ್ತರಕ್ಕೆ ಹಾರಿದ ಭೇರುಂಡ ವಿಜಯಾರ್ಧ ಪರ್ವತದ ತುದಿಯ ಜಿನಾಲಯದ ಪಕ್ಕದಲ್ಲಿದ್ದ ವೃಕ್ಷಕ್ಕೆ ಹೋಯಿತು. ಅದು ಇನ್ನೇನು ಕೊಂಬೆಯಲ್ಲಿ ಕೂರಬೇಕೆಂದು ಯೋಚಿಸುತ್ತಿರುವಾಗ ಶ್ರೀಪಾಲನ ಪುಣ್ಯ ಮೈವೆತ್ತು ಬಂದಂತೆ ಶರಭನೊಂದು ಬಂದಿತು. ಅದನ್ನು ಕಂಡು ಭೇರುಂಡ ಶ್ರೀಪಾಲನನ್ನು ಉಗುಳಿತು. ಆಗ ಅವನು ಎಚ್ಚೆತ್ತು ಸುತ್ತಲೂ ನೋಡಿದನು. ಸುತ್ತಲೂ ನೋಡು ತ್ತಿರುವಾಗ ಅವನ ಕಣ್ಣಿಗೆ ಗಿರಿಯ ತುದಿಯ ಜಿನಾಲಯವು ಬಿದ್ದಿತು.

ಹಲವು ಬಣ್ಣದ ಚಿತ್ರ ಭಿತ್ತಿ, ನೀಲದ ನೆಲ, ಮಾಣಿಕದ ಕಂಬ, ಕುಲಿಶದ ಕುಮುದವಟ್ಟಿಗೆ, ಪಸುಗಲ್ಲಿನ ಮೇಲ್ನೆಲೆಯ ಆ ಜಿನಾಲಯು ಭೂದೇವಿಯ ಮುತ್ತಿನ ಮೂಗುತಿಯಂತೆ ಹೊಳೆಯುತ್ತಿತ್ತು. ಅದನ್ನು ಕಂಡು ಶ್ರೀಪಾಲನಿಗೆ ಸಂತೋಷ ವಾಯಿತು. ಅವನು ಅಲ್ಲಿಗೆ ಬಂದು ಪ್ರದಕ್ಷಿಣೆ ಹಾಕಿ ಅನೇಕ ದಿನಗಳಿಂದ ಮುಚ್ಚಿ ಕೀಲಿಸಿದ್ದ ಆ ಜಿನಾಲಯದ ಬಾಗಿಲನ್ನು ಮುಟ್ಟಿ ತಳ್ಳಿದನು. ಅದು ತೆಗೆದುಕೊಂಡಿತು.

ಅವನು ಒಳಗೆ ಹೋಗಿ ಭಕ್ತಿಯಿಂದ ಜಿನನನ್ನು ಪೂಜಿಸಿದನು. ಅನಂತರ ಹೊರ ಬಂದು ಅಲ್ಲಿನ ಮಣಿಮಂಟಪದಲ್ಲಿ ನಿಂತನು. ಆಗ ಅವನೆದುರು ದೇವತೆಗಳ ಗುಂಪು ಕಾಣಿಸಿತು. ದೇವದುಂದುಭಿ ಮೊಳಗಿತು. ಹೂವಿನ ಮಳೆ ಕರೆಯಿತು. ಅಲ್ಲಿಗೆ ಬಂದ ದೇವತೆಗಳು ಈ ಕುಮಾರನ ರೂಪು ಚಲ್ವಿಕೆಗೆ ಮರುಳಾದರು. ದೇವ ದಾನವ ಮಾನವರಲ್ಲಿ ಇಂತಹ ರೂಪುವಂತರಿಲ್ಲ ಎಂದುಕೊಂಡರು. ನರಜನ್ಮದಲ್ಲಿ ಜನಿಸಿ ಈ ಸುಕುಮಾರನ ಕೈಹಿಡಿಯುವುದು ಪರಮಪುಣ್ಯ ಎಂದು ದೇವಸತಿಯರು ಭಾವಿಸಿದರು. ಹೀಗೆ ಮಂಗಲಗುಣ ಭೂಷಿತನೂ, ಉತ್ತುಂಗಪರಾಕ್ರಮಿಯೂ ಆದ ಶ್ರೀಪಾಲನನ್ನು ದೇವತೆಗಳು ಕೊಂಡಾಡುತ್ತಿದ್ದರು.

ದೇವೇಂದ್ರನು ಸಕಲ ದೇವತೆಗಳೊಂದಿಗೆ ಇಳಿದು ಬಂದು ಅರುಹನನ್ನು ಪೂಜಿಸಿದನು. ಅನಂತರ ಶ್ರೀಪಾಲನನ್ನು ಕುರಿತು ಇಡೀ ವಿಶ್ವವನ್ನೇ ನಡುಗಿಸಬಲ್ಲ ನನ್ನ ಚಂದ್ರಾಯುಧದೊಂದಿಗೆ ಇಡೀ ದೇವವೃಂದ ಪ್ರಯತ್ನಿಸಿದರೂ ಕೀಲಿಸಿದ ದೇವಾಲಯದ ಬಾಗಿಲುಗಳನ್ನು ತೆಗೆಯಲಾಗಿರಲಿಲ್ಲ. ನೀನು ಮುಟ್ಟಿದೊಡನೆಯೇ ಬಾಗಿಲು ತೆಗೆದುಕೊಂಡವು. ನೀನು ಮಹಾತ್ಮ ಎಂದು ಹೇಳಿ ಕಾಮರೂಪಿನ ಮುದ್ರಿಕೆಯನ್ನು ಕಾಣಿಕೆಯಾಗಿ ಕೊಟ್ಟು ಸ್ವರ್ಗದತ್ತ ಹೋದನು.

ದೇವೋತ್ತಮನಾದ ಅರುಹಂತನ ಪಾದಗಳಿಗೆರಗಿ ಹೊರಬಂದ ಶ್ರೀಪಾಲ ದಂಡಕಾರಣ್ಯವನ್ನು ಪ್ರವೇಶಿಸಿದನು. ಆ ಮಹಾ ಕಾನನದಲ್ಲಿ ಸೂಕರ, ಶುನಕ, ಶರಭ, ಶಾರ್ದೂಲ, ಭಲ್ಲೂಕ, ಲುಲಾಯ, ಕರಡಿ, ಕೇಸರಿ, ಭೇರುಂಡ, ಮುಂತಾದ ಪ್ರಾಣಿಗಳೂ ಹರಡೆ, ಹಸುಬ, ಮಳೆಗೆದರ, ಗೀಜಗ, ಗುಬ್ಬಿ, ಪುರಳಿ, ಸಿರಗ, ನಿರ್ವಾಯ, ಮರಕೊಟ್ಟ, ಜಿಟ್ಟಿಕೊಟ್ಟ ಮುಂತಾದ ಪಕ್ಷಿಗಳು ಹೇರಳವಾಗಿದ್ದವು. ಕಾಡಿನಲ್ಲಿದ್ದ ತಪಸಿಗಳ ತಾಣ, ಬೇಡನಳ್ಳಿಗಳ ಬೇಡತಿಯರ ಸೌಂದರ್ಯಗಳನ್ನು ಈಕ್ಷಿಸುತ್ತ ಬರುತ್ತಿದ್ದ ಶ್ರೀಪಾಲ ಆನೆಗಳ ದೊಡ್ಡ ಗುಂಪನ್ನು ಕಂಡು ಆನಂದದಿಂದ ನೋಡುತ್ತಿದ್ದನು. ಆಗ ಇದ್ದಕ್ಕಿದ್ದ ಹಾಗೆ ಸಲಗನೊಂದು ಕುರುಕ್ಷೇತ್ರದಲ್ಲಿ ಭಗದತ್ತನ ಸುಪ್ರತೀಕಗಜ ಭೀಮನ ಮೇಲೆರಗಿದಂತೆ ಅದು ಶ್ರೀಪಾಲನ ಮೇಲೆರಗಿತು. ಆದರೆ ಅವನು ಅಂಜದೆ ಅದಿರದೆ ಅದರ ದಂತಗಳನ್ನು ಹಿಡಿದು ಹೋರಾಡಿದನು. ಆನೆ ಸೋತಿತು. ಶ್ರೀಪಾಲನು ಅದರ ಬೆನ್ನೇರಿದನು. ಆಗ ಗಗನಚರನೊಬ್ಬ ಅಲ್ಲಿಗೆ ಬಂದು ತಾನು ಬಂದ ಸಂಗತಿಯನ್ನು ಶ್ರೀಪಾಲನಿಗೆ ವಿವರಿಸಿದನು.

ನಿನ್ನೆ ರತ್ನಾಕರ ಪರ್ವತದ ತುದಿಯಲ್ಲಿ ಶಿವಂಕರ ನಗರಿಯ ವಸುಪಾಲ, ಕಾಂತಾಮತಿಯರ ಮಗಳು ಜಯಾವತಿ ನಿನಗೆ ಮೂರ್ಛೆ ಬರಿಸಿ ಸಖಿಯರನ್ನು ಕಾವಲಿಟ್ಟು ತನ್ನ ತಂದೆತಾಯಿಯರನ್ನು ಕರೆತರಲು ಹೋದಳು. ಇತ್ತ ರಕ್ತಗಂಬಳ ಹೊದ್ದು ಮಲಗಿದ್ದ ನಿನ್ನನ್ನು ಗಂಡಭೇರುಂಡ ಪಕ್ಷಿ ಮಾಂಸವೆಂದು ಎತ್ತಿಕೊಂಡು ಹೋಯಿತು.

ತನ್ನ ತಂದೆತಾಯಿಯರೊಂದಿಗೆ ಬಂದ ಜಯಾವತಿ ನಿನ್ನನ್ನು ಕಾಣದೆ ಸಖಿಯರನ್ನು ಕೇಳಿದಳು. ಅವರು ಭೇರುಂಡಪಕ್ಷಿ ನಿನ್ನನ್ನು ಹೊತ್ತುಕೊಂಡು ಹೋದ ಸಂಗತಿಯನ್ನು ಹೇಳಿದರು. ಅದನ್ನು ಕೇಳಿದ ಜಯಾವತಿ ಹೆಗ್ಗರ ಹೊಡೆದಂತೆ ಮೂರ್ಛಿತಳಾದಳು. ಆಗ ಆಕಾಶದಲ್ಲಿ ಇಂದಿನಿರುಳು ಕಡೆಯ ಜಾವದಲ್ಲಿ ಶ್ರೀಪಾಲ ನಿನ್ನನ್ನು ಬಂದು ಸೇರುವನು ಎಂಬ ಅಶರೀರವಾಣಿಯಾಯಿತು. ಅದನ್ನು ಕೇಳಿದ ಜಯಾವತಿ ಸಂತೋಷದಿಂದ ಶಿವಂಕರ ನಗರಿಗೆ ಹಿಂತಿರುಗಿದಳು. ಅವಳು ಕೂಡಲೇ ಕರುಮಾಡವೇರಿ ಭಿತ್ತಿಯಲ್ಲಿ ನಿನ್ನ ಚಿತ್ರ ಬಿಡಿಸಿದಳು. ಚಿತ್ರದಲ್ಲಿ ನಿನ್ನ ಆ ರೂಪನ್ನು ಕಂಡು ಜಯಾವತಿ ವಿರಹ ಮೂರ್ಛೆ ಹೊಂದಿದಳು. ಈ ವಿಷಯ ತಿಳಿದ ವಿಮಲವಾಹನ ಕಾಂತಾಮತಿಯರು ಮಗಳಿದ್ದಲ್ಲಿಗೆ ಬಂದರು. ಆಗ ಅಲ್ಲಿಗೆ ಅಷ್ಟಾಂಗ ನಿಮಿತ್ತಜ್ಞನನ್ನು ಕರೆಸಿ ಕೇಳಿದರು. ಆಗ ಅವನು ನೀನು ಭೀಮಾರಣ್ಯವೆಂಬ ಈ ಕಾಡಿನಲ್ಲಿರುವುದಾಗಿ ತಿಳಿಸಿದನು. ಆದುದರಿಂದ ಕೂಡಲೇ ನಿನ್ನನ್ನು ಕರೆದುತರುವಂತೆ ತಿಳಿಸಿ ವಿಮಲವಾಹನ ನನ್ನನ್ನು ಇಲ್ಲಿಗೆ ಕಳಿಸಿದನು. ನಾನು ಆ ವಿಮಲವಾಹನನ ಮಗ ಅರವಿಂದ. ಈ ಸಂಗತಿಯನ್ನು ತಿಳಿದ ಶ್ರೀಪಾಲನು ಅರವಿಂದನೊಂದಿಗೆ ಹೊರಟನು. ಅವರಿಬ್ಬರೂ ಆಕಾಶಮಾರ್ಗದಲ್ಲಿ ಶಿವಂಕರ ನಗರಿಯತ್ತ ಹೊರಟರು.

ಶಿವಂಕರ ನಗರ ಒಂದು ಹರಿದಾರಿಯಷ್ಟು ದೂರವಿರುವಾಗಲೆ ಆ ಖಚರನು ಶ್ರೀಪಾಲನನ್ನು ಭೂಮಿಗಿಳಿಸಿದನು. ಇಬ್ಬರೂ ಕಾಲುನಡಿಗೆಯಲ್ಲಿ ಆ ವಿದ್ಯಾಧರ ರಾಜ್ಯದ ಸೌಂದರ್ಯವನ್ನು ನೋಡುತ್ತಾ ನಡೆದರು. ದಾರಿಯುದ್ದಕ್ಕೂ ಜನ ಜಾತ್ರೆಯಾಗಿ ನಿಂತು ಇವರನ್ನು ನೋಡುತ್ತಿದ್ದರು. ಅವರು ಅಪರಾಹ್ನದ ಹೊತ್ತಿಗೆ ಆ ನಗರದ ದಕ್ಷಿಣದಲ್ಲಿದ್ದ ಸ್ಮಶಾನದ ಬಾಗಿಲ ಹತ್ತಿರ ಬಂದು ಸೇರಿದರು. ಆಗ ಇದ್ದಕ್ಕಿದ್ದ ಹಾಗೆಯೆ ಶ್ರೀಪಾಲನನ್ನು ಅಲ್ಲಿ ಬಿಟ್ಟು ಅರವಿಂದ ಮಾಯವಾದನು. ಜೊತೆಯಲ್ಲಿ ಬರುತ್ತಿದ್ದ ಅರವಿಂದ ಮೋಸದಿಂದ ಎತ್ತ ಹೋದನೆಂದು ನೋಡುತ್ತಿರುವಾಗಲೇ ಸೂರ್ಯನು ಪಶ್ಚಿಮಾದ್ರಿಯಿಳಿದು ಮಾಯವಾದನು. ಕತ್ತಲೆ ಜಗತ್ತನ್ನಾವರಿಸಿಕೊಂಡಿತು.

ಮನುಷ್ಯ ಎಷ್ಟೇ ದೊಡ್ಡವನಾದರೂ ವಿಧಿಯನ್ನು ಮೀರಲಾಗುವುದಿಲ್ಲ ಎಂದು ಯೋಚಿಸಿ ಶ್ರೀಪಾಲನು ಆ ಸ್ಮಶಾನದ ದಾರಿಯಲ್ಲಿ ಮುಂದುವರಿದನು. ಅರೆ ಉರಿಯುತ್ತಿದ್ದ ಹೆಣ ಅರೆಗರಿಡಿದಿರ್ದ ರುಂಡ ಮುಂಡಗಳಿಂದ ಆ ಸ್ಮಶಾನದಾರಿ ಭೀಕರವಾಗಿದ್ದಿತು. ಆ ಸ್ಮಶಾನದಲ್ಲಿ ಅನೇಕ ಭೂತಗಳು ಸೇರಿಕೊಂಡು ಹೆಣಗಳ ರಕ್ತ ಮಾಂಸವನ್ನು ತಿಂದು ತೇಗುತ್ತಿದ್ದುವು. ಅನೇಕ ಜನ ಮಾಂತ್ರಿಕರು ಶಕ್ತಿಯ ಆವಾಹನೆ ಮಾಡುತ್ತಿದ್ದರು. ಇದನ್ನೆಲ್ಲಾ ನೋಡುತ್ತ ಮುಂದುವರಿಯುತ್ತಿದ್ದ ಶ್ರೀಪಾಲನನ್ನು ಭೂತವೊಂದು ಅಡ್ಡಗಟ್ಟಿ "ಎಲೆ ವೀರ ನಾನು ಬಯಸಿದ್ದನ್ನು ನೀನು ಕೊಡುವುದಾದರೆ ನಿನಗೆ ಬೇಕಾದುದನ್ನು ಕೊಡುವೆನೆಂದಿತು. ಅದೇನು ಬೇಕೆಂದೆನಲು ನಿನ್ನ ಕರುಳನ್ನು ಕೊಯ್ದು ಕೊಡು ಎಂದಿತು. ಕರುಳನ್ನೇ ಬಗೆದು ಕೊಟ್ಟಮೇಲೆ ನೀನು ನನ್ನಿಚ್ಛೆ

ಸಲಿಸುವುದೆಲ್ಲಿ ಬಂತು ಎಂದ ಶ್ರೀಪಾಲ ಆ ಭೂತವನುದ್ದೇಶಿಸಿ. ಆಗ ಅದು ಕರ್ಣ, ದಧೀಚಿ, ಬಲಿಚಕ್ರವರ್ತಿ ಮುಂತಾದವರು ಬೇಡಿದುದನ್ನು ಕೊಟ್ಟರು ನೀನು ತಪ್ಪಬಹುದೆ? ಎಂದಿತು. ಆಗ ಶ್ರೀಪಾಲ ತನ್ನ ಹೊಟ್ಟೆಯನ್ನು ಬಗೆದು ಕರುಳು ತೆಗೆಯಲು ಉದ್ಯುಕ್ತನಾದನು. ಆಗ ಭೂತ ರೂಪಳಿದು ದಿವ್ಯ ಪುರುಷನೊಬ್ಬನು ಅವನಿಗೆ ಕಾಣಿಸಿಕೊಂಡನು. ಅವನು ನಿನ್ನ ಧೈರ್ಯ ಮತ್ತು ತ್ಯಾಗಗಳಿಗೆ ಮೆಚ್ಚಿದೆನು. ಅಮೂಲ್ಯವಾದ ರತ್ನವನ್ನು ನಿನಗೆ ಕೊಡುವೆನು ತೆಗೆದುಕೊ ಎಂದು ಹೇಳಿ ಹರಸಿದನು. ಅದಲ್ಲದೆ ದಿವ್ಯಪಾದುಕೆ, ಚಿಂತಾಮಣಿ, ಮತ್ತು ಖಡ್ಗರತ್ನಗಳನ್ನು ನೀಡಿದನು. ಇವೆಲ್ಲವನ್ನು ಕಂಡು ವಿಸ್ಮಯ ಪಡುತ್ತಿದ್ದ ಶ್ರೀಪಾಲನಿಗೆ ಅರವಿಂದ ಕಾಣಿಸಿಕೊಂಡು ಈ ರತ್ನ ನಿನಗೆ ಈ ರೀತಿಯಲ್ಲಿಯೇ ಸೇರಬೇಕೆಂದು ಜೋಯಿಸ ಹೇಳಿದ್ದನು. ಆದುದರಿಂದ ನಾನು ಹಾಗೆ ಮಾಡಬೇಕಾಯಿತು ಎಂದನು. ಅನಂತರ ಅವರಿಬ್ಬರೂ ನಗರದ ಕಡೆಗೆ ಹೊರಟು ನಡೆದರು.

ಅರವಿಂದ ಮತ್ತು ಶ್ರೀಪಾಲ ಶಿವಂಕರ ನಗರಿಯನ್ನು ಪ್ರವೇಶಿಸಿದರು. ಆಗ ಶ್ರೀಪಾಲನು ತಾನು ಶಿವಂಕರ ನಗರಿಯ ರಚನೆಯನ್ನು ನೋಡಬೇಕೆಂದನು. ಅದಕ್ಕೊಪ್ಪಿ ಅರವಿಂದನು ಅವನನ್ನು ಕೇರಿಕೇರಿಗೆ ಕರೆದೊಯ್ದನು. ಅವರಿಬ್ಬರೂ ಎಲ್ಲಾ ಬೀದಿಗಳನ್ನು ಸುತ್ತಿಕೊಂಡು ಸೂಳೆಗೇರಿಗೆ ಬಂದರು. ಅಂಗಜ ಚಕ್ರವರ್ತಿಯ ರಾಜಧಾನಿಯಂತಿದ್ದ ಅದನ್ನು ನೋಡಿ ಅಲ್ಲಿನ ಆಮೋದ ಪ್ರಮೋದಗಳನ್ನು ಕಂಡು ಹಿಗ್ಗಿದರು. ಅನಂತರ ಅವರಿಬ್ಬರೂ ರಾಜಾಲಯದತ್ತ ನಡೆದರು.

ಮಗ ಅರವಿಂದನೊಂದಿಗೆ ಬಂದ ಶ್ರೀಪಾಲನನ್ನು ವಸುಪಾಲನು ಕೂಡಲೇ ಜಯಾವತಿ ಇದ್ದಲ್ಲಿಗೆ ಕರೆದುಕೊಂಡು ಹೋದನು. ಶ್ರೀಪಾಲ ಬಂದುದನ್ನು ಕಂಡ ಸಖಿಯರು ಜಯಾವತಿಗೆ ಮರುಪ್ರಾಣ ಬಂತೆಂದುಕೊಂಡರು. ವಿರಹದಿಂದ ಬಳಲಿದ್ದ ಜಯಾವತಿ ಶ್ರೀಪಾಲನನ್ನು ಕಂಡು ಸಂತೋಷಪಟ್ಟಳು. ಅವಳ ಹೃದಯ ಮನಸ್ಸುಗಳು ಚಂದ್ರನನ್ನು ಕಂಡ ಸಮುದ್ರದಂತೆ ಉಕ್ಕಿ ಹರಿದವು. ವಿಮಲವಾಹನನ್ನು ಕೇಳಿದುದರಿಂದ ಶ್ರೀಪಾಲನು ತಾನು ಮಾಯಾ ಕುದುರೆಯೇರಿ ಅಲ್ಲಿಯವರೆಗೆ ಬಂದ ಕಥೆಯೆಲ್ಲವನ್ನೂ ವಿವರಿಸಿದನು. ಉಂಟಾಗಿದ್ದ ದುಃಖದ ಛಾಯೆ ಹರಿದ ಎಲ್ಲೆಲ್ಲಿಯೂ ಸಂತಸ ಉಕ್ಕಿ ಹರಿಯಿತು.

ಮೂರನೆಯ ದಿನ ವಿಮಲವಾಹನನು ಜೋಯಿಸನನ್ನು ಕರೆದು ಜಯಾವತಿ–ಶ್ರೀಪಾಲರ ಮದುವೆಗೆ ಶುಭದಿನ ಗೊತ್ತು ಮಾಡುವಂತೆ ತಿಳಿಸಿದನು. ಆಗ ಜೋಯಿಸನು ಇಂದಿನಿಂದ ಮೂರನೆಯ ದಿನಕ್ಕೆ ಉತ್ತಮವಾದ ಲಗ್ನವಿದೆ ಎಂದು ಹೇಳಿದನು. ಕೂಡಲೇ ವಿಮಲವಾಹನನು ತನ್ನ ಸಚಿವ ಸೋಮಪ್ರಭನನ್ನು ಕರೆದು ಮದುವೆಗೆ ಎಲ್ಲಾ ಸನ್ನಾಹಗಳನ್ನು ಮಾಡುವಂತೆ ಸೂಚಿಸಿದನು. ಅವನು ಇಳೆ ಪೊಗಳುವಂತೆ ನಗರ

ವನ್ನು ಶೃಂಗರಿಸಿದನು. ಹಳುಕಿನ ನೆಲ, ಪದ್ಮರಾಗದ ಛತ್ತು, ಕುಲಿಶದ ತೊಲೆ, ಪಸಿ ರ್ಪಣೆಯ ಪಲಿತ, ವಿದ್ರುಮದ ಮೇಲ್ಹೊದಿಕೆಗಳಿಂದ ಕೂಡಿದ ಸುಂದರ ವಿವಾಹ ಮಂಟಪ ಸಿದ್ಧವಾಯಿತು. ದೇಶವಿದೇಶದ ಅರಸುಮಕ್ಕಳು, ಸಂಧಿವಿಗ್ರಹಿಗಳು, ಪೌರ ಜನರು ಸಾಲುಸಾಲಾಗಿ ಮದುವೆಗೆ ಬಂದರು. ಶ್ರೀಪಾಲ–ಜಯಾವತಿಯರ ಮದುವೆ ಅದ್ದೂರಿಯಿಂದ ನಡೆಯಿತು. ಮದುವೆಗೆ ಬಂದ ಸಕಲರಿಗೂ ಅವರವರ ಯೋಗ್ಯತಾನು ಸಾರವಾಗಿ ವಿಮಲವಾಹನನು ಮುಯ್ಯಿತ್ತು ಅವರವರ ಊರುಗಳಿಗೆ ಕಳಿಸಿದನು.

ಮದುವೆಯನಂತರ ಕೆಲವುಕಾಲ ಶ್ರೀಪಾಲ ಜಯಾವತಿಯರು ಸಂತೋಷದಿಂದ ಕಾಲಕಳೆದರು. ಒಂದುದಿನ ಶ್ರೀಪಾಲನು ಅರುಹನ ದೇವಾಲಯಕ್ಕೆ ಹೋಗುವ ಆಶೆ ಯನ್ನು ಜಯಾವತಿಯೊಂದಿಗೆ ಹೇಳಿದನು. ಅವಳು ಕೂಡಲೇ ತಂದೆಗೆ ಹೇಳಿ ಪುಷ್ಪಕ ವನ್ನು ತರಿಸಿದಳು. ಅದನ್ನೇರಿ ಅವರಿಬ್ಬರೂ ಪುರಾರಿಯ ಗುಡಿಗೆ ಬಂದರು. ಬಂದು ಸಿದ್ಧಕೂಟ ಶಿಖರಿಯನ್ನು ಮೂರುಬಾರಿ ಪ್ರದಕ್ಷಿಣೆಮಾಡಿ ಕಂದರ್ಪರಿಪುಗೆರಗಿದರು. ಅವರಿಬ್ಬರೂ ಒಟ್ಟಿಗಿರುವುದನ್ನು ನೋಡಿ ಅಶನಿವೇಗನು ಕೋಪಗೊಂಡು ಅವರಿಬ್ಬರನ್ನೂ ಕೊಲ್ಲಲು ಯೋಚಿಸಿದನು. ಅವನು ಅದೃಶ್ಯಕರಣದಿಂದ ಬಂದು ಶ್ರೀಪಾಲ ಜಯಾವತಿ ಯರನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿದನು. ಅವನು ಅವರಿಬ್ಬರನ್ನೂ ಭಯಂಕರ ವಿಷಸರ್ಪಗಳಿದ್ದ ಗುಹೆಯೊಂದಕ್ಕೆ ನೂಕಿದನು. ಆ ಗುಹೆಯಲ್ಲಿನ ಸರ್ಪಗಳ ವಿಷ ಎಷ್ಟು ಕಠೋರವಾಗಿತ್ತೆಂದರೆ ಅದರ ಮೇಲೆ ಹಾರಿದ ಹಕ್ಕಿಗಳು ಆ ಉರಿಗೆ ಸತ್ತು ಬೀಳುತ್ತಿದ್ದುವು. ಅಲ್ಲಿದ್ದ ನಾಗಗಳ ರಾಜನು ಶ್ರೀಪಾಲನ ಮೇಲೆರಗಿದನು. ಅವನು ನಾಗರಾಜನನ್ನು ಸೋಲಿಸಿದನು. ಆಗ ಆ ಗುಹೆಯ ಒಂದುಕಡೆಯಿಂದ ಒಬ್ಬಳು ದೇವಿ ಬಂದಳು. ಆ ಕಾಮಿನಿಗೆ ಶ್ರೀಪಾಲನೊಡನೆ ಹಿಂದಿನ ಜನ್ಮದ ಜಾತಿಸ್ಮರಣೆಯುಂಟಾಯಿತು. ಹಿಂದಿನ ಜನ್ಮದಲ್ಲಿ ಶ್ರೀಪಾಲನು ಅವಳ ಮಗನಾಗಿದ್ದನು. ಅವಳು ಈಗ ನಾಕಪತಿಗೆ ವಲ್ಲಭೆಯಾಗಿ ಪದ್ಮಾವತಿಯೆಂಬ ಹೆಸರನ್ನು ಪಡೆದಿದ್ದಳು. ಅವಳು, ಕಂದ ನಿನ್ನನು ನೋಡುವಾಸೆ ಯಿಂದ ಬಂದೆ, ಅಶನಿವೇಗ ನಿಮ್ಮಿಬ್ಬರನ್ನೂ ಕೊಲ್ಲಲು ಯೋಚಿಸಿದ್ದಾನೆಂದು ತಿಳಿದು ಅವನಿಗೆ ಇಲ್ಲಿಗೆ ನಿಮ್ಮನ್ನು ಹಾಕುವ ಮನಸ್ಸುಂಟುಮಾಡಿದವಳು ನಾನೆ, ಎಂದು ಅವರಿಬ್ಬ ರನ್ನೂ ಹರಸಿ ಅವಳು ಶಿವಂಕನಗರಿಯ ಉದ್ಯಾನವನಕ್ಕೆ ತಂದುಬಿಟ್ಟಳು.

ಮುಂದೆ ಶ್ರೀಪಾಲನು ವಿಮಲವಾಹನನ ಅನುಮತಿ ಪಡೆದು ತನ್ನ ನಗರಿಗೆ ಹೊರಟನು. ಪದ್ಮಾವತಿಯ ದೇವಾಲಯಕ್ಕೆ ಹೋಗಿ ನಮಸ್ಕರಿಸಿದನು. ಆಗ ಅವಳು ಶ್ರೀಪಾಲನಿಗೆ ದರುಶನತೋರಿ ಹರಸಿದಳು. ಜಯಾವತಿ, ಚಕ್ರರತ್ನ, ನವರತ್ನ ಗಳೊಂದಿಗೆ ಶ್ರೀಪಾಲ ತನ್ನ ರಾಜಧಾನಿಗೆ ಹಿಂದಿರುಗಿದನು. ಕೆಲವು ಕಾಲದನಂತರ ದಿಗ್ವಿಜಯ ಕೈಗೊಂಡು ಈ ಭೂಮಂಡಲದ ರಾಜರನ್ನೆಲ್ಲಾ ಸೋಲಿಸಿ ಚಕ್ರವರ್ತಿ ಎನಿಸಿಕೊಂಡನು. ವೃಷಭಾಚಲದಲ್ಲಿ ತನ್ನ ವಿಜಯವರ್ಣನೆಯನ್ನು ಬರೆಯಿಸಿ ರಾಜಧಾನಿಗೆ ಬಂದು ಸೇರಿದನು. ಒಂದು ದಿನ ಬೆಳಗ್ಗೆ ಎದ್ದು ಕನ್ನಡಿ ನೋಡಿದಾಗ

ಅವನ ಗಲ್ಲದಲ್ಲಿ ನರೆಗೂದಲೊಂದು ಕಂಡಿತು. ಕೂಡಲೆ ಅವನಿಗೆ ವೈರಾಗ್ಯವುಂಟಾಯಿತು. ರಾಜ್ಯವನ್ನು ತನ್ನ ಮತ್ತು ಜಯಾವತಿಯ ಮಗ ಲಕ್ಷ್ಮೀಪಾಲನಿಗೆ ವಹಿಸಿದನು. ಮುಂದೆ ಶ್ರೀಪಾಲ ಸನ್ಯಾಸಿಯಾಗಿ ತಪಸ್ಸು ಮಾಡಿ ಕೇವಲ ಜ್ಞಾನ ಪಡೆದನು. ಕುಬೇರನು ಅವನಿಗಾಗಿ ಗಂಧಕುಟಿಯನ್ನು ನಿರ್ಮಿಸಿದನು. ಅನೇಕ ಕಾಲ ಅಲ್ಲಿದ್ದು ಕಾಯೋತ್ಸರ್ಗದಿಂದ ಮುಕ್ತನಾದನು.

ಕನ್ನಡದಲ್ಲಿ ಮೂವರು ಕವಿಗಳು ಶ್ರೀಪಾಲಚರಿತೆಯನ್ನು ರಚಿಸಿದ್ದಾರೆ. ಮೂರನೆಯ ಮಂಗರಸನಲ್ಲದೆ ವರ್ಧಮಾನ ಮತ್ತು ದೇವರಸರು ಸಾಂಗತ್ಯದಲ್ಲಿಯೇ ಶ್ರೀಪಾಲಚರಿತೆಯನ್ನು ಬರೆದಿದ್ದಾರೆ. ಈ ಇಬ್ಬರು ಕವಿಗಳೂ ಮಂಗರಸನನಂತರ ಬರುತ್ತಾರೆ. ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಅನೇಕ ಶ್ರೀಪಾಲಚರಿತೆಗಳಿವೆಯೆಂದು ತಿಳಿದುಬರುತ್ತದೆ. ಪ್ರಾಯಃ ಈ ಎಲ್ಲಾ ಶ್ರೀಪಾಲಚರಿತೆಗಳಿಗೂ ಮಹಾಪುರಾಣದಲ್ಲಿ ಬರುವ ಶ್ರೀಪಾಲಚರಿತೆಯೇ ಮೂಲವೆಂದು ಕಾಣುತ್ತದೆ. ಮಂಗರಸನೂ ಸಂಸ್ಕೃತ ಮೂಲದಿಂದ ಕಥೆಯನ್ನು ಆರಿಸಿಕೊಂಡಿರುವುದಾಗಿ ಹೇಳಿಕೊಂಡಿದ್ದಾನೆ. ಈ ಎಲ್ಲಾ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದ ಶ್ರೀಪಾಲಚರಿತೆಗಳ ತುಲನಾತ್ಮಕ ಅಧ್ಯಯನ ಒಂದು ಮಹಾನಿಬಂಧವೋ, ಗ್ರಂಥವೋ ಆಗುತ್ತದೆಯೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀಪಾಲಚರಿತೆಯ ಕಥಾವಸ್ತು ಕಲ್ಪಿತವಾದುದು. ಅದರ ಪ್ರಧಾನ ಉದ್ದೇಶ ಜಿನನ ಮಹಿಮೆಯನ್ನು ಎತ್ತಿ ಹಿಡಿಯುವುದು. ಮಂಗರಸ ಕಥಾವಸ್ತುವನ್ನು ಸಂಸ್ಕೃತ ಮೂಲದಿಂದ ಆರಿಸಿಕೊಂಡಿದ್ದೇನೆಂದು ತಾನೇ ಹೇಳಿಕೊಂಡಿರುತ್ತಾನೆ. ಆದುದರಿಂದ ಶ್ರೀಪಾಲಚರಿತೆಯನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ. "ನವರಸಗಳಿಂದ ಕಾವ್ಯ ತುಂಬುವಂತೆ ಮಾಡಿದ್ದರೂ ಸಹ ಶೃಂಗಾರವೇ ಪ್ರಮುಖ ರಸವಾಗಿ ಈ ಕಾವ್ಯದಲ್ಲಿ ಮೆರೆಯುತ್ತದೆ[1]" ಎಂದು ಅಭಿಪ್ರಾಯಪಡಲಾಗಿದೆ. ಆದರೆ ಕವಿ ಶ್ರೀಪಾಲಚರಿತೆಯ ಪ್ರತಿ ಸಂಧಿಯ ಅಂತ್ಯ ಪದ್ಯದಲ್ಲಿ "ಇದು ಶೃಂಗಾರ ಸುಧಾಬ್ಧಿ" ಎಂದು ಹೇಳಿದ್ದಾನೆ. ಆದುದರಿಂದ ಶೃಂಗಾರ ಪ್ರಧಾನವೆನ್ನುವುದರಲ್ಲಿ ಸಂಶಯವೇನೂ ಕಂಡುಬರುವುದಿಲ್ಲ. ಆದರೆ ಈ ಕಲ್ಪಿತ ಕಥೆಯಲ್ಲಿ ಕವಿ ತೋರಿಸಿರುವ ಸ್ವಂತಿಕೆಗಳೇನು ಎಂಬ ದೃಷ್ಟಿಯಿಂದ ಕವಿಯ ಶಕ್ತಿಯನ್ನು ಗುರುತಿಸಬೇಕಾಗುತ್ತದೆ.

ಮಂಗರಸ ಕವಿಯಾಗಿಯೂ ಅರಸನಾಗಿಯೂ ಇದ್ದವನು. ಸಾಮಾನ್ಯವಾಗಿ ಅರಸನಾದವನು ದಂತಗೋಪುರದಲ್ಲಿರುವುದು ವಾಡಿಕೆ. ಆದರೆ ಮಂಗರಸ [illegible] ಹೊಲಗದ್ದೆಗಳನ್ನು ನೋಡಿದ್ದಾನೆ. ಅಲ್ಲಿ ರೈತರು ಮಾಡುವ ವ್ಯವಸಾಯವನ್ನು ಕಂಡಿದ್ದಾನೆ. ಅಷ್ಟಿಗೆ ಮೇಲೆ ನಿಂತು ಕಿವಿಗಳಿಗೆ [illegible] ಕಣ್ಣು [illegible]

1 ಸಮ್ಯಕ್ತ್ವ ಕೌಮುದಿ, ಸಂ. [illegible], ಪುಟ XXXII

ಅಟ್ಟುವ ಗ್ರಾಮ ಸುಂದರಿಯರನ್ನು ಗಮನಿಸಿದ್ದಾನೆ. ಇಷ್ಟಾದರೂ ಮಂಗರಸ ಶೃಂಗಾರ ಸುಧಾಬ್ಧಿಯಲ್ಲಿ ಈಜಿದವನಲ್ಲವೆ? ಆದುದರಿಂದಲೇ ಅಂತಹ ವಿಷಯಗಳನ್ನು ಹೇಳುವಾಗ,

ಮೊಳೆಯಿಡುವಗೆಯ ನೆಡುವ ನೀರೂಡುವ
ಕಳೆಗೀಳ್ವ ಕೊಬ್ಬನಗ್ಗಿಸುವ
ಬೆಳೆಗಾಯಿದು ಪೊಱೆವ ಪಾಮರೀಜನ
ಬಳಸಿಹುದಾವ ಕಾಲದೊಳು

ಇಷ್ಟೇ ಅಲ್ಲದೆ "ಕಳಮೆಯ ಕದಿರ ಮಿಡಿಸಲುಣಲೆಂದಳಿಸಿಹುಗಳು ಕೊನೆಯೇಱೀ" "ತೀವಿದ ಹಾರ್ತ್ರೆ ನೆಗಳ ಕರ್ಚಿ ಪಾಱುತಿರ್ಪ ಗಿಳಿವಱೀ" "ಕಡುಗಿ ಕಡುಗಿ ಬರ್ಪ ಕಾಡ ಮಿಗ" "ಪಿಡಿಗುಂಟಿಟ್ಟು ಕವಣೆಯಾಂತ ಸತಿಯರು" ಇಂತಹ ಜನಪದವಾಗಸ ಪಕ್ಷಿಗಳನ್ನು ಕವಿ ಕಂಡಿದ್ದಾನೆ. ದೇಶವರ್ಣನಾ ಭಾಗಗಳಲ್ಲಿ ಮಂಗರಸ ಅನಿವಾರ್ಯವಾಗಿ ತಾನು ಕಂಡುಂಡುದನ್ನು ತರಬೇಕಾಗಿ ಬಂದುದರಿಂದಲೇ ಅದು ವಾಸ್ತವಾಗಿ ಮೂಡಿ ಬರಲು ಸಾಧ್ಯವಾಗಿದೆ. 'ಅಗೆಯನೆಡುವ' 'ಕಳೆಗೀಳ್ವ' 'ಕಾರ್ಯ'ಗಳನ್ನು ಓದುತ್ತಿದ್ದಂತೆಯೇ ಹೊಲಗಳಲ್ಲಿ ನಾಟಿಹಾಕುವ, ಕಳೆಕೀಳುವ ಜನಪದ ಗೀತೆಗಳನ್ನು ಹಾಡುವ ಗ್ರಾಮ ಮಹಿಳೆಯರ ಚಿತ್ರ ಮೂಡುತ್ತದೆ.

ಮಂಗರಸ ವಿಜಯನಗರದ ಅಭ್ಯುದಯ ಸ್ಥಿತಿಯಲ್ಲಿರುವಾಗ ಬದುಕಿದ್ದ ಅದರ ಆಶ್ರಿತ ರಾಜ. ಅವನು ವಿಜಯನಗರಕ್ಕೆ ಹೋಗಿ ಅಲ್ಲಿನ ಜನದಟ್ಟಣೆ ಮತ್ತು ರಾಜವೈಭವ, ವೀರವಿನೋದದ ರಾಯಭಾರ. ರಾಜಕುಮಾರರುಗಳೊಂದಿಗೆ ತಾನೂ ಚಕ್ರವರ್ತಿಯನ್ನು ಕಂಡಿದ್ದಾನು. ಉದಾಹರಣೆಗೆ.

ಓದುವ ಶಾಲೆ ಗರಡಿವನೆಯನು ಹೊಕ್ಕು
ಸ್ವಾದಿಸಿ ಮಗುಳ್ದರಮನೆಗೆ
ಆದರದಿಂ ಬರ್ಪರಸು ಮಕ್ಕಳನಂ
ದಾ ದೇವಿ ನಡೆನೋಡಿದಳು.

ಅರಸನ ಸಮಯಗಾಣದೆ ನಿಂದ ಪರದೇಶ
ದರಸು ಮಕ್ಕಳು ನಿಯೋಗಿಗಳ
ಕರಿರಥ ತುರಗ ಪದಾತಿಯ ಸಂದಣಿ
ಪಿರಿದೊಪ್ಪಿತಾ ಬಾಗಿಲೊಳು

ದಂಡನಾಯಕರು ದುರ್ಗಾಧಿನಾಥರು ಪದ
ಮಂಡಲೇಶ್ವರರ ಮಂತ್ರಿಗಳ

ಮಂಡಲೀಕರ ರಾಜಾಧಿರಾಜರ ತಂಡ
ತಂಡದ ಕೇರಿಯೊಪ್ಪಿದವು

ಇದರೊಂದಿಗೆ—ಮಡಿವಾಳ, ಮಾಲೆಕಾರ, ಕುಂಬಾರ, ಕಮ್ಮಾರ, ಬಡಗಿ, ಪಟ್ಟೆಗಾರ ಹೀಗೆ ನಾನಾ ಜನಾಂಗದ ಕೇರಿಗಳ ವಿವರವನ್ನು ಕವಿ ಕೊಟ್ಟಿದ್ದಾನೆ. ಈ ಮಾತುಗಳಲ್ಲಿ ಕವಿ ನೋಡಿರಬಹುದಾದ ಒಂದು ಮಹಾ ನಗರದ ವಾಸ್ತವ ಚಿತ್ರಣ ಕಂಡುಬರುತ್ತದೆ.

ವ್ಯಕ್ತಿ ಚಿತ್ರಣದಲ್ಲಿ ಅದರಲ್ಲೂ ಸ್ತ್ರೀಯ ಹೃದಯ ಅರಿಯುವುದರಲ್ಲಿ ಮಂಗರಸ ಸಮರ್ಥನಾಗಿದ್ದ. ಬಹಳ ಕಾಲ ಮಕ್ಕಳಿಲ್ಲದ ಯುವತಿಯೊಬ್ಬಳ ಚಿತ್ರ ಎಷ್ಟು ವಾಸ್ತವವಾಗಿ ಕೊಡುತ್ತಾನೆ.

ಎನ್ನೋರಗೆಯ ಚನ್ನೆಯರೊಲವಿಂ ಮಣಿ
ಗನ್ನಡಿಯಂತಪ್ಪ ಸುತರ
ಮನ್ನಿಸಿ ಮೊಲೆಯೂಡುವ ಸಲೆಸಿರಿಗವ
ರೇಂ ನೋಂಪಿಯ ನಡೆಸಿದರೊ.

ತನಗೆ ನಂದನರಿಲ್ಲದ ಕಾರಣದಿಂ ವನಿತೆ
ಮನದೊಳಗುಮ್ಮಳಿಸಿದಳು

ಎಂಬಂತಹ ಮಾತುಗಳಲ್ಲಿ ಕವಿ ಸ್ತ್ರೀಹೃದಯದ ಅಂತರ್ಯದ ಒಂದು ಸ್ಪಷ್ಟ ಚಿತ್ರವನ್ನು ಕೊಡುತ್ತಾನೆ. ಇದು ಕವಿಯ ಸ್ವಾನುಭವವೂ ಆಗಿರಬೇಕು. ಏಕೆಂದರೆ ಮೂರನೆಯ ಮಂಗರಸನಿಗೆ ಬಹಳ ಕಾಲ ಮಕ್ಕಳಿರದೆ ಅವನ ಜೀವಿತದ ಕೊನೆಗಾಲದಲ್ಲಿ ಜಯರಾಜನೆಂಬ ಮಗ ಜನಿಸಿದನೆಂದು ತಿಳಿದುಬರುತ್ತದೆ. ಅಂದರೆ ಅನುಭವ ಹೇಗೆ ಕಾವ್ಯವಾಗ ಬಲ್ಲುದೆಂಬುದನ್ನು ಇಲ್ಲಿ ಕಾಣಬಹುದು.

ಮಂಗರಸನ ಎರಡು ಪ್ರಿಯ ವಿಷಯಗಳೆಂದರೆ ಶೃಂಗಾರ ಮತ್ತು ವನವಿಹಾರ. ಹೊಲದ ಅಟ್ಟಣೆಗಳಲ್ಲಿ ಹಕ್ಕಿ ಕಾಯುವ ಗ್ರಾಮೀಣಸ್ತ್ರೀಯರು, ಕಾಡಿನಲ್ಲಿ ಬಿದಿರಕ್ಕಿ ತಂದು ಕುಟ್ಟುವ ಬೇಡಯುವತಿಯರು, ಅರಮನೆಯ ಅಂತಃಪುರದ ಸಜ್ಜೆವನೆಗೆ ಬರುವ ರಾಜಕುಮಾರಿಯರು ಈ ಯಾರನ್ನು ಕಂಡರೂ ಕವಿ ಮೈಮರೆಯುತ್ತಾನೆ.

ಗುಂಡಿಟ್ಟ ಸತಿಯರ ಕೈಯ ಕತ್ತುರಿವಳಿ
ವಿಂಡು ಘಳಿರು ಘಳಿರೆನಲು
ತೊಂಡೆವಾಯ ಹಾ ಹೋಯೆನೆ ಪಥಿಕರ ಕಿವಿ
ದುಂಡುಮಣಿಯುವಾ ಸೊಗಸ

ಕಾರಮಿಂಚಿನ ಬೊಂಬೆಯೊ ಅಮರ್ದಿನವರೂ
ವಾರವೊ ತಿಂಗಳಸಿರಿಯೊ
ಮಾರಕೀರ್ತಿ ಕಾಂತೆಯೊಯೆಂವೆನಲಾ
ನಾರಿ ಪಳಚ್ಚನೊಪ್ಪಿದಳು.

ನಗೆ ಮಿನುಗುನ ಮುದ್ದುವೊಗದ ತುಂಬಿದ ಮೈಯ
ಹೊಗರ ನೇಳಿಸ ಕುಂಭಕುಚದ.
ಮಿಗವರಿಗಣ್ಣ ಬಲ್ಮೊಲೆಯ ಬೇಡತಿಯರು
ಬಗೆವಂದರಾ ವಿಪಿನವೊಳು.

ಮುಂಗರಸ ಹೆಣ್ಣಿನ ಸೌಂದರ್ಯವನ್ನು ಎಷ್ಟು ವರ್ಣಿಸಿದರೂ ತಣಿಯದ ಕವಿ. ಇಷ್ಟಾದರೂ ಅವನು ಶ್ಲೀಲದ ಅಂಚನ್ನು ದಾಟುವುದಿಲ್ಲ. ನವ ದಂಪತಿಗಳ ರತಿ ಕ್ರೀಡೆಯನ್ನು ವರ್ಣಿಸುವಾಗ ಸಹ ಕವಿ ಸಂಯಮವನ್ನು ತೋರಿಸಿದ್ದಾನೆ. ಉದಾಹರಣೆಗೆ ಎರಡು ಪದ್ಯಗಳನ್ನು ನೋಡಬಹುದು.

ನಿಱಿದೆಗೆಯಲು ನವಸತಿ ನಿಜರೂಪದೊ
ಳೆಱೆಯನ ಕಣ್ಗೊಪ್ಪಿದಳು
ವಱೆಯಿಂದುರ್ಚಿಪಿಡಿದ ಕಾವನಕೈಯ
ಮಿಱುಗುವ ಕೂರಸಿಯಂತೆ.

ಅನಿತರೊಳು ನಾಣನುಚ್ಚುವ ನೆವದಿಂ
ವನಿತೆ ವಲ್ಲಭನನಪ್ಪಿದಳು
ನನೆಯೇರಿದ ನವಲತೆ ಸುರಭೂಜವ
ನನುರಾಗದಿಂದಪ್ಪುವಂತೆ.

ಶೃಂಗಾರದಲ್ಲಿ ಮುಂಗರಸನಿಗೆ ಎಷ್ಟು ಆಸಕ್ತಿಯೋ ವನವಿಹಾರದಲ್ಲಿಯೂ ಅಷ್ಟೆ. ಕಲ್ಲಹಳ್ಳಿಗೆ ಹತ್ತಿರದಲ್ಲಿಯೇ ಇರುವ ನಾಗರ ಹೊಳೆಯ ಕಾಡಿನಲ್ಲಿ ಈ ಕವಿ ಸಾಕಷ್ಟು ಅಲೆದಾಡಿದನೆಂಬುದರಲ್ಲಿ ಅನುಮಾನವಿಲ್ಲ.

ನರಿ ನಾಯ್ಪಂದಿ ಸಾರಂಗ ಕಡವೆ ಮುಂ
ಗುರಿ ಜೆಕ್ಕ ಕೋಡಗ ಕೂರಂಗಿ
ಸುಂಸುಲ್ಲೆ ಮೊಲ ಝುಲ್ಲಮಿಗ ಮುಸು ತೋಳಗ
ಳಿರಲೊಪ್ಪಿತಾ ಬಲ್ಗಾಡು.

ಇನ್ನು ಹಕ್ಕಿಗಳ ಪಟ್ಟಿಯನ್ನು ನೋಡಿ.

ಹರಡೆ ಹಸುಬ ಮೆಳೆಗೆದಱ ಗೀಜಗ ಗುಬ್ಬಿ
ಪುರುಳಿ ನಿರಗ ನೀರ್ವಾಯ
ಮುರಕೊಟ್ಟ ಜಿಟ್ಟ ಕುಟ್ಟಿಕಸಿಡಿಗಾಱಹೊಂ
ಗುರುವಕ್ಕಿಯೆಸೆದವಂದಲ್ಲಿ.

ಇಂತಹ ಕಾಡನ್ನು ಕಾಡಿನ ಮೃಗ ಪಕ್ಷಿ ಸಮೂಹವನ್ನು ನೋಡುತ್ತಾ ಬರುತ್ತಿದ್ದ ಶ್ರೀಪಾಲನು ಮುಂದಿನ ತರುಕುಂಜನೊಳು ಹೇರಾನೆಯ ತಂಡವನ್ನು ಕಂಡ. ಇಂದಿಗೂ ನಾಗರ ಹೊಳೆಯಲ್ಲಿ ಕಾಣುವ ಆನೆಗಳ ಗುಂಪಿನ ಆಟಗಳನ್ನು ಕವಿ ಸವಿವರವಾಗಿ ನೀಡಿದ್ದಾನೆ. ಗುಂಪಿನ ನಾಯಕ ಸಲಗದ ಬಗೆಗೆ—

ಬಳಸಿದ ಗಂಧ ಶೈಲದ ಮಧ್ಯದೊಳು ಪೊಸ
ತಳೆದಂಜನ ಗಿರಿಯಂತೆ
ಉಳಿದಾನೆಯ ಮಧ್ಯದೊಳಗೊಂದು ಕರಿ
ಕಣ್ಗೊಳಿಸಿದುದತಿ ಪಿರಿದಾಗೆ

ಹೀಗೆ ಮಂಗರಸ ಇಡೀ ಕಾಡಿನ ವರ್ಣನೆಯನ್ನು ಕೊಟ್ಟಿದ್ದಾನೆ.

ಶ್ರೀಪಾಲಚರಿತೆಯು ಮೇಲೆ ಸೂಚಿಸಿದಂತಹ ವರ್ಣನೆಗಳನ್ನುಳಿದು ಮಿಕ್ಕಂತೆ ಅಂತಹ ಮಹತ್ವದ ಕೃತಿಯೆನಿಸುವುದಿಲ್ಲ. ಇದರ ಧಾರ್ಮಿಕ ಪ್ರಕ್ರಿಯೆಗಳನ್ನೇನೂ ಕವಿ ಹೆಚ್ಚಾಗಿ ಹೇಳುವುದಿಲ್ಲ. ಉದಾಹರಣೆಗೆ ಕಾಳಿಂಗಮರ್ದನ, ವಿಷ್ಣು ಮೋಹಿನಿ ರೂಪು ತಾಳಿದ್ದು, ಸಮುದ್ರ ಮಥನದಂತಹ ವೈದಿಕ ಪುರಾಣ ಪ್ರತಿಮೆಗಳನ್ನೂ ಕೊಡುತ್ತಾನೆ. ಕವಿಯೇ ಒಂದು ಪದ್ಯದಲ್ಲಿ

ಎಲ್ಲವರನು ಮೆಚ್ಚಿಸುವರೆ ನಾ ಪೇಳ್ವು
ದಿಲ್ಲ ನಿರ್ವಾಣವಲ್ಲಭಗೆ
ಬಲ್ಲಹನಾದ ಮಹಾತ್ಮನ ಕಥೆಯಿದ
ನುಲ್ಲಸದಿಂ ಕೇಳಿಜನರು

ಎಂದು ಹೇಳಿದ್ದಾನೆ. ಆದುದರಿಂದ ಎಲ್ಲರನ್ನು ಮೆಚ್ಚಿಸುವುದು ಎಂತಹ ಕವಿಯಿಂದಲೂ ಕಷ್ಟಸಾಧ್ಯವೆಂದು ಹೇಳಬಹುದು. ಕಾವ್ಯ ಕುತೂಹಲಿಗಳಿಗೆ, ಶೃಂಗಾರ ಪ್ರಿಯರಿಗೆ, ವನ ವಿಹಾರಿಗಳಿಗೆ, ಜಿನ ಭಕ್ತರಿಗೆ ಶ್ರೀಪಾಲಚರಿತೆ ಮನಸ್ಸಿಗೆ ಉಲ್ಲಾಸವನ್ನು ನೀಡಬಲ್ಲದೆಂಬುದರಲ್ಲಿ ಸಂದೇಹವಿಲ್ಲ.

ಪ್ರಸ್ತುತ ಶ್ರೀಪಾಲಚರಿತೆಯನ್ನು ಐದು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಲಾಗಿದೆ. ಇದರ ಅಚ್ಚಿನ ಪ್ರತಿಯಾದ 'ಕ' ಪ್ರತಿ ಉತ್ತಮವಾದುದಾಗಿದೆ. ಅವುಗಳ ವಿವರ ಹೀಗಿವೆ:

ಕ ಪ್ರತಿ : ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಕೆ. 1495 ನೆಯ ಸಂಬರಿನ ಓಲೆಯ ಪ್ರತಿ. ಇದರಲ್ಲಿ ೧ ರಿಂದ ೭೮ ಓಲೆಯವರೆಗೆ ಶ್ರೀಪಾಲಚರಿತೆ ಕಾವ್ಯವಿದೆ. ಮುಂದೆ ಅಪೂರ್ಣವಾದ ಇದೇ ಕವಿಯ ಪ್ರಭಂಜನಚರಿತೆ ಇದೆ. ಓಲೆಯ ಉದ್ದ-ಅಗಲ 13″ × 2″. ಪ್ರತಿ ಓಲೆಯಲ್ಲಿ ಸರಾಸರಿ 9 ಸಾಲುಗಳು 60 ಅಕ್ಷರಗಳಿವೆ. ಪ್ರತಿ ಶುದ್ಧವಾಗಿದೆ. ಶಕ 1639 (ಅಂದರೆ ಕ್ರಿ. ಶ. 1717)ರಲ್ಲಿ ಹಾಸನದ ಪಾರ್ಶ್ವನಾಥ ದೇವಾಲಯದಲ್ಲಿ ದೊಡ್ಡಹೊನ್ನಶೆಟ್ಟರಿಗೆ ಉಪಾಧ್ಯ ಚಿಕ್ಕಣ್ಣ ಬರೆದುದು.

ಚ ಪ್ರತಿ : ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪತಿ ಭಂಡಾರದಲ್ಲಿರುವ ಕೆ. 576ನೆಯ ಸಂಬರಿನ ಓಲೆಯ ಪ್ರತಿ. ಇದರ ೧ ರಿಂದ ೮೧ರ ವರೆಗಿನ ಓಲೆಗಳಲ್ಲಿ ಕಾವ್ಯವಿದೆ. ಓಲೆಯ ಉದ್ದ-ಅಗಲ 13″ × 1¾″. ಪ್ರತಿ ಓಲೆಯಲ್ಲಿ ಸರಾಸರಿ 7 ಸಾಲುಗಳು 60 ಅಕ್ಷರಗಳೂ ಇವೆ. ಇದೂ ಶಕ 1639ರಲ್ಲಿ ಹೊನ್ನಶೆಟ್ಟರಿಗಾಗಿ ಉಪಾಧ್ಯ ಚಿಕ್ಕಣ್ಣ ಬರೆದುದು.

ಟ ಪ್ರತಿ : ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಕೆ.ಎ. 210ನೇ ಸಂಬರಿನ ಕಾಗದದ ಪ್ರತಿ. ಇದರ 1 ರಿಂದ 205 ಪುಟಗಳಲ್ಲಿ ಕಾವ್ಯವನ್ನು ಬರೆಯಲಾಗಿದೆ. ಹಾಳೆಯ ಉದ್ದಗಲ 7½″ × 12½″. ಪ್ರತಿ ಹಾಳೆಯಲ್ಲಿ.ಸರಾಸರಿ 20 ಸಾಲುಗಳೂ ಪ್ರತಿ ಸಾಲಿನಲ್ಲಿ 15 ಅಕ್ಷರಗಳೂ ಇವೆ. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೬೮೨ನೆಯ ವಿಕ್ರಮನಾಮ ಸಂವತ್ಸರದ ಮಾರ್ಗಶಿರ ಶುದ್ಧ ೧೫ನೇ ಆದಿವಾರ ಯೇಚಿಗನಹಳ್ಳಿ ದೇವರಸಯ್ಯನ ಮಗ ಬೊಮ್ಮರಸಯ್ಯಗೆ ಮುಳಿಯೂರ ದೇವಯ್ಯನ ಮಗನು ಬೊಮ್ಮರಸಯ್ಯ ಶ್ರೀಪಾಲಚರಿತ್ರೆಯನ್ನು ಪ್ರತಿಗನುವಾಗಿ ಬರೆದನು.

ತ ಪ್ರತಿ : ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ 1384 ನೆಯ ಸಂಬರಿನ ಓಲೆಯ ಪ್ರತಿ. ಇದರ 182 ರಿಂದ 232 ನೆಯ ಓಲೆಯವರೆಗೆ ಕಾವ್ಯವನ್ನು ಬರೆಯಲಾಗಿದೆ. ಪ್ರತಿ ಓಲೆಯ ಉದ್ದ-ಅಗಲ 16″ × 1¾.″ ಪ್ರತಿ ಓಲೆಯಲ್ಲಿ ಸರಾಸರಿ 8 ಸಾಲುಗಳೂ 90 ಅಕ್ಷರಗಳೂ ಇವೆ. ಕಾವ್ಯಾಂತ್ಯದಲ್ಲಿ 'ಅಂತು ಸಂಧಿ ೧೭ ಕ್ಕಂ' ಎಂದಿದೆ. ಆದರೆ ಈ ಕಾವ್ಯದಲ್ಲಿರುವುದು 14 ಸಂಧಿಗಳು ಮಾತ್ರ. ಪ್ರತಿ ಮಾಡಿದ ಕಾಲ ಮತ್ತು ವ್ಯಕ್ತಿಯ ಬಗ್ಗೆ ಹೇಳಿಲ್ಲ.

ಗ ಪ್ರತಿ : ಕನ್ನಡ ಅಧ್ಯಯನ ಸಂಸ್ಥೆಯ ಹಸ್ತ ಪ್ರತಿ ಭಂಡಾರದಲ್ಲಿರುವ ಕೆ. ಬಿ. 70 ನೆಯ ಸಂಬರಿನ ಕಾಗದದ ಪ್ರತಿ. ಇದರ 1 ರಿಂದ 134 ನೆಯ ಪುಟದವರೆಗ

ಕಾವ್ಯವನ್ನು ಬರೆಯಲಾಗಿದೆ. ಪ್ರತಿ ಹಾಳೆಯ ಉದ್ದ-ಅಗಲ 6″ × 7¾″ ಪ್ರತಿ ಹಾಳೆಯಲ್ಲಿ ಸರಾಸರಿ 12 ಸಾಲುಗಳೂ ಪ್ರತಿ ಸಾಲಿನಲ್ಲಿ 22 ಅಕ್ಷರಗಳೂ ಇವೆ.

ತಪ್ಪಂ ಬರೆದಾತಂ ಕಡುಜಡ
ನಪ್ಪಂ ಮತಿಹೀನನೆಂದು ಬಯ್ಯಲಿ ಬೇಡ
ತಪ್ಪಿಕ್ಕು ಶುದ್ಧಮಕ್ಕುಂ
ತಪ್ಪಾದೊಡೆ ಪ್ರತಿ ಸಮಾನವಾಗಿಯೇ ಬರೆದೆಂ

ಇದು ಓಲೆಯ ಪ್ರತಿಯಲ್ಲಿದ್ದುದೋ ? ಕಾಗದದ ಪ್ರತಿ ಮಾಡಿದವರು ಬರೆದ ಪದ್ಯವೋ ಹೇಳಲಾಗುವುದಿಲ್ಲ. ಪ್ರತಿಮಾಡಿದ ಕಾಲವನ್ನು ಹೇಳಿಲ್ಲ.

ಈ ಗ್ರಂಥದ ಸಂಪಾದನಾಕಾರ್ಯದಲ್ಲಿ ವಿಶೇಷವಾಗಿ ಪೀಠಿಕೆಯ ವಿಷಯ ಸಂಗ್ರಹಣೆಯಲ್ಲಿ ಮತ್ತು ಅವುಗಳ ಬಗ್ಗೆ ಚರ್ಚಿಸುವಲ್ಲಿ ಅನೇಕರು ಮಹನೀಯರು ನೆರವಾಗಿದ್ದಾರೆ— ಶ್ರೀ ಚತುರಂಗ ಬಸವರಾಜೇ ಅರಸ್, ಶ್ರೀ ಹಂಪ ನಾಗರಾಜಯ್ಯ, ಶ್ರೀ ಜಿ. ಜಿ. ಮಂಜುನಾಥನ್ ಮುಂತಾದವರು. ಇವರಿಗೆಲ್ಲಾ ನನ್ನ ವಂದನೆಗಳು ಸಲ್ಲಬೇಕು.

ಡಿಸೆಂಬರ್ ೨, ೧೯೭೭
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦೦೦೬

ಹ. ಕ. ರಾಜೇಗೌಡ



ಮೂರನೆಯ ಮಂಗರಸ ವಿರಚಿತ

ಶ್ರೀಪಾಲಚರಿತೆ

ಶ್ರೀಪಾಲಚರಿತೆ

ಒಂದನೆಯ ಸಂಧಿ*

ಶ್ರೀಮದಮರಮಣಿಮಕುಟ ರಂಜಿತ ರತ್ನ | ಧಾಮಾಂಬುಧಾರಾ ಧೌತ
ತಾಮರಸಾಂಘ್ರಿಯುಗಲ ವೀರನಾಥನು | ಪ್ರೇಮಸುಖವನೀವುದೆಮಗೆ ೧

ಬಸಪ್ಪಳಿಯುಲ್ಲಾಸ ಸುಡಿ ಸಂಗವಗೆ ಝಲ್ಲಿ | [1]ಯುಸುಗ[1] ಮುಕ್ತಾ[2]ವಳಿವೆಳಗು[2]
ಮಿಸುಗುವ[3]ಛ[3]ತ್ರ ನರೆಯೆಸೆವಭವನಪಾದ | ಬಿಸರುಹಕಾನೆಜಗುವೆನು ೨

ಪ್ರೀ [illegible] ಕೆಳಗುವ[4]ನಾವನಘಟ | [illegible] ಪುಷ್ಪ [illegible]
ಸೊಪ್ಪುಗೆಡಿಸಿ ನಿತ್ಯಸುಖ[5]ಪದವೀವ | [illegible] ಸ್ತ್ವನೊಲಿದವನ ೩

ತಿಳಿವೆಸಿದಂಗಳೊಳಾಗಸವಳುಕಿನ | ಪೊಳೆವ ಪುತ್ಥಳಿಯುರ್ಪಂತೆ
ತೊಳಗುವ [6]ಮುಕುತಿ[6]ವನೆಯೊಳಿರ್ಪ ಸಿದ್ಧರಿ | ಗಳಘು ಭಕ್ತಿಯೊಳೆಜಗುವೆನು ೪

ಆಚರಿಸುತ ಪಂಚಾಚಾರದಿಂ ಸಚ | ರಾಚರದೊಳ್ ಕೀರ್ತಿವಡೆದ
ಆಚಾರ್ಯರ ಚಾರು ಚರಣಯುಗಂಗಳ್ಗೆ | ಚಾಚುವೆನೆನ್ನಳಿಕವನು ೫

ಎಱಗುವೆನಲರ್ಸಕ್ತಿಯೊಲು ಧರ್ಮಕರ್ಮದ | ತೆಱವನೆಲ್ಲವ ಭವ್ಯತತಿಗೆ
ಅಱಿಪಿ ಮುಕುತಿಪಟ್ಟಣನೋಱುವುಪಾಧ್ಯರ | ಮಿಱು[7]ವಂ[7]ಘ್ರಿಸರುಣಾಂಬುಜಕೆ ೬

ನೆಲಸುವಾ[8]ಸುದೇಸಿ[8]ದುಸ್ಪಟ ರತ್ನತ್ರಯ | ಲಲಿತಭೂಷಣ ಪ್ರಾತದೇಪಿ
ಲಲನೆಯೆಸಲು ಭೋಗಿಪ ಸಾಧುಸಮಿತಿಗೆ | ಒಲವ್ವ ಮಿಗಲು ವಂದಿಸುವೆನು ೭

---

1 ಪಸುಗೆ (ಕ) ಅಸುಕೆ (ಚ) 2 ತ್ರ್ಯಳಹಬೀಪಳಗ (ಚತ) ಮುತ್ತಳಿಗಳ್ (ಟ)
3 ಚ (ಕ) 4 ನೆ (ಕ) ಪಿ (ಟ) 5 ಭಾವವ (ಚ) 6 ಮುಕ್ತಿ (ಕ)
7 ಗುಪಂ (ಚ) 8 ಸವೆಸೆ (ಕ)

* ಚತ ಪ್ರತಿಯಲ್ಲಿ ಮಾತ್ರ ಬರುವ ಹೆಚ್ಚಿನ ಪದ್ಯ

ಪೇಳುವೆ ಶ್ರೀ ಪಂಚಗುರುಪಾದಸ್ತು
ಆಲೋಕಾಕಾರವರ್ಣನೆಯ
ಮೇಲೆ ಶ್ರೀಗುಣಪಾಲ ಸಾಮ್ರಾಜ್ಯವಾಳ್ದ
[illegible] ಕಥೆಯ ಪೂರ್ವ ಸಂಧಿ

ಅರಹಂತರಡಿ ಸಿದ್ಧರ ಪದ ಸೂರಿಗ | ಳರುಹಾಂಘ್ರಿಯುಪದೇಶಕರ
ಚರಣಸಾಧುಗಳ ಸಕ್ರಮನೆನ್ನ ಬಗೆವಾ | ಸುರೆಯರ[1]ಲೊ[1]ಳು ನೆಲೆಗೊಳ್ಳಿ ೮

ಮುಪ್ಪೊಡವಿಯೊಳುಳ್ಳ ಕೃತ್ರಿ[2]ಮಾ[2]ಕೃತ್ರಿಮ | ಮುಪ್ಪಮಾಣಿಕ[3]ಬಸದಿ[3]ಗಳ
ಒಪ್ಪುವ ಚೈತ್ಯಬಿಂಬಗಳನೇನ್ಪ್ರೊತ್ತು | ತಪ್ಪದೆಯಭಿವಂದಿಸುವೆನು ೯

ಅವನಿಯೊಳರ್ಹಂತರೂಪಧರಿಸಿ ಮುಕ್ತಿ | ಯುವತಿಗೆ ಬೇಟವ ಮಾಳ್ಪ
ನವಕೋಟಿ ತಪಸಿಗಳಿ[4]ಪ್ಪ[4]ಜ್ಜೆಗೆ | ತವಕದಿಂ[5]ದಾನೆ[5]ರಗುವೆನು ೧೦

ಜಿನಮುಖಕಮಲದೊಳುದಿಸಿ ನಮೋಸ್ತುಗ | ಳೆಸೆದಪ್ಪ ಸುಡಿಯೊಳು [6]ಬೆ[6]ಳೆದು
ಜನನುತೆ ಮುಕ್ತಿಗೆ ಸಹಿಸಾದ ಶಾರದೆಗೆ | ಮನಮುದದಿಂ[7]ವಂದಿಸು[7]ವೆನು ೧೧

ಭದ್ರಪದವಿ ನನಗಕ್ಕೆಂ[8]ದೆರಗಿ ಸು[8] | ಭದ್ರನಿಃಕಲ ಪೂಜ್ಯಪಾದ
ಭದ್ರಬಾಹು ಲಾಕಲಬ್ಧಿ[9] ಗೌತಮ[10]ಗಣ[10]ಧ | ಭದ್ರಾದಿಯ ಮುನಿವರಗೆ ೧೨

ಚಿತ್ತರಡಿಂ ಮುನಿಸುರ ಚರಿತಮ[11]ನೇಕ[11] | [12]ಚಿತ್ತದಿಂ[12]ದನೆ ಮುಂಬರೆದ
ಉತ್ತಮ ಕವಿ ಪರಮೇಷ್ಠ್ಯಾದಿ ಕವಿಗಳ | ಮೊತ್ತಕೆ ಮುನ್ನೆರಗುವೆನು ೧೩

ಪೊನ್ನ ಪಂಪರ ಗುಣವರ್ಮನಗ್ಗಳ ನೇಮಿ | ಜನ್ನ [13]ಮ[13]ಧುರ ನಾಗಚಂದ್ರ
ರನ್ನ [14]ಕನ್ನಪ[14] ಬಂಧುವರ್ಮಾದಿ ಕವಿಗಳ | ಚೆನ್ನಾಗಿಯೆ ಸ್ತುತಿಸುವೆನು ೧೪

ವಿನುತನುಪ್ಪಟ್ಟ ಕುಲಚೂಡಾಮಣಿ | ಘನತರ ಶಾರ್ದೂಲಾಂಕ
ಎನಿಸಿ ರಂಜಿಪ [15]ಹೊಸಮತ್ರಿ[16]ಯ ಪ್ರಭು ನವ | ಮನಸಿಜ ರೂಪಿನಿಭತೇಜ ೧೫

ಸುರಭಿ ಸಮ್ಯಕ್ತ್ವ ರಾಶಿ ಸುರುಚಿರ ಗುಣನಿಧಿ | ಯುರುತರ ಭೋಗಸಂಯುತನು
ಸುರಪುರಕೆಣೆಯೆನಿಸುವ ಕಲ್ಪವಳ್ಳಿಯ | ಗರುವ ವಿಜಯಭೂವರ[16]ನು[16] ೧೬

ಚತುರ ವಿಜಯನಂದನನೊಲಾನೀತ | ಜಾತಸುಜ್ಞಾನ ಕೀರ್ತಿಯುತನು
ಭೂತಳದಲಿ ಜಿನಭಕ್ತ ಮಂಗರಸ[17]ನಾ[17] | ನೋತು ಪೇಳ್ವೆನೀ ಕೃತಿಯ ೧೭

---

1 ದೊ (ಕ) 2 ಮ (ಕ) 3 ವಸ್ತಿ (ಕ) 4 ಪ (ಕ) 5 ಪಾನೆ (ಕ) 6 ಬ (ಕ) 7 ದೆರಗು (ಕ) 8 ದೆರಗಿಸಿರು (ಕ) 9 ಲ್ಧಿ (ಕ) 10 ಗ (ಕ) 11 ನೇಕ (ಕ) 12 ಛತ್ತದ (ಕ) 13 ಮಧು (ಕ) 14 ಕಂಪನ (ಬ) 15 ಹೊಸವೃತ್ತಿ (ಕ) 16 ವ (ಕಖ) 17 ತಾ (ಬಕ)

ತೊಟ್ಟ[1]ದಾಗ[1] ಆತ್ಮನೆಯು ಸುವ ಸುತ್ತ ಚಿತ್ತ | ನಿಲ್ಲದ ದುರ್ಭಾವದೊಳು
ಬಿದ್ದು [illegible] ತು ಸಾನನೆಲ್ಲಾ ಹೊತ್ತ ನೊಳು ತಾ | ನಿಲ್ಲೀಲೆಯಿಂದಿರುತಿಹುದು ೧೮

ಅನಿತಜಾಂಡಾವ ಯೊತ್ತ ನೊಳೀ ಕಪಿತ್ವು | ಮನದಿಂ ಗೆಲ್ಲವಡೆದರ
ನೆನೆಯೆ ಕೃತಾರ್ಥನಾಗುವೆನೆಂದುಸ್ಸೊರೆದನೀ | ಅನುನಯಮಪ್ಪ ಸಂಗತಿಯ ೧೯

ಎಲ್ಲವರನು ಮುಕ್ತಿ ಸುವರೆ ನಾಪೇ[3]ಳು[3] | ದಿಲ್ಲ ನಿರ್ವಾಣವಲ್ಲಭಗೆ
ಒಲ್ಲಹಸಾದ ಮಹಾತ್ಮನ ಕಥೆಯಿದ | ನುಲ್ಲಸದಿಂ ಕೇಳಿ ಜನರು ೨೦

ದಿವ್ಯಾರ್ಚನೆ[4]ಯು[4]ವರೊಳಗೊರ್ವಪಾಂಡ್ಯ | ಭವ್ಯನಭವಗೊಂದು[5]ಲದು[5]
ಅವ್ಯಯ ಸುಖನಬಯಸಿ ಯೊವವೊಲು ಪೂರ್ವ | ಕಾವ್ಯಮಿ[6]ದ[6]ತನೊರೆದೆ ೨೧

ಎಲರೊಲಪಕೆ ನನೆವೊಳೆವೆಳಲತೆ ಮಲ್ಲ | [7]ನೊ[7]ಲೆವಂತೆವೊಲು ಪಳೆಗೊಂಜಿದು
ಅಲು[8]ಗದು[8] ಸಜ್ಜನರಾಲಿಸುವ[9]ದದಿ[9] | ವೊಲಿಯದೀ ಕೃತಿಗೆ ದುರ್ಜನರು ೨೨

ಸುಮುಕುಳ ಮುಂಪಿಂಗಳ ಸವಿಗ[10]ರ್ಗ[10] | ಡೊಸರಿಂದೂಪಲಿದಂತೆ
ರಸಿಕರೆನ್ನಯ ಸತ್ಕೃತಿಯನೆ ಕೇಳ ಸಂ | ತಸವನೆ[11]ದ[11]ಗೆ ತಾರದಿಹರೆ ೨೩

ವಿತತ ಶತೇಂದ್ರ ವಂದಿತ ಮುಕ್ತಿಪಸಿತಾ | ಪತಿಯ ಕೊಂಡಾಡುತಮಿರ್ವಾ
ಕೃತಿಸಾದಿಯೊಳುಸುರುವೆನು ಮೂಲೋಕಾ | ಕೃತಿಯನೆನ್ನ [illegible] ೨೪

ಘಕ್ಕೆಯ ಮೇಲಿರ್ದ ಘಕ್ಕೆಯಮೊಗುಚಿ[12]ತಂ[12] | [illegible] ರೂಪುವಳಿ[13]ದು[13]
ಮೊಕ್ಕ[illegible]ಮಾಗಿರುವನವೊಷ್ಟಿ ಜೀವನತ | ತ್ರಕ್ಕೆಯಾಸ್ಪದಮಾಗಿಹುದು ೨೫

ಅದಜಿತೊಳು ಪಂಡಾಕಾರದ ತ್ರಸನಾಳ | ವಿದಿತಾಸ್ತಿಕಾಯ ಷಡ್ದ್ರವ್ಯ
ಷದಮುಲ ತತ್ತ್ವ ಪದಾರ್ಥಂಗಳು [illegible] | ವೊದ[14]ಲಿಂದ[14] ತುದಿವರಮಿರ[15]ವ್ರ[15] ೨೬

[illegible] ವ್ಯಘೋಲೋಕ | ಘನುತ [illegible]
[illegible] ನೆಲೆಯಂತೆ | [illegible] ೨೭

---

1 [illegible] 2 [illegible] 3 [illegible] 4 [illegible] 5 [illegible]
6 [illegible] 7 [illegible] 8 [illegible] 9 [illegible] 10 [illegible]
11 [illegible] 12 [illegible] 13 [illegible] 14 [illegible] 15 [illegible]

ನಡುವಣ ಲೋಕದ ತಳಿಪ ಪಳಿಸ್ತ ಬಳಿ | ಕಡಲಿರ್ಪ[1]ವಾ[1]ಮಧ್ಯದೊಳು
ಕಡು ಸೊಗಯಿ[2]ಪ್ಪುದು[2]ಮಹಾಲವಣಾಂಬುಧಿ | ಪೊಡವಿ [3]ಪೆ[3]ಗ್ಗ ಹೆಪ್ಪೋಲಂತೆ ೨೮

ತಿರೆತುಳುಗಿದ ತುಂತುರು ಸುಳಿಯೊಟ್ಟುಳಿ | ನೊರೆ ಪಾವಸೆ ಬಳ್ಳಿ [4]ರೆಪ್ಪ[4]
ಭರತಮಿಳಿತದಿಂದಾಸೀರ ಭಂಡಾರಾಪ್ತ | ಸಿರಿದು ರಾಜಿಸಿದೆಸಿತ್ತು ೨೯

ಭರವಶದಿಂದಂದು ಬಲಿಮುಖ[6]ತ[6]ತ್ರ ತ್ರ | ದರಿಸಿದ ಗಿರಿಗಳೆಲ್ಲವನು
ಧರಣೀತಳಕೀಡಾಡುವವೊಲು ಬ | ಲ್ದೆರೆಗಳೊಪ್ಪಿದವಂಬುಧಿಯೊಳು* ೩೦

[7]ತೆ[7]ರೆವೊಯ್ಯ[8]ಲಿಂದುದುವಾರ್[8] ತುಳಸೀಕರಮುಕ್ತಿ | ಪರಸಿಧಿ ತನಗಾಣ ಸಾದ
ವರು[9]ಪಲ[9]ಗ್ಗೆಯಿಂ ಬೀಸುವ ಚಾಮರದಂತೆ | [10]ತ್ತೆ[10]ರೆ ಕಣ್ಗೆ ರಂಜಿಸಿತ್ತು ೩೧

ಪರುಷ[11]ಪೆ[11] ಪಲಿಸ್ತ ನ[12]ದಿ[12]ಸಾವಿರಯುರು ಬಂ | ದಿರದೆ ಕೂಡಲು ತ್ತಾ[13]ಗ್ರ[13]ಸುದಿ
ಸಿರಿದುಸುವ್ರೊಂಪ್ಪ ಮೆಂಪ್ಯನಲಾ[14]ಶರಧಿಗೆ[14] | ಭರತಮಿಳಿತನೊಪ್ಪಿದುದು ೩೨

ಆ ಮುನ್ನೀರ ನಡುವೆ ಜಂಬೂದಿಪಿಯು | ದ್ದಾಮತೆಯಿಂದೊಪ್ಪುತಿಹುದು
ರಾಮಣೀಯಕಾಪೋಪನಪರಿಯ ನಡುವಣ ದ್ವೀ | ಪಾಮುಖವೆಂಬ ಮಾಳ್ಕೆಯೊಳು ೩೩

ಕುಲಭೂಧರ ಕುರುಧರೆ ರಜತಾಚಲ | ವಿಲಸಿತ ಕರ್ಮಕ್ಷೇತ್ರ
ಲಲಿತ ಮಹಾ ನದಿಯುಂ [illegible] ದಿಸಿ ಕ | ಣ್ಗೊಳಿಸಿತು ಕಡು ಸಿರಿದಾಗಿ ೩೪

ಆ ಜಂಬೂದ್ವೀಪದ ಸಿರ್ಮಸಾನದು | ರಾಜೀವಸಂಭವನೊಸೆದು
ಓಜೆಯಿಂದಿಡಟ್ಟೊಪ್ಪದ ರಂಕೆಯ[15]ತ್ತೆ[15]ಪಿ | ಭ್ರಾಜಿಸಿತಲ್ಲಿ ಹೇಮಾದ್ರಿ ೩೫

ವಸುಧಾರಮಣಿಯ ಮುಸ್ತಕದೊಳಗೆ ರಂ | ಜಿಸುವ ಕಿರೀಟದಂತೆ
ಮಿಸುಪ ರತ್ನದ [illegible] | ಮಿಸುನಿ[16]ಯೊ[16]ಪ್ಪಿ ರಾಜಿ[17]ಪ್ಪುದು[17] ೩೬

ಸರುಷದ ಸೆಲೆ [illegible] ರಸದ ಸಿಜಗದ ಕಲ್ಪ | ತರುವಿನಾರಣ್ಯದಿಂದೊಪ್ಪುತ
ಸರಸೀಜಾಕರ ಸುರಭಿಯು ಸಿಂಧಿನ ಮೃಗ | ದಿರವೊಪ್ಪ [illegible] ೩೭

---

1 ವದ (ಶ) 2 [illegible] (ಶ) 3 [illegible] 4 [illegible] 5 [illegible] 6 [illegible]
* ಈ ಪದ್ಯ [illegible] 7 [illegible] 8 [illegible] 9 [illegible]
10 [illegible] 11 [illegible] 12 [illegible] 13 [illegible]
14 [illegible] 15 [illegible] 16 [illegible] 17 [illegible]

ಬಿಚ್ಚಾಧರ[1]ರಿಂ[1]ದನೆ ಸಿದ್ಧ ಬಿಂಬದ | ಸಜ್ಜೆಗಳಿಂ ಭವಹರರ
ಮುಖ್ಯಸ ಸೀತಗಳಿಂದಾ [2]ಹೇ[2]ಮಾದ್ರಿ | ಪಜ್ಜಳಿಸಿತು ಶೋಭೆಯಿಂದ ೩೮

ಆ ಗಿರಿಯೆಂಬ ದೇವನ ಪಜ್ಜೆಯಂ ತೆರ | ಹಾಗಿ ತಾ ನಡುವಿಂದ
ಭಾಗವಡೆದು ಪೂರ್ವ ವಿದೇಹಮಿಹುದಾ | ಶ್ರೀಗೆ ನಿವಾಸವೆಂದೆನಿಸಿ ೩೯

ಅದಱೊಂದಕ್ಕೆಂಟೆಂಟು ದೇಶವು | ಸದಮಲವಾಗಿರಲದಱ
ತುದಿಯೊಳೆಸೆವ ಪುಷ್ಕಳಾವತಿವಿಷಯ ಸು | ವಿದಿತವಾಗಿಯೆ ಶೋಭಿಪುದು ೪೦

ಆ ವಿಷಯದ ನಡುವಣ ವಿಜಯಾರ್ಧ ನು | ಕೇವಲ್ಲಭೆಯಾಸ್ಯದಂತೆ
ಭಾವನಡೆದು ವಿದ್ಯಾಧರ ಜನ[3]ಗಳ[3] | [4]ಗಾ[4]ವಾಸವಾಗಿರುತಿಹುದು ೪೧

ಆ ರಜತಾಚಲವೆಂಬ ಪೆಸ್ತುಂಬಿಯು | ಚಾರುಚರಣವೆಂಬಂತೆ
ಆರಯ್ಯಲಾಱು[5] ಖಾಂಡಗಳಿಂದಾಭೂಮಿ | [6]ಸಾರ[6]ತೆಯಿಂ ಪೊಪ್ಪುತಿಹುದು ೪೨

[7]ಆ[7]ವಱ ದಕ್ಷಿಣ ಭಾಗದೊಳಾರ್ಯಖಾಂಡ | ಸುವಿದಿತವಾಗಿರುತಿಹುದು
ದಿವಿಜಲೋಕದ ಸುಭಗತೆ ಬಿಂಬಿಸಿ ತೋರ್ಪ | ನವಮುಕುರದ ಮಾಳ್ಕೆಯೊಳು ೪೩

ಸುತ್ತಿಪ್ಪ ಪತ್ತಾಱು ನಾಡನಡುವೆ ಸಂ | ಪತ್ತಿಗೆ ತವಗೊಡಲಾಗಿ
ಉತ್ತಮ [8]ವಿಷಯವೆನಿಸ[8] ಭೂಷಣದಿಂದು | ಕೆತ್ತುವಿ ಬಿಟ್ಟಂತಿಹುದು ೪೪

ಸೆತ್ತು ಮಿನಸಕ್ಕೊಸ್ಸೆ ಮಳೆಕೊಳುತಿಹುದಲ್ಲಿ[9] | ಬಿತ್ತಿದ ಬೀಜ ಹುಸಿಯದು
ಬಿತ್ತಿಟ್ಟ ಸಸ್ಯದವೊಲು ಸಗ[10]ರ[10] ಬಾಯು | ತುತ್ತಾಗಿಯೇ ಫಲಿಸುವವು ೪೫

ಕೞಸವ ತ್ಮೆಸುಗಳಲ್ಲದೆ ಬಂ[11]ಜೆ[12]ಮೃ[12]ಸಿಲ್ಲ | [13]ವ[13]ಜನಸಲ್ಲದೆ ಪಾಪಮಿಲ್ಲ
ಮಱ ತೆರ[14]ದು[14]ವಾತಾಪಡಿಯಸ್ಸಲು | ಕೞಸಯೆಂಬುದಾಸಾದೊಳಿಲ್ಲ ೪೬

ಸೊಳೆವೆಣ್ಣ ನಳಿತೋಳ ಸೆಸುವ ಕಾಲುವೆ | ಗಳೊಳೊಪ್ಪದಿ ಬೆಳೆದಿರ್ದ
ಕಬ್ಬಿನ ಕರ್ವಡಕೆಲೆ ಬಾಳೆ ತೆಂಗು ಕಂ | ಗೊ[15]ಳಿಸಿದ[15]ವಾವೇಶದೊಳು ೪೭

---

1 ರಿಂ (ಟ) 2 ಹ (ಟ) 3 ಮಾ (ಟ) 4 ಪದ (ಜ) 5 ಆ (ಜ) 6 ಖಂ (ಕ) 7 ಹ (ಟ) 8 ಪ (ಕ) 9 ವೆಂಬ ವಿಷಯ (ಜ) 10 ಕೊಂಡು ಮಳೆ ಕೊಳ್ಳು ಮಾಳೆಯೊಳು (ಜ) 11 ಳ (ಕ) 12 ಪಾಯ (ಜ) 13 ಪ (ಕ) 14 ಬೀಡು (ಕ) 15 ಳಸುವವು (ಟಕ)

ವಸುಧಾರಮಣಿ ವಿಲಾಸದಿ ಕೈಗೆಯ್ದು । ಪಸುರ್ವಾಸದನನೆಂಬಂತೆ
ಮುಸುಕಿ ಬೆಳೆದ [illegible]ಳೆಗೆ[1]ಯ್ದು[1]ನತ್ತತ್ತ [illegible] । ಬಿಸುತಿಹವಾ ದೇಶದೊಳು* ೪೮

ನೊಳೆಯಿಡುವಗೆಯ ನೆಡುವ ನೀರೂಡುವ । ಕಳೆಗೀಳ್ವ ಕೊಬ್ಬಿನಗಿ ಸುಗ
ಬೆಳೆ[2]ಗಾಯಿದು ಪ್ರೋಜಿಸವ[2] ಪಾಮರೀಜನ । ಬಳಸಿಹುದಾವ ಕಾಲದೊಳು ೪೯

ಕಳಮೆಯ ಕದಿರ ವಿಲಾಸಲ [3]ಕಂ[3]ಪನು[4][illegible] । ದಳಿ [illegible] ಕೊಸೆಯುತ್ತೀ
ಪ್ರೋಕ್ಷಿದವ್ರ ಪ್ರೂಗಣಿಯುನ ಪಸುರ್ಗಾವಿನ । ತೊಳಗಿ ಸೀಲದ [5]ನಿಂಟಿ[5][illegible]ತೆ. ೫೦

ತೀವಿದ ಪಾಲ್ದೆನೆಗಳ ಕಚಿರ ಪಾಜುತಿರ್ಪ । [illegible]ವಣಿ ಗಿಳಿ[6]ಗಳೊಪ್ಪಿದವ್ರ
ದಾವಣಿ ಝುಲ್ಲಿವ್ರೂ ಗಟ್ಟಿ ವಿರಾಜಿಪ । ಕಾವನ ಕಾರ್ಮುಕದಂತೆ ೫೧

ಗುಂಡಿಟ್ಟ ಸತಿಯರ ಕೈಯ ಕತ್ತುರವಳೆ । ವಿಂಡು ಘಳಿರು ಘಳಿರೆನಲು
ಕೊಂಡೆನಾಯಿ ಹೋಹೋಯೆನೆ ಪಥಿಕರ ಕಿವಿ । ಯುಂಡುವಗೆಯುವಾ ಸೊಗಸ ೫೨

ಪಿಡಿಗುಂಡಿಟ್ಟ ಕವಣೆಯಾಂತ ಸತಿಯರ । [illegible]ದುತೋರ್ಕ ಳೆಸೆದವಾ ಕಂತು
ಕಡುಮುಳಿಸಿಂ ಪಾಂಥರೆಡೆಗೊಂಟಿಯ ಮುತ್ತಿ । ಇಡುವ ಡೆಂಕಣಿ ಕೈಗಳಂತೆ ೫೩

ಸಳಿತೋರ್ಕೆತ್ತಿ ಸೋರ್ವುತ ನೋಡೆ ಕಡೆಗಣ್ಣ । ಬೆಳಗು [7][illegible][7]ಯೆ ಹಾಜುತೋರ್ಕ
ಗಿಳಿಯ ಸಳೆಯಲೆಂದು ಪಾಮರಿ ಪಳುಕಿನ । ಕಳೆಯಿತ್ತಿ ಪಿಡಿದಂತಾಯ್ತು ೫೪

ಕಡುಗಿ ಕಡುಗಿ [illegible] ಕಾಡಮಿಗದ ಹುಯ್ಯೊ । ಪಿಡಿದು ಕಳೆಯೆ ಬೆಳೆಗಾ[8]ಯ್ದು[8]
ಕಡು [illegible]ಯುರು ಕೆಗ್ಗೆ [illegible]ದರು ಕಾವನ । [9][illegible][9][illegible]ಯುರೆಂಬಂತೆ ೫೫

ತೊಡವೆಗಳಚ್ಚ[10]ರಿಯಂ [illegible][10]ನೊಳಗು [illegible] । [illegible]ಬಂಚೆಸಿ [illegible]
ಪಡಿಯಾದ ಘನಕುಚೆಯರು ಹಸ್ತದಿಂ [illegible] । ನೋಡುವರ[11]ಧ್ವ[illegible]ಜಾತಕಕೆ[11] ೫೬

[illegible] ಲತಾಂಗಿಯರುಗಳುಂಬುವ [illegible] । ಕರತಳದೊಳು [12][illegible][12]ಡಿದಿರ್ದ
ಕರಗದೊಪ್ಪಿತು ತಮ್ಮ [illegible]ಸೂ[13]ಕ್ಷ್ಮ ಕೈ[13]ಗಾ । ಸ್ಥಿರವಿಟ್ಟ
[14]ಘುಟಿಕೆ[14]ಯಂದದೊಳು ೫೭

---

1 [illegible] (ಕ) * ಈ ಪದ್ಯ [illegible] ಪ್ರತಿಯಲ್ಲಿಲ್ಲ. 2 [illegible] (ಕ) 3 [illegible] (ಕ) 4 [illegible] (ಚ) 5 [illegible] (ಚ) 6 [illegible] (ಕ) 7 [illegible] (ಚ ಟ) 8 [illegible] (ಚ) 9 [illegible] (ಕ) 10 ರ [illegible] (ಚ) [illegible] (ಚ) 11 [illegible]ತಕಕೆ (ಚ) 12 [illegible] (ಕ) 13 ಕೈಗೈ (ಕ) 14 [illegible]

ತೋಳಕೆತ್ತಿ ತೋಳ ಮೊದಲ ತುಱುಗೆವೆಯೆತ್ತಿ | ಲೋಲದೃಷ್ಟಿಯು ಮೇಲುದೆತ್ತಿ
ಸೂಕ್ಷ್ಮಲಕುಚದ ತೋಱುವಂತೆಱಿದರು ನೀರ | ಜಾಲಕಿಸುದು ಬಟ್ಟೆಗಳಿಗೆ ೫೮

ಸಿಸಿರೇಱದ ತನ್ನಂಗದ ರೂಪು ಮಾ | ಣ್ಣೊಳೆದುದೊರ್ವನ ಹಸ್ತದೊಂದು
ಕೊಳಪ ಕಾಮುರಿಸಿನೆಯೊಳು ಕೃಷ್ಣದೇವರ | ಲಲನೆ ಮಹಾಲಕ್ಷ್ಮಿಯಂತೆ ೫೯

ಕಡಿದಱುದುರಿಯೊಗಿಕ್ಕುವ[1]ನೆ[1]ಮ್ಮ ಸಿರಿ ಪಾಪಿ | ಗುಡಿಯುರೆಂದಿಕ್ಕಿ ಧನ್ಯಗಳು
ಒಡೆಯ[2]ಗೆ[2] ಕೊಡುವ ಹುಯ್ಯಲ[3]ದಸ[3]ಗೂಗೆನೆ ಸರ |
ಗೊಡುವಿಕ್ಷುಯಂತ್ರವೊಪ್ಪಿದುದು ೬೦

ತುಂಬಿದ ಖೇಡ ಖರ್ವಡ[4]ಮಾ[4]ಗ್ರಾಮ ಸ | ಡಂಬ [5]ಸಂವಾಹನ[5] ನಗರ
ಇಂಬಿಂ ದ್ರೋಣಾಮುಖ ಪಟ್ಟಣಗಳೊ | ತ್ತಂಬದಿ ತೀವಿಹವಲ್ಲಿ ೬೧

ಮಂಡಲಕ[6]ತಿ[6] ಮಂಡ[7]ನಮಾಗಿ[7] ಮತ್ತಾ | ಖಂಡಳಪುರಕೆಣೆಯೆನಿಸಿ
ಪುಂಡರೀಕಿಣಿನೆಸರ್ವದೇವಾನಗರಿಯ | ಖಂಡಿತೈಶ್ವರ್ಯನೆತ್ತಿಹುದು ೬೨

ಆ ಜನಪದಮಾಗಸಪಳ್ಳಿಗಳುಡು ರಾಜಿ | ರಾಜಿ[8]ಪರಂಜಿ[8]ಪ ರಾಜಧಾನಿ
ರಾಜಬಿಂಬವ ಬಳಸಿದ ವನಮೆಸೆದುದು | ರಂಜಿಪ ಪರಿವೇಷದಂತೆ ೬೩

ಕಂದರ್ಪ ರತಿದೇವಿಯರ ಶಯ್ಯಾಗೃಹ | ಬಂದ ಬಸಂತನ ಬೀಡು
ಮಂದಮಾರುತನ ತಳ್ಳಾಱುಕೆಯೂರ್ಗಳಿಂ | ಬಂದದೊಳಾ ವನವಿಹುದು ೬೪

ಕಂಜಲ್ಲವಹುರಿ ಮುಳ[9]ಲಿಂ[9]ದೆಸಕ್ಕ | ಹೊಂಜಬಳದ ಫಣಿತತಿಯಿಂ
ಕಂಜಾಸ್ತ್ರನ ವನ ದುರ್ಗದಂತಾಯ್ತು ಪ | ರಂಜಿಗೇದಗೆಯ ಬಲ್ವೇಲಿ ೬೫

ಅರೆಯೆಡೆಯೊಳಗೊಲವಿಂ ರತಿಮಾಡುತಿ | ಪ್ಪರ[10]ರ[10]ಯೆಡೆಯೊಳು ಪೂಗೊಯ್ಯು
ಅರೆಯೆಡೆಯೊಳು ಗೊ[11]ಷ್ಠಿಯಪ್ಪ[11]ವಿಟರಿ | ಟಿರಲೊಪ್ಪಿತಾ ಬಹಿರ್ವನವು ೬೬

ಕಾಮ ತೋಪುರ ಜನಿಕಾಗ್ನಿಯನಲ್ಲಿ | ನಂದಿಪೆನೆಂದತಿ ಭರದಿಂ
ಬಂದ ಪಿಯೋಗಿ ಜನದ ಬಲ್ಪಂದಣೆ | ಯಿಂದೊಪ್ಪಿತಾ ಬಹಿರ್ವನ[12]ವು ೬೭

---

1 ನೆ (ಕ) 2 ಯಿಂಗೆ (ಚ) 3 ನಾನಾ (ಕ) 4 ಪೂ (ಚಿತ) 5 ಸಂವಾಹನ (ಚ) 6 ಠ (ಚ) 7 ಜನಾ (ಚ) 8 ಪ (ಕ) 9 ಯ (ಚ) 10 ರಿ (ಕ) 11 ಷ್ಠಿಯಾಪ (ಕ) 12 ವ್ವ (ಕ)

ಅ ವನ[1]ವೆಂ[1]ದೆಂಬ ಪಸುರ್ವಣಿಗೆಗಿಲನೆ | ತೀವಿ ಒಳಸಿ ಪಜ್ಜಳ[2]ಪ[2]
ಭೂವಲ್ಲಭೆಯ ಕೊರಲ ದೇವರ ಪೊನ್ನ | ಭಾವ ಪಡೆದುದಾನಗರಿ ೮

ತುರಗವ[3]ನ್ನೆಹಾ[3]ಳಿ ಕರಿಗಳಂಕದ ಕೆಳ | ಗರುಡಿಂಪು ನೆಲೆ ಜಟ್ಟಿಗ
ಸಿರಿಯುಕ್ಕಡವಾ ಹೊಳಲ[4]ಬಾಹಿಯೊಳು[4]ಬಂ | ಧುರವಾಗಿಯೆ ತೀವಿಹ[5]ವು[5] ೯

ಹರಿವಿರಂಚಿಗಳು ತಂತಮ್ಮ [6]ಪೆಂಪೆ[6]ಗೆ ಸೊಲ | [7]ಹ[7]ರನಡಿವುದಿ ಗಾಣಲೆಂದು
ಇರುವಟ್ಟ ಬಟ್ಟೆಗಳೆನಲಿಹನಾವುರ | ಕುರು ಖಾತಿ ಪ್ರಾಕಾರ ೧೦

ಬಿಗಿದ ಬಜ್ಜರ ಮುಂಡಿಗೆ ನಾಡೆಯುಮ[8]ಳ[8]ದಿ | ನಗೆದು[9]ಟ[9]ಯೆನೆ ಬಾಗಿಲುಗಳು
ನಗರಿಯೆನಿಪ ಸರಸಿಜ ಸಂಭವನ ಸಾ | ಲ್ಕೊಗದ ಬಾಯ್ದೆರೆಯುವ್ರೊಲಿ[10]ಹುದು[10] ೧೧

ಅಟ್ಟಲೆ[11]ಯು[11]ಜು ಕಣ್ಣುಚ್ಚಲೆಯೊಳು ತಮ್ಮ | ಮುಟ್ಟುವರೆಂದು ಮುಂಮಿಗಿಲಾಗಿ
ನಟ್ಟನಡುವೆ[12]ಯೊ[12]ಲೆದಾಡುತಿರ್ಪಗಸ | ವಟ್ಟವೆಣ್ಣಳ ತಂಡಮಿಹುದು ೧೨

ಅರಸ ಪರೆದೆಗೊಳನನು ಕಲಕುವ ಭೂ | ವರನ[13]ಸ್ತ[13]ಮದವೆಂಬ ಗಜದ
ಭರಿಕ್ಕೆಗಳೆಂದೆನಲೆಣ್ದೆಸೆಂತಿರ್ಗಾ | ಪುರದ ಗೆಂಕಣಿ ಕ್ಯೆಗಳಿಹ[14]ವು[14] ೧೩

ಮಣಿಯ [15]ಮು[15]ಸ್ತಕ ಮಣಿಮುಕುಟವೊ ನಿ | ಶ್ರೇಣಿಯೊಲಿಪವರ್ಗ ಪ[16]ಥ[16]ದ
ಪ್ರಾಣದ ಮಾಮೂಲಗಿರಿಯೆನಲಲ್ಲಿ | ಮಾಣಿಕ ಜಿನಗೃಹಮಿ[17]ಹುದು[17] ೧೪

ಮುಗುಳಿಲ್ಲವಾ ರತ್ನ ದೇವಿಯುರಾಡುವ | ನಗರ ಜನದ ಸಾರಿಯಿರ್ಪ
ಪಗಡೆಸಾಸಿಂಪನೆ ರಸಿ [18]ಸೌ[18]ಮುವೀಥಿಗ | ಳೊಪ್ಪಗಿಹವಾ ನಗರಿಯೊಳು ೧೫

ಮಂಡನಾಯಕರು ಮಾರ್ಗಧಿನಾಥರು ಕುಲ | ಮಂಡಲೇಶ್ವರರ ಮಂತ್ರಿಗಳ
ಮಂಡಲೀಕರ ರಾಜಾಧಿರಾಜರ ತಂಡ | ತಂಡದ ಕೇರಿಯೊಪ್ಪಿದವು ೧೬

[19]ಮು[19]ಡಿವಾಳ ಮಾಲೆಗ್ರಾರ ಕುಂಬಾರ ಕಂಚು | [20]ಪ[20]ಡಿಗ ಕಮ್ಮಾರವಟ್ಟಿಗಾಣ
ತ[21]ವಿ[21]ಮು[22]ಪ್ಪೆಕ್ಕರ ಚಮ್ಮಾರ ಮುತ್ತರ ಕೇರಿಗ | [22]ಳೆಡೆವಿಡದೊಪ್ಪಿದವಲ್ಲಿ[22]ಂ ೧೭

---

1 [illegible] ([illegible]) 2 ಹುಪ ([illegible]) 3 [illegible] ([illegible]) 3 [illegible] ([illegible]) 4 ರು ([illegible]) [illegible] ([illegible]) 5 [illegible] ([illegible]) 6 [illegible] ([illegible]) 7 [illegible] ([illegible]) 8 [illegible] ([illegible]) 9 [illegible] ([illegible]) 10 ವೆ: ([illegible]) 11 ಯು ([illegible]) 12 [illegible] ([illegible]) 13 ರು ([illegible]) 14 ಪು ([illegible]) 15 ದ ([illegible]) 16 ಸಥ ([illegible]) 17 [illegible] ([illegible]) 18 ಮು ([illegible]) 19 ಡ ([illegible]) 20 ಡ ([illegible]) 21 [illegible] ([illegible]) 22 [illegible] ([illegible])

ಅಲರ್ವಿಲ್ಲಿನೆಂಬ ಹರಿಯ ಹೂವಿನ ಚಕ್ರ | ಬಲದಂದವೆ ಸುಖವಹೆದು
ಗೆಲವಾಳಗೋಪ ಸ್ತ್ರೀ ರಾಜ್ಯವೊಂದೆನೆ | ಚೆಲೆವೆಣ್ಣ ಕೇರಿಯೊಪ್ಪಿದವು ೩೮

ಪರಿಮಳದರ ಪಟ್ಟಗಾಜರ ತಾಂಬೂಲಿ | ಗರ ಶಿಲ್ಪಿಗರ ಗಂಧಿಗರ
ಅರಲ್ಮಡಿಗರ ನವ ಮಣಿಹಗಾಜರ ಹೊಸ್ತ | ಹರವರಂಗಡಿಯಿರ್ದವಲ್ಲಿ ೩೯

ಸ್ಮರ ಶರಣೆಂದೆಂಬ ಪಂಚಾಕ್ಷರಗಳ | ನಿರಸೋದುತಕ್ಷ ಮಾಲೆಯನು
ವರಿಸಿದರೆನೆ ಬಿರಿಮುಗುಳಮಾಲೆಯನೆತ್ತಿ | ತರುಣೀಜನ ಮಾರುತಿಹರು ೪೦

ಕಡಲಿಗೆಯೊಳು ಸಂಪಗೆಯೊಳ್ಳಲರ್ಗಳ | ಹಿಡಿದು ಮಾಜುವ ಕೋಮಲೆಯರು
ಪ್ರೊಡೆಯುರಲಸ ಕುವರಗೆ ನೀರಾಂಜನವ | [1]ಹಿಡಿದಿತ್ತುವ ತೆಜನಾಂಪು ೪೧

[2]ಯುಗಂಪ್ರ ಸುಯ್ಯಂ[3]ಗೆಡೆಯಾಡುವಳಿವಜ | ಸಿರಿಯೊಪ್ಪಿದುವು ಗಂಧ[8]ವಾ
ತ[4]ರು[4]ಣಿಯರಾಸ್ಯಾಬ್ಜ ಲಕ್ಷ್ಮಿಯ ನೀಲದ ಚೆಂಡ | ನಿರವೆ ಹೊಡೆವ ತೆಜನಾಗಿ ೪೨

ಕರುಮಾಡದ ಮೇಗಣ ಮಣಿ[5]ಗುರುಜೇಜು | ಪರಿವ ಮೇಲಣ ಮುಗಿಲೊನೆಯ
ಪ್ರೋ[6] ಮುತ್ತಾ[6]ಯ್ಯು[6] ಕೇವಣಿಸಿ ಕೊರಳಲ್ಲಿಟ್ಟು | ಪುರವನಿತೆಯರಾಡುತಿಹರು ೪೩

ಬಿಡುವೆಣ್ಣಳ ಬೆಲೆವೆಣ್ಣಳ ಬೆಸವೆಣ್ಣ | ಳೆಡೆಯಾಡುವ ಪುರಜನದ
ತೊಡ ತೊಡ[7]ವೊತ್ತಿ[8]ಸುವ ರಜ ಕಾಮಾಗ್ನಿಯ | ಕಿಡಿಯೇಳುವಂತೇಳ್ಪುದಲ್ಲಿ ೪೪

ತುಂಬಿದ ಹೇಮ ರಜತ ಹರ್ಮ್ಯಗೋತ್ರಾದಿ | ತುಂಬಿದ ಪುರವರಮಿರ್ದ
ಜಾಬೂದ್ವೀಪದೊಳಗೆ ರಾಜಗೃಹವಲ್ಲಿ | ಪೊಂಬೆಟ್ಟಿನಂತೆ [9]ರಾಜಿಪುದು ೪೫

ಕರಮೆಸೆವಾ ಪುರಸುದತಿಯ ಬೈತಲೆ | ಇರವಾದ ರಾಜ ವೀಧಿಯೊಳು
ಪರಿಪಿದ ಪೂವಲಿಸರ ಮುತ್ತಾಗ[10] | ದರಮನೆ ರನ್ನ[11]ದೊಪ್ಪಿತ್ತಾಯ್ತು ೪೬

ಅರಸನ ಸಮಯ ನಾನಾದೆ ಸಿಂದ ಪರದೇಶ | ದರಸು ಮಕ್ಕಳು ಸಿಯೋಗಿಗಳ
ಕರಿ ರಥ ತುರಗ ಪದಾತಿಯ ಸಂದಣಿ | ಸಿರಿಯೊಪ್ಪಿತಾ ಬಾಗಿಲೊಳು ೪೭

---

1 ಪ (ಜ) 2 ಯುಗಂಪ್ರ (ಚ) 3 ದಾ (ಕ) 4 ರ (ಚ) 5 ಗದೊಂದ (ಜ) 6 ಮ (ಜ)
7 ಠ (ಕ) 8 ತ (ಟ) 9 ರಂ (ಕ) 10 ಳ (ಜ) 11 ದೊ (ಜ)

ಪೊಂಗೆಯಿಸ [1]ರಾಜಾಲಕ್ಷ್ಮಿಯ[1] ಮೇಳಸಿದು | ಕೊಗೆದ ಬಣ್ಣದ ಬಾಗಿಲ
ಬಗೆಂಪಿಸೆ ಪೆಂಪ್ ರತ್ನದ ಗೋಪುರ ಘನ | ದಗಿ[2]ದು[2]ದಾ ಜಾಗಿಯೊಳು ೧೮

ನಾರದಿ ಶಾಲೆ ಮಜ್ಜನ ಗೇಹ ಭಂಡಾ | ಗಾರ [3]ಬಂ[3]ಧುರ ಶಸ್ತ್ರ ಸದನ
ನಾರೀಜನ [4]ಗೃ[4]ಹ ನರ್ತನ ಭವನದಿಂ | ದಾ ರಾಜಸದನವೊಪ್ಪಿದುದು ೧೯

ಸಾರ ಸುಗಂಧದ ಸೊಂಪೆಯಿಂ [5]ಸಾ[5]ವಿಸ | ಸಾರಣೆಯಿಂ ಕುಂಕುಮದ
ಶಾರಣೆಯಿಂ ಕಂಪಿನ ಕರಡಗೆಯಿಂತೆ | ಚಾರು ಗೃಹಂಗಳೊಪ್ಪಿದವು ೨೦

ಆ ರಾಜಗೃಹ ಸದಂತೋಳಂತಃಪುರದೊಳು | ನಾರೀಜನದ ಮಧ್ಯದೊಳು
ಭೂರಮೆಗಧಿಪನೆನಿಪನು ಗುಣಪಾಲನೆಂ | ಬಾರಾಮನ[7]ಲ[7]ಯದೊಳು ೨೧

ಸಿರಿಯುರದೊಳು ಜಯಸತಿ ಧ್ವಜದೊಳು ಕೀರ್ತಿ | [illegible] ಬಾಹುವಿನೊಳು
ಸರವಾಣಿಯೊಳ್ನುಡಿಯೊಳು ನೆಲೆ[8]ಸಿ[8]ದುವಜೀಂ | ದರಸನ್ನೆ[9]ಲಿ[9]ಗಾಣ್ಬನಾದ ೨೨

ಪರನಾರೀಸಹೋದರನೆಂಬ ಬಿರು[9]ದಾಂ[9] | ತರಿರಾಯರ ತೋಳ್ಕೊಳಸ
ಧರಣೆ ಸತಿಯನಾಳ್ವದು ಚಿತ್ರ[10]ವೆಂದ[10] | ಕ್ಷೋಣಿಗರು ಪೊಗಳ್ವ[11]ರಂದವನು[11] ೨೩

ಧರೆಯರಸರ ಮುಕುಟದ ಮಣಿಯಿಂ ಪಿಂ | ಗರ ಮಾಡಿದನು ತನ್ನ ನುಡಿಯ
ಉರುತರದುಷ್ಟ ವಿಕ್ರಮದಿಂದನೆ ಭೂ | ವರ ಕುಲಮಣಿ ಭೂಷಣನು ೨೪

ಇದು ಭಾವಕ ಜನಕರ್ಣ ವಿಭೂಷಣ | ಮಿದು ರಸಿಕರ ಚಿತ್ತ ಹರಕ
ಇದು ನಾನೇನೆನುತಿ ಮನೋಹರ ಮುಕುರದು | ತ್ರಿದು ಶೃಂಗಾರ ಸುಧಾಬ್ಧಿ ೨೫

1 ರಾಜಾಲಯ (ಪಿಶ) 2 ಮಿಂದು (ಶ) 3 ಬಂ (ಚಶ) 4 ಸ (ಶ) 5 ಕೆ (ಶ)
6 [illegible] (ಚಶ) 7 ಕ (ಶ) 8 [illegible] (ಶ) 9 [illegible] (ಶ) 10 [illegible] (ಶ)
11 ರಾಜನೃಪನ (ಚ)

ಎರಡನೆಯ ಸಂಧಿ*

ಶ್ರೀರಮಣನ ಪದಕಮಲ ರಂಜಿತ ರತ್ನ | ಧಾಮಾಂಬು ಧಾರಾ ಧೌತ
ತಾಮರಸಾಂಘ್ರಿಯುಗಲ ಶ್ರೀರಂಗನಾಥನು | ಪ್ರೇಮಸುಖವನೀವುದೆಮಗೆ ೧

ಶ್ರೀಮತ್ಪಾರ್ಥಿವ ಭೂವಿಭುಜಲಲಿತಚೂ | ಡಾಮಣಿಯೆನಭಿನವ ಮದನ
ರಾಮಸನ್ನಿಭ ಗುಣಭೂ[1]ಷಿತನೆನಿಸಿದನು | ಧಾಮನುನುಜ್ವಲ ಕೀರ್ತಿಯುತನು ೨

ಆ ಜನಪತಿಗೆ ಸಲಿವ ರಾಣೀವಾಸವು | ರಾಜಬಿಂಬದ ತೇಜದಿಂದ
ರಾಜಿಸ ಕುವಲಯ [1]ನಂದನ[2]ನೆಸೆವ | ಭ್ರಾಜಿಸಿದುದು ಹರುಷದೊಳು ೩

ಅಂಗಣದೊಳಗಾಡುವ ಭೂಮಿಪರ | ಸಂಗನೆಯರ ದಿಟ್ಟಿವೆಳಗು
ನಾಂಗುಡಿಯಿಡಲಿಕ್ಕಿದ ಹೊಸಮುತ್ತಿನ | ರಂಗ[3]ವಲ್ಲಿಯ ತೆಜಸಹುದು ೪

